ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ ಅಕ್ಟೋಬರ್ 2, 1988 ಸಂಪುಟ-10 ಸಂಚಿಕೆ-40 ರೂ. 1-00

ಬೀದರ್ ಘಟನೆ ಜಾತೀವಾದಿಗಳ, ಸ್ವಾರ್ಥಿ ಮುಖಂಡರ ಕೃತ್ಯ

ಅಕಾಲಿದಳವನ್ನು ವಿರೋಧ ಪಕ್ಷಗಳ ರಂಗದಿಂದ ದೂರಮಾಡುವ ಸಂಚು

ಬೀದರ್‌ನಲ್ಲಿ ಇತ್ತೀಚೆಗೆ ನಡೆದ ಭೀಕರ ಹತ್ಯೆ; ಲೂಟಿ, ಶಿವಸೇನೆ, ಆರ್.ಎಸ್.ಎಸ್. ಹಾಗೂ ಬಂಡವಾಳಶಾಹಿ ಪಕ್ಷಗಳಲ್ಲಿಯ ಜಾತಿವಾದಿಗಳೆಲ್ಲ ಸೇರಿ ಎಸಗಿದ ಕೃತ್ಯವಾಗಿದ್ದು ರಾಜ್ಯಕ್ಕೆ ಕಳಂಕ ತರುವ ಘಟನೆಯಾಗಿದೆಯೆಂದು ಸಿ.ಪಿ.ಐ.(ಎಂ) ರಾಜ್ಯಸಮಿತಿ ಅಭಿಪ್ರಾಯ ವ್ಯಕ್ತಪಡಿಸಿದೆ. 6 ಸಿಖ್ ವಿದ್ಯಾರ್ಥಿಗಳ ಕೊಲೆ, ಸಿಖ್ ಜನರ ಮೇಲೆ ಗೂಂಡಾಗಿರಿ, ಲೂಟಿಗಳನ್ನು ಬಲವಾಗಿ ಖಂಡಿಸಿರುವ ರಾಜ್ಯಸಮಿತಿ ಸಿಖ್ ವಿದ್ಯಾರ್ಥಿಗಳು ಹುಡುಗಿಯರನ್ನು ಚುಡಾಯಿಸುತ್ತಿರುವುದರಿಂದ ಉಂಟಾಗಿದ್ದ ಪರಿಸ್ಥಿತಿ ಇದಕ್ಕೆ ಕಾರಣವೆಂಬ ವದಂತಿ ಸರಿಯಲ್ಲ. ಇಂತಹ ಯಾವುದೇ ತಕರಾರು ಪೊಲೀಸ್ ಠಾಣೆಯಲ್ಲಿ ದಾಖಲಾಗಿಲ್ಲವೆಂದು ತಿಳಿದು ಬಂದಿದೆ ಎಂದು ಹೇಳಿದೆ.

ಸೆಪ್ಟೆಂಬರ್ 29 ರಂದು ಸಿ.ಪಿ.ಐ.(ಎಂ) ಕರ್ನಾಟಕ ರಾಜ್ಯಸಮಿತಿ ಪರವಾಗಿ ನಡೆದ ಪತ್ರಿಕಾ ಸಮ್ಮೇಳನದಲ್ಲಿ ಇದನ್ನು ತಿಳಿಸಲಾಯಿತು. ರಾಜ್ಯ ಕಾರ್ಯದರ್ಶಿ ಕಾಂ. ಪಿ. ರಾಮಚಂದ್ರರಾವ್ ಮತ್ತು ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರುಗಳಾದ ಕಾಂ. ಎನ್. ಕೆ. ಉಪಾಧ್ಯಾಯ ಹಾಗೂ ಕಾಂ. ಎಸ್. ಸೂರ್ಯನಾರಾಯಣರಾವ್ ಈ ಪತ್ರಿಕಾ ಸಮ್ಮೇಳನ ಕರೆದಿದ್ದರು.

ದಿಲ್ಲಿ, ಪಂಜಾಬ್, ಹರ್‍ಯಾಣಗಳಲ್ಲಿ ಶಿವಸೇನೆ, ಆರ್.ಎಸ್.ಎಸ್.ಗಳಲ್ಲಿ ಹಿಂದೂ ಪಂಥವಾದಿಗಳ ಜೊತೆ ಸೇರಿ ಸಿಖ್ ಜನರ ಮೇಲೆ ನಡೆಸಿದ ಅಮಾನುಷ ಅತ್ಯಾಚಾರ ಇನ್ನೂ ಮರೆಯಲಾರದಂತಿದೆ. ಬಿ.ಜೆ.ಪಿ.ಯನ್ನು ಬಿಟ್ಟು ವಿರೋಧ ಪಕ್ಷಗಳು ಐಕ್ಯ ಸಾಧಿಸುತ್ತಿರುವಾಗ, ಅಕಾಲಿ ದಳ ಕೂಡ ಅವರ ಜೊತೆ ಸೇರಿ, ಕಾಂಗ್ರೆಸನ್ನು ವಿರೋಧಿಸುವ ಪ್ರಬಲ ರಂಗ ರಚನೆಯಾಗಬಹುದೆಂದು ತಿಳಿದು ಕರ್ನಾಟಕದ ಜನತಾ ಪಕ್ಷದ ಆಡಳಿತೆಯಲ್ಲಿ ಸಿಖ್ಖರಿಗೆ ರಕ್ಷಣೆ ಸಿಗುತ್ತಿಲ್ಲೆಂದು ಅಪಪ್ರಚಾರ ನಡೆಸಿ ಅಕಾಲಿ ದಳವನ್ನು ವಿರೋಧ ಪಕ್ಷಗಳ ರಂಗದಿಂದ ದೂರ ಇಡುವ ಹೊಂಚು ಇದಾಗಿದೆ. ಪಂಜಾಬಿನಲ್ಲಿ ಉಗ್ರವಾದಿ ಸಿಖ್ಖರು ಹಿಂದೂ ಜನರ ಮೇಲೆ ನಡೆಸುತ್ತಿರುವ ಹಿಂಸಾಚಾರಕ್ಕೆ ಪ್ರತಿಯಾಗಿ ಬೀದರಿನಲ್ಲಿ ಸಿಖ್ ಜನರ ಮೇಲೆ ದಬ್ಬಾಳಿಕೆ ನಡೆಸಲಾಯಿತು. ದೇಶದಲ್ಲಿರುವ ಎಲ್ಲಾ ವಿರೋಧ ಪಕ್ಷಗಳ ಸರಕಾರಗಳ ವಿರುದ್ಧ ಸುಳ್ಳು ಪ್ರಚಾರ ಮಾಡಿದರೂ ಏನೇ ಫಲ ದೊರೆಯಲಾರದಾದಾಗ ಜಾತೀಯ ದಂಗೆ ಹಿಂದುಳಿದವರ ಮೇಲೆ ಅಲ್ಪ ಮತಸ್ಥರ ಮೇಲೆ ಅತ್ಯಾಚಾರ ನಡೆಸಿ ಅಂಥ ಸರಕಾರಗಳ ವಿರುದ್ಧ ಪ್ರಕ್ಷೋಭೆ ಏಳುವಂತೆ ಪ್ರಚೋದಿಸುವ ಕ್ರಮರೆನ್ನು ರಾಜೀವ್ ಗಾಂಧಿ ಮತ್ತು ಆಯಾ ರಾಜ್ಯದ ಕಾಂಗ್ರೆಸ್ ಪುಡಾರಿಗಳು ನಡೆಸುತ್ತಿರುವ ಸಂಗತಿ ಬಹಿರಂಗವಾಗಿದೆ. ಶಿವಸೇನ, ಆರ್.ಎಸ್.ಎಸ್ ಜೊತೆ ಸೇರಿ ಕಾಂಗ್ರೆ ಮುಖಂಡರ ಕೈವಾಡವೂ ಈ ಘಟನೆಯಲ್ಲಿದೆಂದು ತಿಳಿದು ಬರುತ್ತದೆ ಎಂದು ಪತ್ರಕರ್ತರನ್ನುದ್ದೇಶಿಸಿ ಮಾತನಾಡಿದ ಕಾಂ. ಪಿ. ರಾಮಚಂದ್ರರಾವ್ ಹೇಳಿದರು.

[8ನೇ ಪುಟಕ್ಕೆ]

ಕಾಂಗ್ರೆ-ಟಿ.ಎನ್.ವಿ. ಪಿತೂರಿ ಬಯಲಿಗೆ

ರಾಜೀವಗಾಂಧಿ ಉತ್ತರಿಸುವರೇ ?

ಈ ಲೇಖನದಲ್ಲಿ ಮೂರು ಪತ್ರಗಳನ್ನು ಪ್ರಕಟಿಸಲಾಗಿದೆ. 1. 27-10-87 ಟಿ. ಎನ್. ವಿ. ಮುಖಂಡ ಬಿಜೊಯ್ ಹ್ರ್ಯಾಂಗ್‌ಖಾವ್ಲ್ ಮಿಜೋರಾಂ ಕಾಂಗ್ರೆ ಮುಖಂಡ ಹಾಗೂ ಮಾಜೀ ಕಾಂಗ್ರೆ ಮುಖ್ಯಮಂತ್ರಿ ಲಾಲ್ಥನ್ ಹಾವ್ಲಾಗೆ ಬರೆದ ಪತ್ರ 2. ಅದೇ ದಿನಾಂಕದ ಅದೇ ಟಿ.ಎನ್.ವಿ. ಮುಖಂಡ ಪ್ರಧಾನ ಮಂತ್ರಿಗಳಿಗೆ ಬರೆದ ಪತ್ರ ಹಾಗೂ 3. 6.12.87 ರಂದು ಲಾಲ್ಥನ್ ಹಾವ್ಲಾರವರು ಹ್ರ್ಯಾಂಗ್ ಖಾವ್ಲ್‌ಗೆ ಬರೆದ ಪತ್ರ.

ಕಾಂಗ್ರೆ ತ್ರಿಪುರಾದಲ್ಲಿ ವಿಧಾನಸಭಾ ಚುನಾವಣೆಯ ಅಧಿಸೂಚನೆ ಪ್ರಕಟಿಸುವ ಮೊದಲೇ ಟಿ.ಎನ್.ವಿ.ಯೊಂದಿಗೆ ಗುಪ್ತ ಮಾತುಕತೆಗಳನ್ನು ಆರಂಭಿಸಿತ್ತು ಎಂದು ನಾವು ಸಂಶಯಪಡುತ್ತಿದ್ದ ಸಂಗತಿ ಪೂರ್ಣ ಸತ್ಯ ಸಂಗತಿಯೆಂದು ಈ ಪತ್ರಗಳಿಂದ ಸಾಬೀತಾಗುತ್ತದೆ.

ಲಾಲ್ಥನ್ ಹಾವ್ಲಾಗೆ ಟಿ.ಎನ್.ವಿ. ಮುಖಂಡ ಬರೆದಪತ್ರದಲ್ಲಿ ರಾಜೀವಗಾಂಧಿಗೂ ಒಂದು ಪ್ರತ್ಯೇಕ ಪತ್ರ ಕಳಿಸಿದ ಬಗ್ಗೆ, ತಾನು ಕಳಿಸಿದ ಪ್ರತಿನಿಧಿಗಳ ರಕ್ಷಣೆಯ ಭಾರ ವಹಿಸಿಕೊಳ್ಳಬೇಕೆಂಬಬಗ್ಗೆ ಬರೆದಿದ್ದ. ಪ್ರಧಾನಮಂತ್ರಿಗೆ ಬರೆದ ಪತ್ರದಲ್ಲಿ ಇದೇ ಟಿ.ಎನ್.ವಿ.ಮುಖಂಡ ತಕ್ಷಣ ತ್ರಿಪುರಾದ ಸಿ.ಪಿ.ಐ.(ಎಂ) ನೇತೃತ್ವದ ಮಂತ್ರಿಮಂಡಳದ ವಿಸರ್ಜನೆ ಮಾಡಬೇಕು ಮತ್ತು ಯುದ್ಧ ವಿರಾಮ ಘೋಷಿಸಬೇಕು ಎಂಬೆರಡು ಶರತ್ತುಗಳ ಮೇಲೆ ತ್ರಿಪುರಾದ ಸಮಸ್ಯೆಗಳನ್ನು ಭಾರತೀಯ ಸಂವಿಧಾನದ ಚೌಕಟ್ಟಿನಲ್ಲಿ ಪರಿಹರಿಸಲು ತಾನು ಸಿದ್ಧ; ಇಲ್ಲವಾದರೆ ಇದರ ಪರಿಣಾಮದ ಜವಾಬ್ದಾರಿ ರಾಜೀವಗಾಂಧಿಯದ್ದು ಎಂದು ಹೇಳಿದ್ದ.

ಡಿಸೆಂಬರ್ 6ರಂದು ಮಿಜೋರಾಂ ಕಾಂಗ್ರೆಮುಖಂಡ ಪ್ರಧಾನಮಂತ್ರಿಯನ್ನು ಭೇಟಿ ಮಾಡಿ, ಇಬ್ಬರೂ ತ್ರಿಪುರಾಗೆ ಭೇಟಿಯಿತ್ತು ಬಂದ ಮೇಲೆ ಬರೆದ ಉತ್ತರದಲ್ಲಿ

(8ನೇ ಪುಟಕ್ಕೆ)

ಆರೆಸ್ಸೆಸ್ ಮೇಲೆ ದಬ್ಬಾಳಿಕೆಯ ಬುರುಡೆ

ಘರ್ಷಣೆಗಳಿಗೆ ಆರೆಸ್ಸೆಸ್ ಹತಾಶೆ ಕಾರಣ

—ಇ.ಎಂ.ಎಸ್. ನಂಬೂದಿರಿಪಾದ್

ಆರೆಸ್ಸೆಸ್‌ನ ಪ್ರಚಾರವನ್ನು ಕಣ್ಣು ಮುಚ್ಚಿ ಒಪ್ಪಿಕೊಳ್ಳುವ ನಮ್ಮ ದೇಶದ ಪತ್ರಿಕೆಗಳನ್ನು ಕಂಡರೆ ಆಶ್ಚರ್ಯವಾಗುತ್ತದೆ. ಕೇರಳದಲ್ಲಿ ಸಿ.ಪಿ.ಎಂ. 'ತೋಳ' ಆರೆಸ್ಸೆಸ್ ಗಾಂಧಿವಾದಿ 'ಕುರಿ' ಮೇಲೆ ಎರಗುತ್ತಿದೆ ಎಂದು ಆರೆಸ್ಸೆಸ್ ಪ್ರಚಾರ. ಸಿಪಿಎಂ ನ ಜನಬೆಂಬಲ ಆರೆಸ್ಸೆಸ್ ಪ್ರಭಾವದಿಂದ ಕರಗುತ್ತಿದೆ ಮತ್ತು ಅದರಿಂದಾಗಿ ಆರೆಸ್ಸೆಸ್‌ನ ಮೇಲೆ ಸಿಪಿಎಂ ಆಕ್ರಮಣ ಮಾಡುತ್ತಿದೆ ಎಂಬ ಆರೆಸ್ಸೆಸ್‌ನ ಕಂತೆ ಪುರಾಣ ಈ ಪತ್ರಿಕೆಗಳಿಗೆ ವೇದವಾಕ್ಯ.

ಇವರೆಲ್ಲಾ ಒಂದು ಸಣ್ಣ ವಿಷಯ ಮರೆಯುತ್ತಾರೆ. ಕೇರಳದಲ್ಲಿ ಕಮ್ಯುನಿಸ್ಟರು ಕೆಲಸ ಮಾಡಲಾರಂಭಿಸಿದ ಸಮಯಕ್ಕೆ ಆರೆಸ್ಸೆಸ್ ಕೆಲಸ ಮಾಡಲು ಆರಂಭಿಸಿತು. ಇಂದು ಸಿಪಿಎಂ ರಾಜ್ಯದ ಅತಿ ದೊಡ್ಡ ರಾಜಕೀಯ ಶಕ್ತಿಯಾಗಿ ಬೆಳೆದಿದ್ದರೆ ಆರೆಸ್ಸೆಸ್ ಒಂದು ಸಣ್ಣ ಶಕ್ತಿಯಾಗಿದೆ. ಉಳಿದ ಎಡ, ಜಾತ್ಯಾತೀತ ಪ್ರಜಾಸತ್ತಾತ್ಮಕ ಶಕ್ತಿಗಳ ಜತೆ ಸೇರಿ ಸಿಪಿಎಂ ರಾಜ್ಯದ ಶೇಕಡಾ 50 ಕ್ಕಿಂತಲೂ ಹೆಚ್ಚಿಗೆ ಜನಬೆಂಬಲ ಪಡೆದಿದೆ. ಲಕ್ಷಾಂತರ ದುಡಿಯುವ ಜನರ ಸಮರಶೀಲ ಸಂಘಟನೆಯ ನಾಯಕತ್ವವನ್ನ ಸಿಪಿಎಂ ವಹಿಸಿದೆ. ಇಂತಹ ಪ್ರಬಲ ಜನಬೆಂಬಲ ಪಡೆದಿರುವ ಪಕ್ಷ ಯಾವುದೇ ಜನಬೆಂಬಲವಿಲ್ಲದ ಪುಟ್ಟ ರಾಜಕೀಯ ಶಕ್ತಿಯ ವಿರುದ್ಧ ಕೊಲೆ ರಾಜಕೀಯ ನಡೆಸುವ ಅಗತ್ಯವೇನಿದೆ ?

ಕಮ್ಯೂನಿಸ್ಟ್-ವಿರೋಧಿ, ಅಲ್ಪಸಂಖ್ಯಾತ ವಿರೋಧಿ

ಆರೆಸ್ಸೆಸ್‌ನ ಮೇಲೆ ಸಿ. ಪಿ. ಎಂ.ನ 'ಆಕ್ರಮಣ'ದ ಬಗ್ಗೆ ಪುಟಗಟ್ಟಲೆ ಬರಯುವ ಪತ್ರಕರ್ತರು ಆರೆಸ್ಸೆಸ್ ತನ್ನ 'ಬೆಳವಣಿಗೆ' ಬಗ್ಗೆ ಪ್ರಚಾರ ಪುಸ್ತಕಗಳನು ಅಧ್ಯಯನ ಮಾಡಿದರೆ ಆ ಸಂಘಟನೆಯ ಸ್ವಭಾವದ ಬಗ್ಗೆ ಗೊತ್ತಾಗುತ್ತದೆ. ಆರೆಸ್ಸೆಸ್ ತನ್ನ 'ಪ್ರಭಾವ'ವನ್ನು ಅಳೆಯುವುದು ಅದು ಸಂಘಟಿಸುವ ಶಾಖೆಗಳ ಆಧಾರದ ಮೇಲೆ. ಆದರೆ ಸಿಪಿಎಂ ತನ್ನ ಬಲ ಅಳೆಯುವುದು ಪಕ್ಷದ ಸದಸ್ಯರ ಸಂಖ್ಯೆ, ಪಕ್ಷದ ನಾಯಕತ್ವದಲ್ಲಿರು ಸಾಮೂಹಿಕ ಸಂಘಟನೆಗಳ ಸದಸ್ಯತ್ವ, ಪಕ್ಷದ ಪತ್ರಿಕೆ ಮತ್ತಿತರ ಪ್ರಚಾರ ಸಾಹಿತ್ಯಗಳ ಮಾರಾಟ, ಪಕ್ಷ ಮತ್ತು ಅದರ ಸಾಮೂಹಿಕ ಸಂಘಟನೆಗಳು ಸಂಗ್ರಹಿಸುವ ನಿಧಿ ಮತ್ತು ಪಕ್ಷ ಗಳಿಸುವ ಮತ ಇವುಗಳೆಲ್ಲದರ ಹೆಚ್ಚಳದ ಮೇಲೆ.

ಆರೆಸ್ಸೆಸ್‌ನಲ್ಲಿ ಶಾಖೆಗಳೆಂದರೇನು ? ಆರೆಸ್ಸೆಸ್ ಶಾಖೆಗಳು ತಮ್ಮನ್ನು ಸ್ವಯಂ ಸೇವಕರೆಂದು ಕರೆದುಕೊಳ್ಳುವ ಯುವಕ ಯುವತಿಯರು ದಿನಾ ನೆರೆಯುವ ಕೂಟ.

[8ನೇ ಪುಟಕ್ಕೆ]

ಸೆ. 26 ವಿದ್ಯಾರ್ಥಿ-ಯುವಜನ ಮುಷ್ಕರ ಯಶಸ್ವಿ

ಕೇಂದ್ರದ ರಾಜೀವ್ ಗಾಂಧಿ ಸರ್ಕಾರ ಬೋಫೋರ್ಸ್, ಫೇರ್‌ಫಾಕ್ಸ್ ಮುಂತಾದ ಭ್ರಷ್ಟಾಚಾರ ಹಗರಣಗಳಲ್ಲಿ ಕೋಟ್ಯಾಂತರ ಹಾಲು ಜನತೆಯ ಹಣವನ್ನು ಲೂಟಿ ಹೊಡೆದಿದೆ. ವಿದೇಶಿ ಸಾಲದ ಹೊರೆಯನ್ನು ಜನತೆಯ ಮೇಲೆ ಹೊರಿಸಿದೆ. 50 ಕೋಟಿ ಅನಕ್ಷರತೆ 10 ಕೋಟಿ ನಿರುದ್ಯೋಗ ಒಂದೂವರೆ ಲಕ್ಷ ಕಾರ್ಖಾನೆಗಳು ಶಾಶ್ವತ ಬೀಗಮುದ್ರೆ ಘೋಷಿಸಿ ಬಹುರಾಷ್ಟ್ರೀಯ ಕಂಪನಿಗಳಿಗೆ ಮುಕ್ತದ್ವಾರ ತೆರೆದಿದೆ. ಛಿದ್ರಕಾರಿ-ಕೋಮುವಾದಿ ಶಕ್ತಿಗಳೊಂದಿಗೆ ಸಮಯ ಸಾಧಕ ಮೈತ್ರಿಯಿಂದ ರಾಷ್ಟ್ರೀಯ ಸಮಗ್ರತೆ ಐಕ್ಯತೆಗೆ ಗಂಡಾಂತರಕಾರಿಯಾಗಿದೆ. ಮಾನಹಾನಿಮಸೂದೆ-ಆಸ್ಪತ್ರೆ ಶಿಕ್ಷಣಸಂಸ್ಥೆ ಮಸೂದೆ, ಸಂವಿಧಾನದ 59ನೇ ತಿದ್ದುಪಡಿ, ಹೊಸ ಕೈಗಾರಿಕಾ ಮಸೂದೆಗಳಂತಹ ಕರಾಳ ಮಸೂದೆಗಳ ಮೂಲಕ ಜನತೆಯನ್ನು ತುರ್ತು ಪರಿಸ್ಥಿತಿಯ ಕರಾಳ ದಿನಗಳನ್ನು ನೆನಪಿಸುವ ಸರ್ವಾಧಿಕಾರಿ ಆಡಳಿತದೆಡೆಗೆ ಸಾಗುತ್ತಿದೆ. ಜನವಿರೋಧಿ ರಾಜೀವ್ ಗಾಂಧಿ ಸರ್ಕಾರದ ನೀತಿಗಳ ವಿರುದ್ಧ ರಾಷ್ಟ್ರವ್ಯಾಪಿ ವಿದ್ಯಾರ್ಥಿ-ಯುವಜನರ ಮುಷ್ಕರ ನಡೆಸಲು ನೀಡಿದ ಕರೆಯಂತೆ ಕರ್ನಾಟಕ ರಾಜ್ಯಾದ್ಯಂತ 18 ಪ್ರಮುಖ ಬೇಡಿಕೆಗಳನ್ನು ಮುಂದಿಟ್ಟು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಹಾಗೂ ಯುವಜನತಾ ಸಂಘಟನೆಗಳು ಜಂಟಿಯಾಗಿ ಸೆಪ್ಟೆಂಬರ್ 26 ರಂದು ವಿದ್ಯಾರ್ಥಿ-ಯುವಜನರ ಪ್ರತಿಭಟನಾ ಪ್ರದರ್ಶನ ಮೆರವಣಿಗೆ ರಸ್ತೆತಡೆ, ಭೂತದಹನ ನಡೆಸಿದ ವರದಿಗಳು ಬಂದಿವೆ.

ಬೆಂಗಳೂರು

ಸೆ. 26 ರಂದು ನಗರದ ಚಿಕ್ಕಲಾಲ್‌ಬಾಗ್‌ನಿಂದ ಹೊರಟ ಎಸ್.ಎಫ್.ಐ. ಮತ್ತು ಯುವಜನತಾದ ನೂರಾರು ವಿದ್ಯಾರ್ಥಿ ಯುವಜನರು ರಾಜೀವ್‌ಗಾಂಧಿ ಸರ್ಕಾರದ ಜನವಿರೋಧಿ ನೀತಿಗಳ ವಿರುದ್ಧ ಘೋಷಣೆ ಕೂಗುತ್ತಾ ಸಮಸ್ಯೆಗಳ

(8ನೇ ಪುಟಕ್ಕೆ)

ಪತ್ರಿಕೆಗಳಲ್ಲಿ

ಕಮ್ಯುನಿಸ್ಟರ ಪಾಲಿಗೆ ಐದೂ ಚಿನ್ನ

ಪ್ರಜಾವಾಣಿ 19-9-88

ಒಲಿಂಪಿಕ್ ಕ್ರೀಡಾ ಕೂಟದ ಎರಡನೇ ದಿನವಾದ ಭಾನುವಾರ ಪಣಕ್ಕಿದ್ದ ಐದು ಚಿನ್ನದ ಪದಕಗಳನ್ನು ಕಮ್ಯೂನಿಸ್ಟ್ ರಾಷ್ಟ್ರಗಳು ಬಾಚಿಕೊಂಡವು.

ಮಹಿಳೆಯರ ಏರ್‌ರೈಫಲ್ ಷೂಟಿಂಗ್ ಸ್ಪರ್ಧೆಯಲ್ಲಿ ಗೆದ್ದ ಸೋವಿಯತ್ ಒಕ್ಕೂಟದ ರಿನಚಿಲೋವ ಸೋಲ್ ಕ್ರೀಡಾಕೂಟದ ಪ್ರಥಮ ಚಿನ್ನಕ್ಕೆ ಪಾತ್ರರಾದರು. ಮಹಿಳೆಯರ ಹೈಬೋರ್ಡ್ ಡೈವಿಂಗ್ ಸ್ಪರ್ಧೆಯಲ್ಲಿ ಚೀನಾದ ಸುಯಾನ್ನಿ ಅಮೇರಿಕದ ವೈಕೆಲಿ ವಿಚೆಲ್ ಅವರನ್ನು ಸೋಲಿಸಿದರೆ.ಪುರುಷರ ಫ್ರೀ ಪಿಸ್ತೂಲ್ ಸ್ಪರ್ಧೆಯಲ್ಲಿ ರುಮೇನಿಯಾದ ಸೋರಿನ್‌ಬಾಬಿ ಚಿನ್ನ ಗಳಿಸಿದರು. ಪೂರ್ವ ಜರ್ಮನಿಯ ಪುರುಷರ ಟೀಮ್ ಟೈಮ್ ಟ್ರಯಲ್ ಸೈಕ್ಲಿಂಗ್‌ನಲ್ಲಿ ವಿಶ್ವದಾಖಲೆ ಸ್ಥಾಪಿಸಿ ಚಿನ್ನ ಗಳಿಸಿತು.

120 ಕಿಲೊಗ್ರಾಂ ಸ್ನ್ಯಾಚ್ ಮತ್ತು 150 ಕಿ.ಗ್ರಾಂ ಜರ್ಕನಲ್ಲಿ ಬಲ್ಗೇರಿಯಾದ ಸ್ಟೆಫಲಿನ್ ಮರಿನೊವಾ ಅವರು ಚೀನಾದ ಜುಕಿಯಾಂಗ್ ಅವರನ್ನು ಸೋಲಿಸಿ ಚಿನ್ನದ ಪದಕ ಪಡೆದರು.

ಸೋವಿಯತ್‌ಗೆ ಪದಕಗಳ ಶತಕ

ಪ್ರಜಾವಾಣಿ 1-10-88

ಸೋವಿಯೆತ್ ಒಕ್ಕೂಟದವರು ಒಲಿಂಪಿಕ್ ಕ್ರೀಡಾ ಕೂಟದಲ್ಲಿ ಇನ್ನೂ ಎರಡು ದಿನಗಳ ಸ್ಪರ್ಧೆ ಇರುವಾಗಲೇ ಪದಕಗಳ ಶತಕ ದಾಟಿದ್ದಾರೆ.

ಪುರುಷರ ಬ್ಯಾಸ್ಕೆಟ್‌ಬಾಲ್ ಚಿನ್ನದ ಪದಕ ಗೆದ್ದ ಸೋವಿಯೆತ್ 50 ಕಿಲೋಮೀಟರ್ ದೂರದ ನಡಿಗೆ ಸ್ಪರ್ಧೆಯಲ್ಲಿ 27 ವರ್ಷದ ಶಿಕ್ಷಕ ವಿಯಾಚೆಸ್ಲಾವ್ ಇವನೆಂಕೊ ಅವರ ಮೂಲಕ ಚಿನ್ನ ಗಳಿಸಿತು.

ಈಗ 55 ಚಿನ್ನದ ಪದಕಗಳನ್ನು ಸೇರಿ 127 ಪದಕಗಳನ್ನು ಬುಟ್ಟಿಗೆ ಹಾಕಿಕೊಂಡಿರುವ ಸೋವಿಯೆತ್ ಒಕ್ಕೂಟದವರು ಪದಕಗಳ ಪಟ್ಟಿಯಲ್ಲಿ ಅಗ್ರಸ್ಥಾನ ಅಲಂಕರಿಸಿದ್ದಾರೆ.

37 ಚಿನ್ನದ ಪದಕಗಳೊಡನೆ ಒಟ್ಟು ಪದಕಗಳ ಮೊತ್ತವನ್ನು 102ಕ್ಕೆ ಏರಿಸಿರುವ ಪೂರ್ವ ಬಣದ ಮತ್ತೊಂದು ರಾಷ್ಟ್ರವಾದ ಪೂರ್ವಜರ್ಮನಿ ದ್ವಿತೀಯ ಸ್ಥಾನದಲ್ಲಿದೆ. 36 ಚಿನ್ನದ ಪದಕಗಳನ್ನು ಗಳಿಸಿರುವ ಅಮೇರಿಕ ಮೂರನೇ ಸ್ಥಾನದಲ್ಲಿದೆ.

ಕಾರ್ಲ್ ಲೂಯಿಸ್ ಅವರಿಗೆ 3ನೇ ಚಿನ್ನದ ಅವಕಾಶ ಇಂದು ತಪ್ಪಿತು. 4X100 ಮೀಟರ್ಸ್ ರಿಲೆ ಹೀಟ್ಸ್‌ನಲ್ಲಿ ಅಮೇರಿಕ ಇಂದು ಅಗ್ರಸ್ಥಾನ ಗಳಿಸಿತಾದರೂ ಬೇಟನ್ ಬದಲಾಯಿಸುವಾಗ ನಿಯಮ ಉಲ್ಲಂಘಿಸಿದುದಕ್ಕಾಗಿ ಅನರ್ಹಗೊಂಡಿತು.

ಚೆಕೋಸ್ಲೊವಾಕಿಯಾದ ಮಿಲೊಸ್ಲಾವ್ ಮೆಸಿರ್ ಅವರು 94 ವರ್ಷಗಳ ನಂತರ ಒಲಿಂಪಿಕ್ಸ್‌ಗೆ ಮರಳಿ ಬಂದ ಟೆನಿಸ್‌ನ ಮೊದಲ ಬಂಗಾರದ ಪದಕ ಪಡೆದರು.

ಮುಕ್ತಾಯಗೊಂಡ ಸೋಲ್ ಒಲಂಪಿಕ್ಸ್‌ನಲ್ಲಿ ವಿವಿಧ ರಾಷ್ಟ್ರಗಳು ಗಳಿಸಿದ ಪದಕಗಳ ವಿವರ

ರಾಷ್ಟ್ರಗಳು	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಸೋವಿಯತ್ ರಷ್ಯಾ	55	31	46	132
ಪೂರ್ವ ಜರ್ಮನಿ	37	35	30	102
ಅಮೇರಿಕಾ	36	31	27	94
ಪಶ್ಚಿಮ ಜರ್ಮನಿ	11	14	15	40
ಹಂಗೇರಿ	11	6	7	24
ಬಲ್ಗೇರಿಯಾ	10	12	13	35
ದಕ್ಷಿಣ ಕೊರಿಯಾ	12	10	11	33
ರುಮೇನಿಯಾ	7	11	6	24
ಚೀನಾ	5	11	12	28
ಬ್ರಿಟನ್	5	10	9	24
ಫ್ರಾನ್ಸ್	6	4	6	16
ಕೀನ್ಯಾ	5	1	2	8
ಇಟಲಿ	6	4	4	12
ಜಪಾನ್	4	3	7	14
ಆಸ್ಟ್ರೇಲಿಯಾ	3	6	5	14
ಯುಗೋಸ್ಲಾವಿಯಾ	3	4	4	11
ಜೆಕೋಸ್ಲಾವಕಿಯಾ	3	3	2	8
ನ್ಯೂಜಿಲ್ಯಾಂಡ್	3	2	8	13
ಪೋಲೆಂಡ್	2	5	9	16
ನಾರ್ವೆ	2	3	0	5
ನೆದರ್‌ಲ್ಯಾಂಡ್ಸ್	2	2	5	9
ಕೆನಡಾ	3	2	5	10
ಡೆನ್ಮಾರ್ಕ್	2	1	1	4
ಬ್ರೆಜಿಲ್	1	2	3	6
ಸ್ಪೈನ್	1	1	2	4
ಫಿನ್‌ಲ್ಯಾಂಡ್	1	1	2	4
ಟರ್ಕಿ	1	1	0	2
ಮೊರಕ್ಕೋ	1	0	1	2
ಆಸ್ಟ್ರಿಯಾ	1	0	0	1
ಪೋರ್ಚುಗಲ್	1	0	0	1
ಸುರಿನಾಮ್	1	0	0	1
ಸ್ವೀಡನ್	1	0	0	1
ಸ್ವಿಟ್ಜರ್‌ಲ್ಯಾಂಡ್	0	4	6	10
ಮಂಗೋಲಿಯಾ	0	2	2	4
ಪಾಕಿಸ್ತಾನ	0	0	1	1
ಫಿಲಿಪ್ಪೀನ್ಸ್	0	0	1	1

ಅಪಾಯಕಾರಿ "ಕೈಗಾ ಚಲೋ"

'ಕೈಗಾ ಸ್ಥಾವರ ಕೈಬಿಡಿ' ಎಂಬ ಘೋಷಣೆಯೊಂದಿಗೆ ಕೈಗಾ ಹಾಗೂ ಕಾರವಾರದ ಆಸುಪಾಸಿನ ಹಳ್ಳಿಗಳಲ್ಲಿ ಬೃಹತ್ ಜನಮೇಳ ಸಂಘಟಿಸುವುದಾಗಿ 'ಕೈಗಾಚಲೋ' ಕ್ರಿಯಾ ಸಮಿತಿ ಪತ್ರಿಕಾ ಹೇಳಿಕೆಗಳಲ್ಲಿ ಕೊಚ್ಚಿಕೊಂಡಿದೆ.

ಅಣುಶಕ್ತಿಯನ್ನು ಮಣಿಸಲು ಜನಶಕ್ತಿ ಒಂದಾಗಿ ಬರಬೇಕು ಎಂದು ಹೇಳುತ್ತಲೇ ಈ ಕೈಗಾ ವಿರೋಧವಾದ ದನಿಯನ್ನು ಹುಟ್ಟು ಹಾಕಿರುವ ಈ ಸಂಸ್ಥೆ ತನ್ನ ಪ್ರಕಟಣೆಯಲ್ಲಿ ತನ್ನ ಈ ಕಾರ್ಯಕ್ರಮಕ್ಕೆ ನೂರಾರು ಸ್ವಯಂ ಸೇವಾ ಸಂಸ್ಥೆಗಳ ಬೆಂಬಲ ಇದೆ ಎಂಬುದನ್ನು ಹೇಳುತ್ತಾ ಇರುವುದು ಕೈಗಾ ವಿರೋಧಿಸಲು ಹೊರಟಿರುವವರು ಸ್ವಯಂ ಸೇವಾ ಸಂಸ್ಥೆಗಳು ಮಾತ್ರ ಎಂಬುದನ್ನು ಎತ್ತಿತೋರಿಸುತ್ತದೆ.

ಪಶ್ಚಿಮ ಘಟ್ಟದ ಕೈಗಾದಲ್ಲಿ ಅಣುಶಕ್ತಿ ಉತ್ಪಾದಿಸಲು ಕೇಂದ್ರ ಸರ್ಕಾರ ಯೋಜನೆಯನ್ನು ಮುಂದಿಟ್ಟಾಗ ಸುಮ್ಮನೆ ಇದ್ದ ಈ ಸೇವಾಸಂಸ್ಥೆಗಳು ನಂತರ ಒಂದರ ಹಿಂದೆ ಒಂದರಂತೆ ನಾಯಿಕೊಡೆಗಳಂತೆ ಹಬ್ಬಲು ತೊಡಗಿದಾಗ ಕೈಗಾ ವಿರುದ್ಧ ಬಲವಾದ ಕೂಗು ಹಾಕುತ್ತಿವೆ.

ಕೈಗಾ ಮೇಳದ ಇನ್ನೊಂದು ಮುಖ್ಯ ಘೋಷಣೆ ಅಣುಸ್ಥಾವರ ನಿರ್ಮಾಣಕ್ಕೆ ಸ್ಥಳೀಯರ ಘನಗಂಭೀರ ವಿರೋಧ ಇದೆಯೆಂದು ತೋರಿಸುವುದು. ಕೇವಲ ಪತ್ರಿಕೆಗಳ ಮೂಲಕ ಕೈಗಾ ಅಣುಸ್ಥಾವರ ವಿರುದ್ಧದ ಹೋರಾಟಕ್ಕೆ ನಮಗೆ ಸ್ಥಳೀಯರ ಬೆಂಬಲ ಇದೆಯೆಂಬ ಈ ಸೇವಾ ಸಂಘಗಳು ಕೊಚ್ಚಿಕೊಳ್ಳುತ್ತಿವೆ.

ಆದರೆ, ಕೈಗಾ ಸುತ್ತಮುತ್ತಲ ಹಳ್ಳಿಗಳೇ ಅಲ್ಲದೆ ಮುಖ್ಯವಾಗಿ ಕೈಗಾದಲ್ಲೂ ಸಂಚರಿಸಿದ ನಮಗೆ ಎಲ್ಲಿಯಕೂ ಹಳ್ಳಿಯವರು ಕೈಗಾ ಜನರು ಈ ಹೋರಾಟಕ್ಕೆ ಬೆಂಬಲ ನೀಡಿರುವ ಅಂಶ ಕಂಡು ಬರಲಿಲ್ಲ. 'ಕೈಗಾದ ಕಾಡಿಗೆ ಅಣುಶಕ್ತಿ ಎಂದೂ ಕಾಲಿಡಕೂಡದೆಂದು ಕೂಗಿ ಹೇಳಲು' ಎಂದು ಘೋಷಿಸಿಕೊಂಡಿರುವ ಈ ಸಂಸ್ಥೆಗಳ ಕೂಗು ಕೈಗಾದಲ್ಲಿ ಕೇವಲ ಅರಣ್ಯ ರೋಧನ ಮಾತ್ರ. ಕೈಗಾದಲ್ಲಿ ಅಣುಸ್ಥಾವರದ ಪ್ರಾರಂಭಿಕ ಚಟುವಟಿಕೆಗಳು ನಡೆದಾಗಲೂ ಯಾವುದೇ ಮೂಲೆಯಿಂದ ಇಲ್ಲಿ ವಿರೋಧದ ಕೂಗು ಬಂದಿಲ್ಲ. ಬದಲಿಗೆ ಹಳ್ಳಿಗೆ ರಸ್ತೆ, ಆಸ್ಪತ್ರೆ, ಬೆಳಕು ಹಾಗೂ ಬದುಕನ್ನು ಒದಗಿಸುವ ಈ ಹೊಸ ಯೋಜನೆಯನ್ನು ಈ ಜನರು ಸ್ವಾಗತಿಸಿದ್ದಾರೆ.

ಹಿಂದೆ ಕೈಗಾದ ಜನರು ಊರಿನ ಯಾರಿಗಾದರೂ ಸಣ್ಣ ಕಾಯಿಲೆಯಾದರೂ ಆಸ್ಪತ್ರೆಗಾಗಿ ಊರೂರು ದಾಟಬೇಕಾಗಿತ್ತಲ್ಲದೆ, ರಸ್ತೆ ಸಂಪರ್ಕವಿಲ್ಲದೆ ಕಾಡುಕೊಳ್ಳಗಳನ್ನು ದಾಟಬೇಕಿತ್ತು. ಸದ್ಯದಲ್ಲಿ ಕತ್ತಲಲ್ಲಿ ಮುಳುಗಿರುವ ಕರ್ನಾಟಕಕ್ಕೆ ಕೈಗಾ ಅಣುಸ್ಥಾವರವೇ ಬದಲಿ ಎಂಬುದು ಡಾಣಾಡಂಗೂರವಾಗಿದ್ದರೂ ಈ ಸ್ವಯಂಸೇವಾ ಸಂಸ್ಥೆಗಳು ಕರ್ನಾಟಕವನ್ನು ಮುಂದೊಯ್ಯುವ, ಹಲವರ ಬದುಕನ್ನು ಬೆಳಗಿಸುವ ಪ್ರಗತಿಪರ ಯೋಜನೆಗಳಿಗೆ ಕಲ್ಲು ಹಾಕಲು ಸಜ್ಜಾಗಿದ್ದಾರೆ.

ರಾಷ್ಟ್ರೀಯ ಚರ್ಚೆ ನಡೆಯುವವರೆಗೂ ಎಲ್ಲಾ ಅಣುಸ್ಥಾವರದ ನಿರ್ಮಾಣಗಳನ್ನು ಕೈಬಿಡಿರಿ ಎಂದು ಕ್ರಿಯಾ ಸಮಿತಿ ಕರೆ ನೀಡಿದೆ. ಕುಟುಂಬ ಯೋಜನೆಗಳ ನಮ್ಮ ಕಾರ್ಯವಿಧಾನಗಳು ಬಗೆ ಹರಿಯುವುದು ಯಾವಾಗ' ಎನ್ನುವುದು ಎಲ್ಲರಿಗೂ ತಿಳಿದಿದೆ. ಅಂತಹವರೆಗೂ ಅಣುಸ್ಥಾವರ ಬೇಡ. ಬೆಳಕು ಬೇಡ, ಕೈಗಾರಿಕೆ ಬೇಡ ಎಂಬುದು ಈ ಘೋಷಣೆಯ ಒಳಾರ್ಥ.

ಕೈಗಾ ಕ್ರಿಯಾಸಮಿತಿಯಲ್ಲಿ ಇರುವ ಸಂಘಟನೆಗಳನ್ನು ನೋಡಿದರೆ ಈ ಕೈಗಾವಿರೋಧದ ನಿಜಹೂರಣ ಬಯಲಿಗೆ ಬಂದು ಬೀಳುತ್ತದೆ. ಅವಿನಾಶ, ಸಮಗ್ರ ವಿಕಾಸ, ಗಾಂಧಿಶಾಂಗ ಪ್ರತಿಷ್ಠಾನ, ಸಮಾಜ ಪರಿವರ್ತನ ಸಮುದಾಯ. ಸ್ನೇಹಕುಂಜ, ಪ್ರಲಾಭ, ವೃಕ್ಷ ಲಕ್ಷ ಆಂದೋಲ ಈ ಎಲ್ಲಾ ಸಂಸ್ಥೆಗಳು ವಿದೇಶದ ಒಂದಲ್ಲ ಒಂದು ಸಂಸ್ಥೆಯೊಡನೆ ಕೈಕುಲುಕಿದ್ದು ಅಲ್ಲಿಂದ ಹಣದ ಹೊಳೆ ಇಲ್ಲಿಗೆ ಹರಿಯುತ್ತಿರುವುದು ಎದ್ದು ಕಾಣುವ ಅಂಶ.

ಈ ಹಿಂದೆ ಐಕ್ಯರಂಗದಲ್ಲಿ ನಾಯಿಕೊಡೆಗಳಂತೆ ಬೆಳೆಯುತ್ತಿರುವ ಈ ಸ್ವಯಂಸೇವಾ ಸಂಸ್ಥೆಗಳೆಂಬ ಠಣಹದ್ದುಗಳ ಬಗ್ಗೆ ಮತ್ತು ಪ್ರಗತಿಪರ ಹೆಸರಿನಡಿಯಲ್ಲಿ ಪ್ರಗತಿಪರ ಸಂಘಟನೆಗಳ ಕಾರ್ಯಕ್ರಮಗಳಿಗೆ ಪೆಟ್ಟು ನೀಡುವ ಅಂಶವನ್ನು ಬರೆಯಲಾಗಿತ್ತು. ಸಾಹಿತ್ಯ, ರಂಗಭೂಮಿ ಎಲ್ಲ ಕ್ಷೇತ್ರಗಳಲ್ಲಿಯೂ ಇವರು ಹಂಚಿಕೊಂಡಿರುವುದನ್ನು ಬೇರೆ ಬೇರೆ ಪತ್ರಿಕೆಗಳು ಎಚ್ಚರಿಸುತ್ತಲೇ ಬಂದಿವೆ.

ಸಹಾಯ-ಸಹಕಾರ ಎಂಬ ಹೆಸರಿನೊಂದಿಗೆ ಇವರು ಇಡೀ ರಾಷ್ಟ್ರದ ಪರಿಸ್ಥಿತಿಯಅಲ್ಲೋಲ ಕಲ್ಲೋಲಕ್ಕೆ ಹೇಗೆ ಕಾರಣವಾಗುತ್ತಾರೆ ಎಂಬ ಒಂದು ಉದಾಹರಣೆ ಐಕ್ಯರಂಗದ ಇದೇ ಸಂಚಿಕೆಯ 'ವಿದೇಶೀ ಆಹಾರ ನೆರವಿನ ಹಿಂದಿನ ನಾಟಕ' ಲೇಖನದಲ್ಲಿದೆ.

'ಪರಿಸರ' ಈ ಎಲ್ಲಾ ಸೇವಾ ಸಂಸ್ಥೆಗಳ ನೇರಗುರಿ. ಪರಿಸರ ಮತ್ತು ಬುಡಕಟ್ಟಿನ ಜನರಲ್ಲಿ ಕೆಲಸ ಮಾಡುವ ಇವರ ಯೋಜನೆ ಅತ್ಯಂತ ಪ್ರಗತಿ ಪರವಾಗಿ ಕಂಡರೂ ಆ ಬೆನ್ನಲ್ಲೇ ಇವರ ವಿಚ್ಛಿದ್ರಕಾರಕೂನ ಎದ್ದು ಕಾಣುತ್ತದೆ.

'ಕರ್ನಾಟಕ ಈ ಸ್ವಯಂಸೇವಾ ಸಂಸ್ಥೆಗಳ ಕಣಜ' ಎಂದು ಈ ಹಿಂದೆಯೇ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪಾಲಿಟ್‌ಬ್ಯೂರೋ ಎಚ್ಚರಿಸಿತ್ತು. ಕರ್ನಾಟಕದಲ್ಲಿ ಈ ವಿಚ್ಛಿದ್ರಕಾರಿ ಸ್ವಯಂಸೇವಾ ಸಂಸ್ಥೆಗಳು ಹರಡುತ್ತಿರುವ ವೇಗ ಹಾಗೂ ವಿಸ್ತಾರವನ್ನು ಕೂಡಲೇ ಗಮನಕ್ಕೆ ತೆಗೆದುಕೊಳ್ಳಬೇಕೆಂಬ ಎಚ್ಚರಿಕೆ 'ಕೈಗಾ ಚಲೋ' ಬೆನ್ನಿಗಿದೆ.

ಆಕರ್ಷಕ ಘೋಷಣೆ, ಆಕರ್ಷಕ ಕಾರ್ಯಕ್ರಮಗಳೊಂದಿಗೆ ಮುನ್ನುಗ್ಗುತ್ತಿರುವ ಅವಿನಾಶ ಎಂದು ಕರೆನುಕೊಳ್ಳುವ 'ಅಣು ವಿರೋಧಿ ನಾಗರಿಕಶಕ್ತಿ' ಈ ಯೋಜನೆಯಲ್ಲಿ 'ಇನ್ನಿಲ್ಲದಂತೆ ತೊಡಗಿದ್ದು ಸಾಮ್ರಾಜ್ಯಶಾಹಿ ಮನೊಭಾವನೆಯ ಪ್ರತಿರೂಪಗಳು ಹರಡಲು ಕಾರಣವಾಗುತ್ತಿದೆ. ಗಾಂಧಿಸೇವಾ ಪ್ರತಿಷ್ಠಾನದ ಬಗ್ಗೆ ಪಾಲಿಟ್‌ಬ್ಯೂರೋ ಈಗಾಗಲೇ ಎಚ್ಚರಿಸಿದೆ.

ಈ ಎಲ್ಲಾ ಸ್ವಯಂಸೇವಾ ಸಂಘಗಳೊಂದಿಗೆ ಆರ್‌ಎಸ್‌ಎಸ್ ಈ ಘೋಷಣೆಯಡಿ ಕೈಗೂಡಿಸಿರುವುದನ್ನು ನಮ್ಮ ಸಂಘಟನೆಗಳು ಗಮನಿಸಬೇಕು. ಈ ಹಿಂದೆ ಆರ್‌ಎಸ್‌ಎಸ್ ಕೋಮುವಾದಿ ಕಾರ್ಯಕರ್ತರೇ ಹೆಚ್ಚಾಗಿದ್ದ 'ಪಶ್ಚಿಮ ಘಟ್ಟ ಉಳಿಸಿ ಅಭಿಯಾನ'ವನ್ನು ನಡೆಸಿದ ಇವರು ಇದೀಗ ಕೈಗಾ ಯೋಜನೆಯ ವಿರುದ್ಧ ಸಕ್ರಿಯರಾಗಿದ್ದಾರೆ. ಈ ಕ್ರಿಯಾಸಮಿತಿಯ ಮುಂಚೂಣಿಯಲ್ಲಿಯೂ ಈ ನಾಯಕರೇ ಇರುವುದು ಅಪಾಯದ ಕರೆಗಂಟೆ. ಬೆಂಗಳೂರಿನಲ್ಲಿ ನಡೆದ ಹಲವು ಕೈಗಾ ವಿರೋಧಿ ಕಾಯಕ್ರಮಗಳಲ್ಲಿ ಇವರ ನೇರ ಪಾತ್ರವಿತ್ತು. ಇತ್ತೀಚೆಗೆ ಉ.ಕನ್ನಡ ಜಿಲ್ಲೆಯಲ್ಲಿ ಕೈಗಾ ವಿರೋಧಿಸಿ ವಿದ್ಯಾರ್ಥಿಗಳ ಮುಷ್ಕರಕ್ಕೆ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ಕರೆ ನೀಡಿತ್ತು ಎಂಬುದು ಎಚ್ಚರದಿಂದ ಗಮನಿಸಬೇಕಾದ ಅಂಶ.

ಕೈಗಾ ಚಳುವಳಿಗೆ ವಿದೇಶಿಯರ ಬೆಂಬಲವು ಇದೆ ಎಂದು ಈ ಕ್ರಿಯಾ ಸಮಿತಿ ಘೋಷಿಸಿಕೊಂಡಿದೆ. ಈ ಹಿಂದೆ ಸಾಮ್ರಾಜ್ಯಶಾಹಿಗಳು ಪ್ರೇರಿತ 'ಅಪ್ಪಟ ಪರಿಸರ' ಪ್ರತಿಪಾದಕರು ಗುಂಪೊಂದು ವಿದೇಶದಲ್ಲಿ ಸಭೆ ಸೇರಿದಾಗ ಇಲ್ಲಿನ ಪ್ರತಿನಿಧಿಯು ಮೇರೆಗೆಎಲ್ಲರೂ ಪ್ರಧಾನ ಮಂತ್ರಿಗೆ ಮನವಿ ನೀಡಿದ್ದರು. ಜೊತೆಜೊತೆಗೆ ಸ್ಲೈಡ್‌ಗಳು, ಪರಿಸರ ಪ್ರಗತಿ ವಿರೋಧಿ ಪರಿಕರಗಳು ಇಲ್ಲಿಗೆ ಬಂದಿಳಿದವು. ಎಲ್ಲಿಂದ ಬಂದುವು ಎಂಬುದು ಎಲ್ಲರೂ ಕೇಳಬೇಕಾದ ಪ್ರಶ್ನೆ.

ಇತ್ತೀಚೆಗೆ ತಾನೆ ಕರ್ನಾಟಕದ ನೂರಾರು ಸೇವಾ ಸಂಸ್ಥೆಗಳ ನಿಯೋಗವೊಂದು ಕೇಂದ್ರ ಸರ್ಕಾರಕ್ಕೆ ತಮ್ಮ ಸಂಸ್ಥೆಗಳಿಗೆ ಬರುವ ವಿದೇಶಿ ಹಣದ ಮೇಲೆ ತೆರಿಗೆ ಹೇರಬಾರದೆಂಬ ಮನವಿ ಮಾಡಿರುವುದು ಗಮನಾರ್ಹ. ಮರದೊಳಡಗಿದ ಬೆಂಕಿಯಂತೆ ಈ ಸೇವಾ ಸಂಸ್ಥೆಗಳು ತಮ್ಮ ಕಿಚ್ಚನ್ನು ಹೆಚ್ಚಿಸಿಕೊಳ್ಳುತ್ತಿರುವುದನ್ನು ಈ ನಿಯೋಗ ತೋರಿಸಿಕೊಟ್ಟಿದೆ. ವಿದೇಶದಿಂದ ಹಣಬರುತ್ತಿರುವುದು ನೇರವಾಗಿರುವಾಗ ಎಲ್ಲಾ ಯೋಜನೆಗಳ ಹಿಂದೆವಿದೇಶಿ ವಾಸನೆಯೂ ಅಡಗಿದೆಎಂಬುದು ನಿಸ್ಸಂಶಯ.

ಈ ಎಲ್ಲ ಹಿನ್ನೆಲೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳನ್ನು ಬಯಲಿಗೆಳೆಯಲು ಹಾಗೂ ಆದರ ನಿಜಸ್ವರೂಪವನ್ನು ಜನರಿಗೆ ತಿಳಿಸಲು ಎಡ ಸಂಘಟನೆಗಳು ಮುಂದಾಗಬೇಕು.

— • —

ಮೂರನೇ ಜಗತ್ತು ಬಂಡವಾಳಶಾಹಿಗಳ ಕಸದ ಬುಟ್ಟಿ?

ಭೂಪಾಲ್ ಅನಿಲ ದುರಂತದ ನಂತರ ಬಂಡವಾಳಶಾಹಿಗಳು ತಮ್ಮ ದೇಶದ ವಿಷಾನಿಲಗಳ ಉಳಿಕೆಗಳನ್ನು ತೃತೀಯ ಜಗತ್ತಿನ ಬಡದೇಶಗಳಿಗೆ ರಫ್ತು ಮಾಡಿ ತಮ್ಮ ದೇಶಗಳನ್ನು ಸುರಕ್ಷಿತಗೊಳಿಸಲು ಈ ಬಡದೇಶಗಳ ಜನರನ್ನು ಅಪಾಯಕ್ಕೆ ತಳ್ಳುವ ದೊಡ್ಡ ಹಗರಣಗಳು ಮತ್ತೆ ಬೆಳಕಿಗೆ ಬಂದಿವೆ.

ಅಮೇರಿಕಾದ ಫಿಲಡಲ್ಫಿಯಾದಿಂದ 15 ಸಾವಿರ ಟನ್ ವಿಷಕಾರೀ ದಾಹಕ ಬೂದಿಯನ್ನು ಆಫ್ರಿಕಾ ಖಂಡದ ಗಿನಿಯಾದ ಕಾಸ್ಸಾ ದ್ವೀಪದಲ್ಲಿ ತಂದು ಹಾಕಲಾಯಿತು. ಗಿನಿಯಾದ ವ್ಯಾಪಾರಿಗಳು ಇದಕ್ಕೆ ಪ್ರತಿಯಾಗಿ ಟನ್ನಿಗೆ 40 ಡಾಲರ್ ಲಾಭ ಪಡೆದರು. ಅಮೇರಿಕಾದಲ್ಲೇ ಈ ಕಸವನ್ನು ನಿರ್ಮೂಲ ಮಾಡಬೇಕಾದರೆ 1000 ಡಾಲರ್ ಟನ್ನಿಗೆ ಖರ್ಚು ಮಾಡಬೇಕಿತ್ತಂತೆ.

ನಾರ್ವೆಯ ಒಂದು ಕಂಪೆನಿ ಈ ವ್ಯವಹಾರದಲ್ಲಿ ಮಧ್ಯವರ್ತಿಯಾಗಿತ್ತು. ಇದರಿಂದಾಗಿ ಗಿನಿಯಾದ ಬಹುಪಾಲು ಹುಲ್ಲುಗಾವಲು ನಾಶವಾಗಿದೆ. ಗಿನಿಯಾದಲ್ಲಿ ನಾರ್ವೆಯ ರಾಯಭಾರಿಯನ್ನು ಅಲ್ಲಿಯ ಸರ್ಕಾರ ಈ ಬಗ್ಗೆ ಬಂಧಿಸಿದ ಮೇಲೆ ನಾರ್ವೆ ಈ ವಿಷಕಾರೀ ಕಸವನ್ನು ಆ ದೇಶದಿಂದ ತೆಗೆಯಲು ಒಪ್ಪಿತು.

ಸುಮಾರು 4000 ಮೆಟ್ರಿಕ್ ಟನ್‌ಗಳಷ್ಟು ರಾಸಾಯನಿಕ, ರೇಡಿಯೋ ಸಕ್ರಿಯ ಉಳಿಕೆಗಳನ್ನು ಇಟೆಲಿಯ ಒಂದು ಕಂಪನಿ ನೈಜೀರಿಯಾದ ಕೋನೋದಲ್ಲಿ ಗುಡ್ಡೆ ಹಾಕುತ್ತಿರುವುದನ್ನು ನೈಜೀರಿಯಾ ಸರ್ಕಾರ ತೀವ್ರವಾಗಿ ವಿರೋಧಿಸಿದ ಮೇಲೆ ಅದನ್ನು ತೆಗೆಯಲಾಗುತ್ತಿದೆ.

ಕಳೆದೆರಡು ವರ್ಷಗಳಲ್ಲಿ ಬಂಡವಾಳಶಾಹೀ ದೇಶಗಳಿಂದ ವಿಷಕಾರೀ ಉಳಿಕೆಗಳು 115 ಹಡಗುಗಳ ಮೂಲಕ ಲ್ಯಾಟಿನ್ ಅಮೇರಿಕಾ ಹಾಗೂ ಆಫ್ರಿಕನ್ ದೇಶಗಳಿಗೆ ರಫ್ತಾಗಿವೆಯೆಂದು ತಿಳಿದುಬಂದಿದೆ.

ಸಿ.ಪಿ.ಐ. (ಎಂ) 13ನೇ ರಾಜ್ಯ ಸಮ್ಮೇಳನದತ್ತ

ಗುಲ್ಬರ್ಗಾ ಜಿಲ್ಲಾ ಸಮ್ಮೇಳನ

ಏನೇ ಬರಲಿ ಎದೆಗೊಟ್ಟು ನಿಲ್ಲುತ್ತೇವೆ. ಹೊಸ ಸಮಾಜ ನಿರ್ಮಾಣದತ್ತ ಮುಂದೆ ಸಾಗುತ್ತೇವೆ ಎಂಬ ದೃಢ ನಿರ್ಧಾರದಿಂದ ನೂರಾರು ರೈತರೂ, ಕೃಷಿ ಕಾರ್ಮಿಕರೂ, ಎಂ.ಎಸ್.ಕೆ. ಗಿರಾಣಿ, ಎ ವಿ.ಬಿ. ಕಾರ್ಖಾನೆಯ ಕಾರ್ಮಿಕರು ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಸದಸ್ಯರು, ಸಿಪಿಐ(ಎಂ) ಜಿಲ್ಲಾ ಸಮಿತಿ. ರಾಜ್ಯ ಸಮಿತಿ ಮುಖಂಡರ ನೇತೃತ್ವದಲ್ಲಿ ಧಾರಾಕಾರವಾಗಿ ಸುರಿಯುತ್ತಿರುವ ಮಳೆಯಲ್ಲಿಯೇ ತೊಯ್ಸಿಕೊಂಡು ಮಳೆರಾಯನೂ ಅಂಜುವಂತೆ ಎತ್ತರದ ಧ್ವನಿಯಲ್ಲಿ ಘೋಷಣೆ ಕೂಗುತ್ತ 5 ಕಿಲೋಮೀಟರ್ ಮೆರವಣಿಗೆಯಲ್ಲಿ ಹೋಗಿ ಶಹಬಾದ ಹೈಸ್ಕೂಲ್ ಮೈದಾನದಲ್ಲಿ ಸಾರ್ವಜನಿಕ ಸಭೆ ನಡೆಸಿದರು. ಕಾರ್ಮಿಕ ಮುಖಂಡರಾದ ಎ.ಬಿ.ದಾಸ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ, ರಾಮಚಂದ್ರರಾವ್. ಎನ್.ಕೆ. ಉಪಾಧ್ಯಾಯ ಕಲ್ಲಪ್ಪಕಿರಣಗಿ. ಮೆಹಬೂಬ ಸಾಬ ಕಲಾಲ ಮತ್ತು ಮಾರುತಿ ಮಾನ್ಪಡೆ ಅವರು ಭಾಷಣ ಮಾಡಿ, ಇಂದಿನ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿ, ಕಮ್ಯೂನಿಸ್ಟ್ ಪಕ್ಷವನ್ನು ಬಲಪಡಿಸಿ ರೈತ ಕಾರ್ಮಿಕರ ಐಕ್ಯ ಹೋರಾಟವನ್ನು ಮುಂದುವರಿಸಬೇಕೆಂದು ಕರೆ ನೀಡಿದರು.

ಅಕ್ಟೋಬರ್ ತಾ|| 24-25 ರಂದು ಸಿಪಿಐ(ಎಂ) ಗುಲ್ಬರ್ಗ ಜಿಲ್ಲಾ ಸಮಿತಿಯ 13 ನೇ ಸಮ್ಮೇಳನದ ಅಂಗವಾಗಿ ಮೆರವಣಿಗೆ ಸಭೆಗಳನ್ನು ನಡೆಸಲಾಯಿತು.

ತಾ. 24ರಂದು ಧ್ವಜಾರೋಹಣದೊಂದಿಗೆ ಜಿಲ್ಲಾ ಸಮ್ಮೇಳನ ಪ್ರಾರಂಭವಾಯಿತು. ಸಿ.ಎ.ಪಾಟೀಲ, ಎ.ಬಿ ದಾಸ್, ಮಾರುತಿ ಮಾನ್ಪಡೆಯವರ ಅಧ್ಯಕ್ಷೀಯ ಮಂಡಳಿ ನೇತೃತ್ವದಲ್ಲಿ ನಡೆದ ಸಮ್ಮೇಳನವನ್ನು ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎನ್.ಕೆ. ಉಪಾಧ್ಯಾಯರು ಉದ್ಘಾಟನೆ ಮಾಡಿದರು. ಅವರು ತಮ್ಮ ಭಾಷಣದಲ್ಲಿ ಗೋರ್ಬಚೇವ್ ಅವರ ನೇತೃತ್ವದಲ್ಲಿ ಸೋವಿಯೆತ್ ರಷ್ಯಾ ಅಣ್ವಸ್ತ್ರಗಳ ಹತೋಟಿಗಾಗಿ ನಡೆಸಿರುವ ಪ್ರಯತ್ನವನ್ನು ವಿವರಿಸಿ. ಯುದ್ಧದ ವಿರುದ್ಧ ಶಾಂತಿಗಾಗಿ ನಿರಂತರ ಹೋರಾಟ ಮುಂದುವರಿಸುವ ಅವಶ್ಯಕತೆಯನ್ನು ವಿವರಿಸಿದರು. ರಾಜ್ಯದ ರಾಜಕೀಯವನ್ನು ವಿಶ್ಲೇಷಿಸುತ್ತ, ಬಂಡವಾಳ ಶಾಹಿ ಪರವಾದ ಜನತಾ ಸರಕಾರ ರೈತ-ಕಾರ್ಮಿಕರ ಹಿತ ಕಡೆಗಣಿಸುವುದರತ್ತ ಗಮನ ಹರಿಸಿ, ಇತ್ತೀಚೆಗೆ ನಡೆದ ರೈತರ ಹೋರಾಟವನ್ನು ವಿವರಿಸಿ, ಜನಜಾಗೃತಿಗೊಳಿಸಿ, ಐಕ್ಯ ಹೋರಾಟವನ್ನು ಮುಂದುವರಿಸಬೇಕೆಂದು ಕರೆಯಿತ್ತರು.

ರಾಜ್ಯ ಕಾರ್ಯದರ್ಶಿ ಪಿ. ರಾಮಚಂದ್ರ ರಾವ್ ಅವರು ಸಮ್ಮೇಳನವನ್ನುದ್ದೇಶಿಸಿ ಮಾತಾಡುತ್ತ, ಕೇಂದ್ರ ಸರಕಾರದ ಜನವಿರೋಧಿ ನೀತಿಗಳನ್ನು ವಿವರಿಸಿ. ಐಕ್ಯ ಪ್ರತಿಭಟನೆಯಿಂದ ಕೇಂದ್ರ ಸರಕಾರದ ನೀತಿಯನ್ನು ಬದಲಿಸಲು ಹೇಗೆ ಸಾಧ್ಯವೆಂಬುದನ್ನು ಹೇಳಿ, ಕಾಂಗ್ರೆಸ್ ಸೋಲಿಸಲು, ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳನ್ನು ಒಗ್ಗೂಡಿಸಿ ಪರ್ಯಾಯ ವ್ಯವಸ್ಥೆಗಾಗಿ ಹೋರಾಡಬೇಕೆಂದೂ, ಅದಕ್ಕಾಗಿ ಕಮ್ಯೂನಿಸ್ಟ್ ಪಕ್ಷವನ್ನು ಅದರ ನೇತೃತ್ವದ ಸಾಮೂಹಿಕ ಸಂಘಟನೆಗಳನ್ನೂ ಬಲಗೊಳಿಸಬೇಕೆಂದು ಕರೆ ನೀಡಿದರು.

ಜಿಲ್ಲಾ ಕಾರ್ಯದರ್ಶಿ ಕಲ್ಲಪ್ಪ ಕಿರಣಗಿಯವರು ಮೂರು ವರ್ಷಗಳ ವರದಿ ಸಲ್ಲಿಸಿ, ರೈತ ಚಳುವಳಿಯ ವಿಸ್ತರಣೆ, ಎವಿಬಿ ಕಾರ್ಮಿಕರ ಯಶಸ್ವಿ ಹೋರಾಟ, ವಿದ್ಯಾರ್ಥಿ ಯುವ ಜನತೆಯ ಹೋರಾಟಗಳನ್ನು ವಿವರಿಸಿದರು. ರಾಜ್ಯ ಸಮ್ಮೇಳನಕ್ಕೆ 11 ಪ್ರತಿನಿಧಿಗಳನ್ನೂ 3 ವೀಕ್ಷಕರನ್ನೂ ಆರಿಸಿದನಂತರ ಹೊಸ ಜಿಲ್ಲಾ ಸಮಿತಿಗೆ ಕಲ್ಲಪ್ಪಕಿರಣಗಿ ಕಾರ್ಯದರ್ಶಿಯಾಗಿ, ಮಾರುತಿ ಮಾನ್ಪಡೆ, ಸಿ.ಎ.ಪಾಟೀಲ ತಿಮ್ಮಣ್ಣ, ಗಂಗ, ಬಸವರಾಜ ಮರಡಿ. ಮೇಘರಾಜ ಕಠಾರೆ, ಬಾಬು ಮುಗಳಿ, ಎ.ಬಿ.ದಾಸ. ಗುಲಾಂ ಇಬ್ರಾಹಿಂ ಮತ್ತು ಚೆನ್ನಪ್ಪ ಆನೆಗುಂದಿ ಹೀಗೆ 11 ಜನರ ಜಿಲ್ಲಾ ಸಮಿತಿಯನ್ನು ಸರ್ವಾನುಮತದಿಂದ ಆರಿಸಲಾಯಿತು. ತೊಗರಿ ಬೆಳೆಗಾರರ ಬೇಡಿಕೆ, ಅತಿವೃಷ್ಟಿ ಸಂತ್ರಸ್ತರಿಗೆ ಪರಿಹಾರ, ನೀರಾವರಿ ಯೋಜನೆಗಳು, ಮುಚ್ಚಿರುವ ಎಂ.ಎಸ್.ಕೆ. ಮಿಲ್‌ನ್ನು ತೆರೆಯುವುದು, ಹರಿಜನ-ಗಿರಿಜನರ ಮೇಲಿನ ಹಲ್ಲೆ ಖಂಡನೆ ಹಾಗೆಯೇ ಬೀದರಿನಲ್ಲಿ ಸಿಖ್ಖರ ಕೊಲೆ ಮತ್ತು ಲೂಟಿಯನ್ನು ಖಂಡಿಸುವ ನಿರ್ಣಯಗಳೊಡನೆ ಸಮಾವೇಶ ಮುಕ್ತಾಯವಾಯಿತು.

ಬಳ್ಳಾರಿ ಪ್ರಾದೇಶಿಕ ಸಮಿತಿ ಸಮ್ಮೇಳನ

ಕಳೆದ 7–8 ವರ್ಷಗಳಲ್ಲಿ ಬಲಿಷ್ಟ ರೈತ ಸಂಘಟನೆ ಕಟ್ಟಿ 3000ದಷ್ಟು ಸರಕಾರಿ ಭೂಮಿಯನ್ನು ರೈತ ವಶಪಡಿಸಿಕೊಳ್ಳುವಂತೆ ಮಾಡಿ, ವಿದ್ಯಾರ್ಥಿ ಯುವಜನತೆಯನ್ನು ಸಂಘಟಿಸಿ, ಜಿಲ್ಲೆಯಲ್ಲಿ ಮೂರನೇ ರಾಜಕೀಯ ಪಕ್ಷವಾಗಿ ಬೆಳೆಯುತ್ತಿರುವ ಸಿಪಿಐ (ಎಂ)ನ ಬಳ್ಳಾರಿ ಪ್ರಾದೇಶಿಕ ಸಮಿತಿಯ 2ನೇ ವಾರ್ಷಿಕ ಸಮ್ಮೇಳನ ಅಕ್ಟೋಬರ್ 26-27ರಂದು ಹೊಸಪೇಟೆಯಲ್ಲಿ ನಡೆಯಿತು.

ರಾಜ್ಯ ಕಾರ್ಯದರ್ಶಿ ಪಿ.ರಾಮಚಂದ್ರ ರಾವ್ ಅವರು ಸಮ್ಮೇಳನವನ್ನು ಉದ್ಘಾಟಿಸುತ್ತಾ, ದೇಶದ ರಾಜಕೀಯದಲ್ಲಾಗುತ್ತಿರುವ ಬದಲಾವಣೆಯನ್ನು ವಿವರಿಸಿ, ಕಾಂಗ್ರೆಸ್ ವಿರುದ್ಧವಾಗಿ ಬಿಜೆಪಿ ಬಿಟ್ಟು ಇತರ ಪಕ್ಷಗಳು ರಚಿಸಿಕೊಂಡಿರುವ ರಂಗವನ್ನು ಸ್ವಾಗತಿಸಿ. ರಾಜೀವಗಾಂಧಿಯವರ ಸರ್ವಾಧಿಕಾರಿ ನೀತಿಯನ್ನು ಖಂಡಿಸಿ, ಬಲಿಷ್ಟವಾದ ಪಕ್ಷ ಕಟ್ಟಲು ಮುಂದಾಗಬೇಕೆಂದು ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಭಾಷಣ ಮಾಡುತ್ತಾ, ಸೆಕ್ರೆಟರಿಯೇಟ್ ಸದಸ್ಯರಾದ ಎನ್.ಕೆ.ಉಪಾಧ್ಯಾಯರು ಪಶ್ಚಿಮ ಬಂಗಾಲ ಮತ್ತು ಕೇರಳದ ಸಿಪಿಐ [ಎಂ] ಮುಖಂಡತ್ವದ ಎಡರಂಗ ಸರಕಾರಗಳ ಜನಪರ ನೀತಿಯನ್ನು ವಿವರಿಸಿ. ಜಾತೀಯ ಸೌಹಾರ್ದತೆಯನ್ನು ಕಾಪಾಡುವುದರಲ್ಲಿ, ರೈತರಿಗೆ ಭೂಮಿ ವಿತರಣೆ ಮಾಡುವುದರಲ್ಲಿ ಅವರ ಆಡಳಿತ ವೈಖರಿಯನ್ನು ತಿಳಿಸಿ ಹೇಳಿದರು. ಬೀದರ್‌ನಲ್ಲಿ ಸಿಖ್ ವಿದ್ಯಾರ್ಥಿಗಳ ಕೊಲೆ, ಮನೆ ಅಂಗಡಿಗಳ ಲೂಟಿ ನಡೆದಾಗ ಪೋಲೀಸರು ಸುಮ್ಮನಿದ್ದು ದಂಗೆಗೆ ಹತ್ಯೆಗೆ ಅವಕಾಶ ಮಾಡಿಕೊಟ್ಟದ್ದನ್ನು ಖಂಡಿಸಿ, ಪ. ಬಂಗಾಲದ ಎಡರಂಗ ಸರಕಾರ ಜಾತೀಯ ದಂಗೆ ಎಬ್ಬಿಸಲು ಪ್ರಯತ್ನಿಸಿದ ಜಾತೀವಾದಿಗಳ ಕುಕೃತ್ಯವನ್ನು ಕೆಲವೇ ನಿಮಿಷದಲ್ಲಿ ನಾಶಗೊಳಿಸಿದ ಉದಾಹರಣೆ ಕೊಟ್ಟು, ಎರಡೂ ವಿರೋಧಿ ಪಕ್ಷಗಳ ಸರಕಾರಗಳಿದ್ದರೂ ಬಂಡವಾಳಶಾಹಿ ಜನತಾ ಸರಕಾರದ ಪೋಲೀಸ್ ನೀತಿಯ ವೈಖರಿ ಹೇಗಿದೆಯೆಂದು ವಿವರಿಸಿದರು.

ವೈ. ಭೀಮಸೇನಾಚಾರ್ ಮತ್ತು ಪರಶುರಾಮ್ ಅವರನ್ನೊಳಗೊಂಡ ಅಧ್ಯಕ್ಷೀಯ ಮಂಡಳಿಯಡಿಯಲ್ಲಿ ಸಮ್ಮೇಳನ ನಡೆಯಿತು. ಪ್ರಾದೇಶಿಕ ಕಾರ್ಯದರ್ಶಿ ಪ್ರಸನ್ನಕುಮಾರ್ ಅವರು ವರದಿ ಮಂಡಿಸಿದರು.

ಅನಂತರ ಪ್ರಸನ್ನಕುಮಾರ್ (ಕಾರ್ಯದರ್ಶಿ) ಪರಶುರಾಮ್, ವೆಂಕಟೇಶ್, ಬಸವರಾಜ, ಭೀಮಸೇನಾಚಾರ್, ವೀರ ಸಂಗಯ್ಯ, ಜಂಬಯ್ಯ ನಾಯ್ಕ, ಮಂಜುನಾಥ್, ಪ್ರಭಾಕರ್, ಶಾಮಸುಂದರ್ ಅವರನ್ನೊಳಗೊಂಡ 10 ಜನರ ಪ್ರಾದೇಶಿಕ ಸಮಿತಿಯನ್ನು ಆರಿಸಲಾಯಿತು. ಒಂದು ಸ್ಥಾನ ಖಾಲಿ ಇಡಲಾಯಿತು. ರಾಜ್ಯ ಸಮ್ಮೇಳನಕ್ಕೆ ಪ್ರಸನ್ನಕುಮಾರ್, ಪರಶುರಾಂ, ವೆಂಕಟೇಶ್, ಬಸವರಾಜ್, ಭೀಮಸೇನಾಚಾರ್ ಮತ್ತು ವೀರ ಸಂಗಯ್ಯನವರನ್ನು ಪ್ರತಿನಿಧಿಗಳನ್ನಾಗಿಯೂ, ಜಂಬಯ್ಯ ನಾಯ್ಕ, ಮಂಜುನಾಥ್, ನಾಗಭೂಷಣ್, ಪರಶುರಾಂ ಕಲಾಲ ಅವರನ್ನು ವೀಕ್ಷಕರನ್ನಾಗಿಯೂ ಆರಿಸಲಾಯಿತು.

ರೈತರಿಗೆ ಭೂಮಿಯ ಪಟ್ಟ, ನೀರಾವರಿ ಯೋಜನೆಗಳು, ಬೀದರ್‌ನಲ್ಲಿ ಸಿಖ್ ವಿದ್ಯಾರ್ಥಿಗಳ ಕೊಲೆಯ ಖಂಡನೆ ಮೊದಲಾದ ನಿರ್ಣಯಗಳನ್ನು ಪಾಸು ಮಾಡಲಾಯಿತು.

ಸಂಜೆ ರೈತ-ಕಾರ್ಮಿಕರ ಬೃಹತ್ ಮೆರವಣಿಗೆ ಮತ್ತು ಸಾರ್ವಜನಿಕ ಸಭೆ ನಡೆಯಿತು. ಪಿ.ರಾಮಚಂದ್ರರಾವ್, ಎನ್.ಕೆ. ಉಪಾಧ್ಯಾಯ, ಪರಶುರಾಮ್ ಮೊದಲಾದವರು ಭಾಷಣ ಮಾಡಿದರು. ಭೀಮಸೇನಾಚಾರ್ ಅಧ್ಯಕ್ಷತೆ ವಹಿಸಿದ್ದರು.

ಬಂಟ್ವಾಳ ತಾಲ್ಲೂಕು ಸಮ್ಮೇಳನ

ಸೆಪ್ಟೆಂಬರ್ 23ರಂದು ಕಾ|| ಬಿ. ಹೂವಯ್ಯನವರ ಅಧ್ಯಕ್ಷತೆಯಲ್ಲಿ ಬಂಟ್ವಾಳ ತಾಲ್ಲೂಕು ಸಮ್ಮೇಳನ ಜರುಗಿತು. ಕಳೆದ ಸಮ್ಮೇಳನದಿಂದೀಚೆಗೆ ಹೋರಾಟಗಳಲ್ಲಿ ಮಡಿದ ಸಂಗಾತಿಗಳಿಗೆ ಹಾಗೂ ಪಂಜಾಬ್, ತ್ರಿಪುರ, ಅಸ್ಸಾಂ, ಡಾರ್ಜಿಲಿಂಗ್‌ಗಳಲ್ಲಿ ಪ್ರತ್ಯೇಕತಾವಾದಿ ಭಯೋತ್ಪಾದಕರೊಂದಿಗೆ ಹೋರಾಡಿ ದೇಶದ ಐಕ್ಯತೆ–ಸಮಗ್ರತೆಗಾಗಿ ಪ್ರಾಣತೆತ್ತ ಹುತಾತ್ಮ ಸಂಗಾತಿಗಳಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಕಾ|| ಬಿ. ನಾರಾಯಣರವರು ಮಂಡಿಸಿದ ವರದಿ ಮೇಲೆ ಚರ್ಚೆ ನಡೆದು ವರದಿ ಅಂಗೀಕರಿಸಲಾಯಿತು. ಬಂಟ್ವಾಳದ ಬಿ. ಸಿ. ರಸ್ತೆಯಲ್ಲಿ ನಿರ್ಮಿಸಬೇಕಾಗಿರುವ ವಾಣಿಜ್ಯ ಸಂಕೀರ್ಣವನ್ನು ಕೆಲ ಹಿತಾಸಕ್ತಿಗಳು ವಿರೋಧಿಸುತ್ತಿದ್ದು ಜನತೆಯ ಹಿತ ದೃಷ್ಟಿಯಿಂದ ಇದಕ್ಕೆ ಕೂಡಲೇ ಮಂಜೂರಾತಿ ನೀಡಬೇಕೆಂದು ಸಮ್ಮೇಳನ ಒತ್ತಾಯಿಸಿತು.

ಕಾ||ಬಿ. ವಾಸುಗಟ್ಟಿಯವರು ಕಾರ್ಯದರ್ಶಿಯಾಗಿ ಪುನರಾಯ್ಕೆಗೊಂಡರು. ಬಿ. ಹೂವಯ್ಯ ಬಂಗೇರ, ಬಿ. ನಾರಾಯಣ ಬಿ. ಮಂಜುನಾಥ ಸಪಲ್ಯ ಬಿ. ರುಕ್ಮಯ್ಯ ಪೂಜಾರಿ, ಸಂಜೀವ ಬಂಗೇರ, ಬಿ. ಚಂದು ನಾಯ್ಕ್ ರನ್ನೊಳಗೊಂಡ ತಾಲೂಕು ಸಮಿತಿ ರಚಿಸಲಾಯಿತು.

ಸಮ್ಮೇಳನದಲ್ಲಿ ಜಿಲ್ಲಾ ಕಾರ್ಯದರ್ಶಿ ಕಾ|| ಕೆ. ಆರ್. ಶ್ರೀಯಾನ್, ಜನಾರ್ದನ ನಾಯಕ್ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿ ದೇಶದಲ್ಲಿ ಕಾಂಗ್ರೆಸ್‌ಗೆ ಪರ್ಯಾಯ ರೂಪದಲ್ಲಿ ಸಿಪಿಐ(ಎಂ) ಪಕ್ಷದ ಪಾತ್ರದ ಕುರಿತು ವಿವರಿಸಿದರು.

ಬೆತ್ತಲೆ ಮೆರವಣಿಗೆ ವಿರುದ್ಧ ಪ್ರತಿಭಟನೆ

ತಾ. 10.9.88 ರಂದು ಸಿಂಧನೂರು ಬಂದ್ ಆಚರಿಸಿ ಬೆತ್ತಲೆ ಮೆರವಣಿಗೆಯನ್ನು ಪ್ರತಿಭಟಿಸಿತು. ವ್ಯಾಪಾರಸ್ಥರು ರಿಕ್ಷಾ ಚಾಲಕರು ಪೂರ್ಣ ಸಹಕಾರ ತೋರಿ ಬಂದ್ ಆಚರಿಸಿದರು.

ಈ ಬಂದ್‌ಗೆ. ಹೊಸಳ್ಳಿ ಬೆತ್ತಲೆ ಮೆರವಣಿಗೆ ಪ್ರತಿಭಟನಾ ಸಮಿತಿ ಕರೆಕೊಟ್ಟಿತ್ತು. ಅಂದೇ 12 ಕಿ.ಮೀ. ದೂರದ ಘಟನೆಯ ಸ್ಥಳವಾದ ಕೆ. ಹೊಸಳ್ಳಿಯಿಂದ ಪಂಜಿನ ಮೆರವಣಿಗೆ ಸಂಘಟಿಸಲಾಗಿತ್ತು. ಹಳ್ಳಿಯ ಯುವಕ-ಯುವತಿಯರು ಗಣನೀಯವಾಗಿ ಪಾಲ್ಗೊಂಡಿದ್ದರು.

ಸಿಂಧನೂರು ನಗರಕ್ಕೆ ಮೆರವಣಿಗೆ ಬಂದ ಕೂಡಲೇ ಸಾವಿರಾರು ಜನ ಬೆತ್ತಲೆ ಮೆರವಣಿಗೆ ಖಂಡಿಸುವ ಘೋಷಣೆಗಳೊಂದಿಗೆ ಸ್ವಾಗತಿಸಿದರು. ನಗರದಲ್ಲಿ ಸುಮಾರು ಒಂದೂವರೆ ಸಾವಿರದಷ್ಟು ಜನ ಮೆರವಣಿಗೆಯಲ್ಲಿದ್ದರು.

ಸಮಿತಿಯ ಪ್ರತಿನಿಧಿಗಳು ಬಂದ್ ಜಾಥಾ-ಮೆರವಣಿಗೆ-ಬಹಿರಂಗ ಸಭೆಗಳ ಮಾಹಿತಿ ನೀಡಲು ಪೋಲೀಸ್ ಸ್ಟೇಷನ್‌ಗೆ ಹೋದಾಗ "ಅದು ಹೇಗೆ ಮೆರವಣಿಗೆ ಬಂದ್ ನಡೆಸುತ್ತೀರಿ, ನಾವೂ ನೋಡಿಕೊಳ್ಳುತ್ತೇವೆ ಎಂದು ಎಗರಾಡಿದ" ಪಿ. ಎಸ್.ಐ. ಮತ್ತು ಸರ್ಕಲ್ ಇನ್ಸ್‌ಪೆಕ್ಟರ್‌ಗಳು ಜನಸಾಗರವನ್ನು ಬೆಪ್ಪುತಕ್ಕಡಿಗಳಂತೆ ನೋಡುತ್ತಿದ್ದರು.

ಸಂಜೆಯ ಬಹಿರಂಗ ಸಭೆಯನ್ನುದ್ದೇಶಿಸಿ ಕುದುರೆಮೋತಿ ಪ್ರಕರಣಕ್ಕೆ ಬಲಿಯಾದ ಪಾರ್ವತಮ್ಮ ಮಾತನಾಡಿದರು. ಮಾತಾಡುತ್ತಾ ನ್ಯಾಯಾಲಯದಲ್ಲಿ ನನಗೆ ನ್ಯಾಯ ಸಿಕ್ಕಿಲ್ಲ, ನಾನಿಂದು ತಲೆಯೆತ್ತಿ ಬದುಕುತ್ತಿರುವುದು ಜನತೆಯ ಬೆಂಬಲದಿಂದ, ಪ್ರಗತಿಪರ ಸಂಘಟನೆಗಳಿಂದ. ಈ ಖಾದಿ-ಕಾವಿ-ಖಾಕಿಗಳನ್ನು ಎಂದೂ ನಂಬಬಾರದು" ಎಂದು ರೋಷದಿಂದ ನುಡಿದರು.

ಎ.ಐ.ಡಿ.ಡಬ್ಲ್ಯು.ಎ. ನ ರಾಜ್ಯ ಸಂಚಾಲಕಿ ಮತ್ತು ಕುದುರೆಮೋತಿ ಹೋರಾಟ ಸಮಿತಿಯ ನಾಯಕಿ ಹರಿಣಿ ಕಕ್ಕೇರಿಯವರು "ಇಂತಹ ಘಟನೆಗಳು ನಡೆದಾಗ ಮುಚ್ಚಿಡುವುದರಿಂದ ಹೆಚ್ಚಾಗುತ್ತಾ ಹೋಗುತ್ತವೆ. ಇದನ್ನು ಮುಚ್ಚಿಡಲು ಮುಖ್ಯ ಕಾರಣ ಪಾಳೆಗಾರಿ ಮರ್ಯಾದೆಯ ಮೌಲ್ಯ, ತಪ್ಪು ಮಾಡಿದವರ ಮರ್ಯಾದೆ ಹೋಗಬೇಕೇ ವಿನಾಃ ಬಲಿಯಾದವರದಲ್ಲ."...ಎಂದು ಹೇಳುತ್ತಾ ಮುಂದುವರಿದು... "ದೇವರಾಲದಲ್ಲಿ 'ಸತಿ'ಯಂಥ ನೀಚ ಘಟನೆಯಲ್ಲಿ ಯುವಕರು ಪಾಲ್ಗೊಂಡಿದ್ದರು. ಆದರೆ ಇಲ್ಲಿ ನಮ್ಮ ಯುವಕರು ಇಂಥ ಪೈಶಾಚಿಕತೆಯ ವಿರುದ್ಧ ಪ್ರತಿಭಟನೆಗಿಳಿದಿದ್ದು ಸ್ವಾಗತಾರ್ಹ" ಎಂದರು.

ಕಾರ್ಯಕ್ರಮದ ಒಟ್ಟಾರೆ ಗಮನಾರ್ಹ ಅಂಶವೆಂದರೆ, ಬೆತ್ತಲೆ ಮೆರವಣಿಗೆಗೆ ಒಳಗಾದ ಯುವತಿಯರು ಮತ್ತು ಕುದುರೆಮೋತಿಯಲ್ಲಿ ನೊಂದ ಪಾರ್ವತಮ್ಮ ಕಾರ್ಯಕ್ರಮದಲ್ಲಿ ಭಾಗಿಗಳಾಗಿದ್ದುದು.

ಕೃಪೆ : ಲಂಕೇಶ ಪತ್ರಿಕೆ

ಹೋರಾಟದ ಕಣದಲ್ಲಿ ಗೇರು ಕಾರ್ಮಿಕರು

ಸಿ.ಐ.ಟಿ.ಯು. ಸಂಘಟನೆಗೆ ಸೇರಿ ತಮ್ಮ ರಾಜಕೀಯ ಪ್ರಜ್ಞಾವಂತಿಕೆಯನ್ನು ತೋರಿದ ಏಕೈಕ ಕಾರಣಕ್ಕಾಗಿ ಕೆಲಸ ನಿರಾಕರಿಸಲ್ಪಟ್ಟು ಸುಮಾರು 3 ತಿಂಗಳಿಂದ ಕೆಲಸದ ಹಕ್ಕಿಗಾಗಿ ಕುಂದಾಪುರದ ಕೋಟೇಶ್ವರದ ಸಾಧನಾ ಗೇರು ಕೇಂದ್ರದ ಕಾರ್ಮಿಕರು ಹೋರಾಟದ ಕಣದಲ್ಲಿದ್ದಾರೆ.

ಗಣಪತಿ ದೇವಾಡಿಗರೆಂಬ ಕಾರ್ಯಕರ್ತರನ್ನು ವಿನಾಕಾರಣ ಕೆಲಸದಿಂದ ತೆಗೆದಾಗ ಪ್ರತಿಭಟನೆ ಪ್ರಾರಂಭಗೊಂಡಿತು. ಮಾಲೀಕ ಅವಾಚ್ಯವಾಗಿ ನಿಂದಿಸಿ ಸಭೆಗೆ ಹೋದ ಕಾರಣ ನೀಡಿ ಕೆಲಸ ನಿರಾಕರಿಸಿ ಫ್ಯಾಕ್ಟರಿ ಬಂದ್ ಮಾಡಿದ. ಕಳವು ಆರೋಪ ಹೊರಿಸಿ ಕಾರ್ಯಕರ್ತ ಗಣಪನನ್ನು ಬಂಧಿಸಲಾಯಿತು.

ಜೂನ್ 16 ರಿಂದ ಧರಣಿ ಆರಂಭಗೊಂಡಿತು. ಹಿಂದೂ ಕೋಮುವಾದದ ಒಲವಿನ ತನ್ನ ಫ್ಯಾಕ್ಟರಿಯಲ್ಲಿ ಕಮ್ಯೂನಿಸ್ಟ್ ಸಂಘಟನೆ ಹುಟ್ಟಿದ್ದೇ ಮಾಲೀಕ ಕೃಷ್ಣನಾಯಕ್‌ಗೆ ಕಣ್ಣು ಕೆಂಪಾಗಲು ಕಾರಣ.

ಸಿ.ಐ.ಟಿ.ಯು. ಸಂಯೋಜಿತ ದ. ಕ. ಜಿಲ್ಲಾ ಕ್ಯಾಶ್ಯೂ ಎಂಡ್ ಅಲೈಡ್ ವರ್ಕರ್ಸ್ ಯೂನಿಯನ್ ಈ ಮಾಲೀಕನ ಕಾನೂನು ಬಾಹಿರ ಕೆಲಸ ನಿರಾಕರಣೆ ಬಗ್ಗೆ ಕಾರ್ಮಿಕ ಕಮಿಶನರ್‌ಗೆ ದೂರು ಸಲ್ಲಿಸಿದೆ. ಸಂಧಾನಗಳಲ್ಲಿ ಸತತವಾಗಿ ಗೈರು ಹಾಜರಿಯಾಗುವುದು, ಮಾಲೀಕ ತಾನಲ್ಲವೆಂದು ಹೇಳುವುದು, ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಖೋಟಾ ಹೆಸರಿನಲ್ಲಿ ವ್ಯವಹರಿಸುತ್ತಿರುವುದು ಇವೆಲ್ಲವು ಕಾರ್ಮಿಕರನ್ನು ಸಂಶಯಾಸ್ಪದಗೊಳಿಸಿವೆ. ಮಾಲೀಕನ ಹಠಮಾರಿತನದ ವಿರುದ್ಧ ದೃಢತೆಯಿಂದ ಹೋರಾಟ ನಡೆಸುತ್ತಿರುವ ಕಾರ್ಮಿಕರಲ್ಲಿ ಹೆಚ್ಚಿನವರು ಮಹಿಳೆಯರು.

ಮಾಲೀಕನಿಗೆ ದಿಗ್ಬಂಧನ

ಸೆ. 15ರಂದು ಎರಡನೇ ಹಂತದ ಹೋರಾಟ ಪ್ರಾರಂಭಿಸಿದ ಕಾರ್ಮಿಕರು ಇತರ ಕಾರ್ಮಿಕರ ಬೆಂಬಲದೊಂದಿಗೆ ಮತ್ತೊಂದು ದೃಢ ಹೆಜ್ಜೆಯನ್ನಿಟ್ಟು ಮಾಲೀಕನನ್ನು ಘೇರಾವೋ ಮಾಡಿ ಮನೆಗೆ ಯಾರು ಹೋಗದಂತೆ ಅಥವಾ ಒಳಗಿನವರು ಹೊರಬರದಂತೆ ಹಾಲು, ಪತ್ರಿಕೆ, ಸರಬರಾಜು ಆಗದಂತೆ ತಡೆ ಹಿಡಿಯಲಾಯಿತು. ಹೋರಾಟ ಮುಂದುವರೆದಿದೆ.

ವರದಿ : ವಿಶ್ವ ಕುಂದಾಪುರ

ಸುರಪುರದಲ್ಲಿ ಮುನ್ನೂರು ರೈತರ ಬಂಧನ

ಗುಲ್ಬರ್ಗ ಜಿಲ್ಲೆ ಸುರಪುರದಲ್ಲಿ ಸೆಪ್ಟೆಂಬರ್ 1ರಿಂದ 3ರ ವರೆಗೆ ತಾಲ್ಲೂಕು ಕಛೇರಿ ಎದರು ಪ್ರಾಂತ ರೈತ ಸಂಘ, ಕೃಷಿ ಕೂಲಿಗಾರರ ಸಂಘದ ರೈತರು ಧರಣಿ ಸತ್ಯಾಗ್ರಹ ನಡೆಸಿದರು. ಸೆಪ್ಟೆಂಬರ್ 7 ರಂದು 300 ಮಂದಿ ರೈತರು ಮುಖ್ಯ ಬೀದಿಗಳಲ್ಲಿ ಘೋಷಣೆ ಕೂಗುತ್ತಾ ಮೆರವಣಿಗೆ ನಡೆಸಿ ಅರಣ್ಯಾಧಿಕಾರಿಯನ್ನು ಘೇರಾವೋ ಮಾಡಿ ನಂತರ ರಸ್ತಾರೋಕೋ ಚಳುವಳಿ ನಡೆಸಿ ಬಂಧನಕ್ಕೊಳಗಾದರು.

ರೈತ ನಾಯಕರಾದ ಕಾ|| ಬಸವರಾಜ ಯಡ್ಡಳ್ಳಿ, ಕಾ|| ತಿರುಪತಿ ನಾಯಕ್ ಬೇವಿನಹಾಳರವರುಗಳು ಮೆರವಣಿಗೆಯ ನೇತೃತ್ವ ವಹಿಸಿದ್ದರು.

ಸಿ.ಪಿ.ಐ.(ಎಂ) ಪಕ್ಷದ ಕರ್ನಾಟಕ ರಾಜ್ಯ 13ನೇ ಸಮ್ಮೇಳನದತ್ತ

— ಎಸ್.ಕೆ. ಉಪಾಧ್ಯಾಯ

ಪಕ್ಷದ 12 ನೇ ರಾಜ್ಯ ಸಮ್ಮೇಳನದಲ್ಲಿ ತೆಗೆದುಕೊಂಡ ನಿಲುವುಗಳು ಎಷ್ಟು ವಾಸ್ತವತೆಯಿಂದ ಕೂಡಿವೆ ಎಂಬುದರ ಕುರಿತು ಕಾ|| ಎಸ್. ಕೆ. ಯವರು ತಮ್ಮ ಈ ಲೇಖನದಲ್ಲಿ ವಿಶ್ಲೇಷಿಸಿದ್ದಾರೆ.

1985 ಅಕ್ಟೋಬರ್ ತಿಂಗಳಲ್ಲಿ ಸೇರಿದ್ದ ಸಿಪಿಐ(ಎಂ) ಪಕ್ಷದ ಕರ್ನಾಟಕ ರಾಜ್ಯ ಸಮಿತಿಯ 12ನೇ ಸಮ್ಮೇಳನದ ಕರಡು ವರದಿಯ ಅನುಬಂಧ-2 ರಲ್ಲಿ "ಒಟ್ಟಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಬಂಡವಾಳಶಾಹಿಗಳ-ಭೂಮಾಲಕ ವರ್ಗಗಳ ಕಾಂಗ್ರೆಸ್ ಪಕ್ಷ ಅಥವಾ ಜನತಾ ಪಕ್ಷದ ಆಡಳಿತೆಯಲ್ಲಿ "ಬಂಡವಾಳಶಾಹಿ ಪಥ"ದಲ್ಲಿ ರಾಜ್ಯವನ್ನು ಕೊಂಡೊಯ್ಯಲು ಅನುಸರಿಸಿದ ಆರ್ಥಿಕ-ಸಾಮಾಜಿಕ ನೀತಿಗಳ ಫಲವಾಗಿ ಆರ್ಥಿಕ ಸ್ಥಗಿತತೆ ಉಂಟಾಗಿದೆ. ಅಸಮಾನತೆ ಕಡಿಮೆಯಾಗಲಿಲ್ಲ. ಬಡತನದ ಭೀಕರ ಸಮಸ್ಯೆ ತೀವ್ರಗೊಳ್ಳುತ್ತಿದೆ. ಜನತೆಯ ನಾಗರೀಕ ಸೌಕರ್ಯಗಳು ಹಾಗೆಯೇ ಪರಿಹಾರ ಕಾಣದೆ ಕುಳಿತಿವೆ. ಈ

1985ರಲ್ಲಿ ಕೆ.ಜಿ.ಎಫ್. ನಲ್ಲಿ ನಡೆದ 12 ನೇ ಸಮ್ಮೇನದಿಂದ 1988ರಲ್ಲಿ ಬೆಂಗಳೂರಿನಲ್ಲಿ ಸೇರುವ ಸಮ್ಮೇಳನವರೆಗಿನ ರಾಜ್ಯದ ಆರ್ಥಿಕ, ರಾಜಕೀಯ, ಪರಿಸ್ಥಿತಿಯನ್ನು ಗಮನಿಸಿದಾಗ 12 ನೇ ಸಮ್ಮೇಳನ ಜನತಾ ಸರ್ಕಾರದ ಕುರಿತು ತಾಳಿದ ನಿರೂಪಣೆ ಸರಿಯೆಂದು ಕಂಡುಬರುತ್ತದೆ

ಕಾಂಗ್ರೆಸ್ಸು ಅಥವಾ ಜನತಾ ಪಕ್ಷ ಸರಕಾರಗಳು ಜನರ ಮೂಲಭೂತ ಸಮಸ್ಯೆಗಳನ್ನು ಹಾಗೆಯೇ ಬೆಳೆಯಬಿಟ್ಟು "ಜನಸಾಮಾನ್ಯರ ದುರ್ಬಲ ವಿಭಾಗಗಳನ್ನು ತಮ್ಮ ಗರೀಬಿ ಹಠಾವೋ ಯೋಜನೆಗಳಿಂದ ಭ್ರಮೆ ಹುಟ್ಟಿಸುತ್ತಿದ್ದಾರಷ್ಟೆ'' ಎಂದು ಹೇಳಿದೆ.

1985 ಡಿಸೆಂಬರ 25 ರಿಂದ 30ರವರೆಗೆ ಕಲ್ಕತ್ತದಲ್ಲಿ ಸೇರಿದ್ದ ಮಾರ್ಕ್ಸವಾದಿ ಕಮ್ಯುನಿಸ್ಟ್ ಪಕ್ಷದ 12 ನೆಯ ಕಾಂಗ್ರೆಸ್ಸಿನ ರಾಜಕೀಯ ಸಂಘಟನಾ ವರದಿಯಲ್ಲಿ ಕರ್ನಾಟಕದ ಕುರಿತು ವಿಶ್ಲೇಷಿಸುತ್ತಾ, '1985ರ ಚುನಾವಣೆಗಳ ನಂತರ ಜನತಾ ಸರಕಾರದ ಕಾರ್ಯ ವಿಧಾನ ಹಿಂಜರಿತ ಕಂಡಿದೆ' ಎಂದು ಉಲ್ಲೇಖಿಸಿದೆ. "ನಮ್ಮ ಪಕ್ಷ ಸ್ವತಂತ್ರವಾಗಿಯೂ ಮತ್ತು ಭಾರತ ಕಮ್ಯೂನಿಸ್ಟ್ ಪಕ್ಷ (ಸಿಪಿಐ) ಹಾಗೂ ಎಡ ಶಕ್ತಿಗಳೊಡನೆ ಸೇರಿ ಜನತಾ ಸರಕಾರದ ಈ ನೀತಿಗಳ ವಿರುದ್ಧ ಪ್ರತಿರೋಧ ನಡೆಸಬೇಕು. ಜನಸಮುದಾಯವನ್ನು ಎಬ್ಬಿಸಬೇಕು. ಆದರೆ ಅದೇ ಸಮಯದಲ್ಲಿ ಗೊಂದಲ ಉಂಟುಮಾಡಿ ಲಾಭ ಪಡೆಯುವ ಕಾಂಗ್ರೆಸ್ (ಐ)ಯ ಉದ್ದೇಶಗಳನ್ನು ವಿಫಲಗೊಳಿಸಬೇಕು'' ಎಂದು ಮಾರ್ಗದರ್ಶನ ನೀಡಿದೆ.

ಅಂದರೆ ಅದರ ಅರ್ಥವೇನು ?

ಹಿಂದಿನ ಕಾಂಗ್ರೆಸ್ ಸರಕಾರವಾಗಲಿ ಇಂದಿನ ಜನತಾ ಸರಕಾರವಾಗಲಿ ರಾಜ್ಯದ ಬಹುಸಂಖ್ಯಾ ಜನತೆಯ, ಹರಿಜನರ, ಗಿರಿಜನರ, ರೈತರ, ಕೃಷಿ ಕಾರ್ಮಿಕರ, ನಿರುದ್ಯೋಗಿಗಳ, ಗ್ರಾಮಾಂತರ ಪ್ರದೇಶಗಳ ಜನರ ಹಾಗೆಯೇ ಕೆಲಸಗಾರರ, ಮಧ್ಯಮ ವರ್ಗದವರ ಅಂದರೆ ಜನಸಾಮಾನ್ಯರ ಸಮಸ್ಯೆಗಳ ಪರಿಹಾರದತ್ತ ಗಮನ ಹರಿಸುವುದಿಲ್ಲ. ಸಮಸ್ಯೆಗಳು ಹನುಮಂತನ ಬಾಲದಂತೆ ಬೆಳೆಯುತ್ತಾ ಇವೆ. ಎಲ್ಲ ವರ್ಗಗಳಲ್ಲೂ ಅಸಮಾಧಾನ ಹೆಚ್ಚಾಗುತ್ತಿದೆ.

ಬಂಡವಾಳಶಾಹಿ ಭೂಮಾಲೀಕ ವರ್ಗಗಳ, ಹಾಗೆಯೇ ಪಟ್ಟಭದ್ರ ಹಿತಾಸಕ್ತಿಗಳ, ಸಂಘವಾದಿಗಳ, ಜಾತೀಯ ಹಿತಾಸಕ್ತಿಗಳ ಬೆಂಬಲ, ಪ್ರೋತ್ಸಾಹಗಳಿಂದಾಗಿ ಜಾತೀಯ ಗಲಭೆಗಳು ನಡೆಯುತ್ತಿವೆ. ಜಾತೀಯ ಭಾಷಾ ತಳಹದಿಯ ಸಂಕುಚಿತ ತಿಳುವಳಿಕೆಯ ಸಂಘಟನೆಗಳು ಬೆಳೆದು ಬರುತ್ತಿವೆ. ಅವರೆಲ್ಲ ಅಸಂಘಟಿತ ಕಾರ್ಮಿಕರ, ದುರ್ಬಲ ವರ್ಗದ, ಹರಿಜನ-ಗಿರಿಜನರ ಮಧ್ಯೆ ಹೋಗಿ ಆಮಿಷ ತೋರಿಸಿ ಅವರನ್ನೆಲ್ಲ ಸಂಘಟಿಸಿ ಹೋರಾಟ ನಡೆಸುತ್ತಿದ್ದಾರೆ. ನಮ್ಮ ಶಾಸಕರು ಆರಿಸಿ ಬಂದಂಥ ಕೋಲಾರ ಜಿಲ್ಲೆಯಲ್ಲಿ ನಕ್ಸಲೈಟರು, ಕ್ರಿಶ್ಚನ್ ಎಡ ಸಂಘಟನೆಗಳು, ಕಾಂಗ್ರೆ ಜನತಾದವರು ಅಲ್ಲಸಲ್ಲದ ಅಪಪ್ರಚಾರ ನಡೆಸಿದ್ದಾರೆ. ನಮ್ಮ ನೇತೃತ್ವದಲ್ಲಿ ಸಂಘಟಿತರಾಗಬೇಕಾಗಿದ್ದ ದಲಿತರು, ಹಿಂದುಳಿದ ಜನ ದಲಿತ ಸಂಘರ್ಷ ಸಮಿತಿಯ ಆಶ್ರಯ ಪಡೆಯುತ್ತಿದ್ದಾರೆ. ಕನ್ನಡಿಗರಿಗೆ ನೌಕರಿ ಎಂಬ ವಾದ ದೂರಕ್ಕೂ ಕೇಳಿಸುವಂತಾಗಿದೆ.

ಬೀದರಿನಲ್ಲಿ ನಡೆಯುತ್ತಿರುವ ಜಾತಿಯ ಗಲಭೆ, ಜಾತೀಯ ಗಲಭೆಯ ಹೆಸರಿನಲ್ಲಿ ಬ್ಯಾಂಕುಗಳ ದರೋಡೆಯ ಪ್ರಯತ್ನಗಳೆಲ್ಲ ಪಕ್ಷದ ಕೇಂದ್ರ ಸಮಿತಿಯ ಎಚ್ಚರಿಕೆಯನ್ನು ಪುಷ್ಟೀಕರಿಸುತ್ತದೆ. ವಿದೇಶಿ ಕೈವಾಡವಿಲ್ಲದೆ, ಅಂಥ ಸುಸಂಘಟಿತ ಯೋಜನಾಬದ್ಧ ಜಾತೀಯ ಗಲಭೆಗಳು ನಡೆಯಲು ಸಾಧ್ಯವಿಲ್ಲವೆಂಬುದನ್ನು ಬೀದರ ಘಟನೆ ತೋರಿಸಿಕೊಡುತ್ತದೆ.

1985 ರಲ್ಲಿ ಕೆ.ಜಿ.ಎಫ್.ನಲ್ಲಿ ನಡೆದ 12 ನೇ ಸಮ್ಮೇಳನದಿಂದ 1988 ರಲ್ಲಿ ಬೆಂಗಳೂರಿನಲ್ಲಿ ಸೇರುವ ಸಮ್ಮೇಳನದವರೆಗಿನ ರಾಜ್ಯದ ಆರ್ಥಿಕ ರಾಜಕೀಯ ಪರಿಸ್ಥಿತಿಯನ್ನು ಗಮನಿಸಿದಾಗ 12 ನೇ ಸಮ್ಮೇಳನ ಜನತಾ ಸರಕಾರದ ಕುರಿತು ತಾಳಿದ ನಿರೂಪಣೆ ಸರಿಯೆಂದು ಕಂಡು ಬರುತ್ತದೆ. ಜನರಲ್ಲಿ ಭ್ರಮೆ ಹುಟ್ಟಿಸಿ ಓಟುಗಿಟ್ಟಿಸಿದ ತಾಳಿ-ಧೋತಿ ಯೋಜನೆಯಿಂದ ಜನಸಾಮಾನ್ಯರ ಜೀವನ ಮಟ್ಟ ಎತ್ತರಿಸಲು ಸಾಧ್ಯವಿಲ್ಲೆಂದು ಮನಗಂಡ ಜನತಾ ಸರಕಾರ ಅದನ್ನು ಕೈಬಿಡುವಂತಾಯಿತು. ನಿರುದ್ಯೋಗ ಸಮಸ್ಯೆಯ ಪರಿಹಾರಕ್ಕಾಗಿ ದಿನಕ್ಕೊಂದು ಕೈಗಾರಿಕೆ ಸ್ಥಾಪಿಸುತ್ತೇವೆಂದು ಘೋಷಿಸಿದ ಜನತಾ ಸರಕಾರದಡಿಯಲ್ಲಿ ತಿಂಗಳಿಗೊಂದು ಕಾರ್ಖಾನೆಯೂ ತಲೆ ಎತ್ತದೆ ಸರಕಾರದ ವಕ್ತಾರರ ಹೇಳಿಕೆಯಂತೆ ಒಂದುಸಾವಿರಕ್ಕೂ ಹೆಚ್ಚು ಕಾರ್ಖಾನೆಗಳು ಹಲವಾರು ನೆಪಗಳನ್ನು ಮುಂದೆ ಮಾಡಿ ಮುಚ್ಚುವಂತಾಗಿದೆ. ಮನೆಗೊಂದು ನೌಕರಿಕೊಡುವ ಘೋಷಣೆ ಗಾಳಿಯಲ್ಲಿ ಹಾರಿ ಹೋಗಿದೆ. ಮೇಲ್ಮಟ್ಟದಲ್ಲಿ ಭ್ರಷ್ಟಾಚಾರ ನಿವಾರಣೆಯಾಗಿದೆಂಬ ಮಾಜಿ ಮುಖ್ಯಮಂತ್ರಿಯವರ ಜಂಬದ ಮಾತು ಹುಸಿಯಾಗಿ ಮೇಲಿನಿಂದ ಕೆಳಗಿನವರೆಗೆ ಭ್ರಷ್ಟಾಚಾರ ಗಟ್ಟಿಯಾಗಿ ನೆಲೆ ಊರಿರುವುದನ್ನು ಸಾಮಾನ್ಯ ಜನ ತಮ್ಮ ಅನುಭವಗಳಿಂದ ಖಾತರಿಗೊಳಿಸುವಂತಾಗಿದೆ. ರಾಜಕೀಯ, ಹಣದ ಪ್ರಭಾವದ ಬದ್ಲಿಗಳು ಆಡಳಿತಕ್ಕೆ ಕಳಂಕ ಪ್ರಾಯವಾಗಿವೆ.

ವಿದ್ಯುಚ್ಛಕ್ತಿ, ಹಾಲು, ಬಸ್ಸಿನ ಪ್ರಯಾಣದ ಬೆಲೆಗಳನ್ನು ಹೆಚ್ಚಿಸಿ ಕೇಂದ್ರ ಸರಕಾರದ ಬಂಡವಾಳಶಾಹಿ ನೀತಿಯನ್ನೇ ಅನುಸರಿಸಿದೆ ಜನತಾ ಸರಕಾರ.

ರೈತರ ಸಮಸ್ಯೆಗಳಾವುವೂ ಬಗೆಹರಿಯಲಿಲ್ಲ. ರೈತರಿಗೆ ಪಟ್ಟಾ ಕೊಡುವ ಆಶ್ವಾಸನೆ ಪೂರೈಸಲಿಲ್ಲ. ಹೆಚ್ಚುವರಿ ಭೂಮಿಯನ್ನು ಹಂಚಲಿಲ್ಲ. ನೀರಾವರಿ ಯೋಜನೆಗಳು ನಿಂತು ಬಿಟ್ಟಿವೆ.

ವಿದ್ಯುಚ್ಛಕ್ತಿ, ಹಾಲು, ಬಸ್ ಪ್ರಯಾಣದ ಬೆಲೆ ಹೆಚ್ಚಾದಾಗ ಕಾಂಗ್ರೆಸ್ಸಿನವರು ಅದರ ಲಾಭ ಪಡೆಯುವ ಉದ್ದೇಶದಿಂದ ಧರಣಿ ಸತ್ಯಾಗ್ರಹದ 'ಸೋಗು' ಹಾಕಿದಾಗ ಜನ ಬೆಂಬಲವಿಲ್ಲದೆ ಅದನ್ನು ಬಿಟ್ಟುಕೊಡುವಂಥ ಧಾರುಣ ಪರಿಸ್ಥಿತಿಯನ್ನೆದುರಿಸಬೇಕಾಯಿತು. ಜನತಾ ಸರಕಾರದ ಈ ಬೆಲೆಯೇರಿಕೆ ನೀತಿಯ ವಿರುದ್ಧ ಸಿ.ಪಿ.ಐ. [ಎಂ] ಪಕ್ಷ, ಸಿ.ಪಿ.ಐ. ಜೊತೆಯಲ್ಲಿಯೂ ಸ್ವತಂತ್ರವಾಗಿಯೂ ರಾಜ್ಯದ ಹಲವಾರು ಕಡೆ ಮತಪ್ರದರ್ಶನ, ಧರಣಿಗಳನ್ನು ನಡೆಸಿದ ಪರಿಣಾಮವಾಗಿ ಹೆಚ್ಚಿಸಿದ ಬೆಲೆಗಳ ಪುನರ್ವಿಮರ್ಶೆಗೆ ಒಂದು ಕಮಿಟಿಯನ್ನು ನೇಮಿಸುವ ಆಶ್ವಾಸನೆಯನ್ನು ಅಂದಿನ ಮುಖ್ಯಮಂತ್ರಿಯವರಿಂದ ಪಡೆದು, ಸ್ವಲ್ಪ ಸವಲತ್ತು ಪಡೆಯಲು ಸಾಧ್ಯವಾಯಿತು. ಕಾಂಗ್ರೆಸ್ಸಿನ ರಾಜಕೀಯ ದುರುದ್ದೇಶಕ್ಕೆ ತಡೆ ಉಂಟುಮಾಡಲು ಸಾಧ್ಯವಾಯಿತು. ಬಾಟ್ಲಿಂಗ್ ಪ್ರಕರಣ, ವೆಂಕಟಸ್ವಾಮಿ ಆಯೋಗದ ಶಿಫಾರಸು, ಜನತಾ ಪಕ್ಷದೊಳಗಿನ ಆಂತರಿಕ ಜಗಳಗಳನ್ನೆಲ್ಲ ಉಪಯೋಗಿಸಿಕೊಂಡು ಜನತಾ ಸರಕಾರವನ್ನು ಉರುಳಿಸಲು ಪ್ರಯತ್ನ ನಡೆಸಿದಾಗ. ನಮ್ಮಿಂದ ಸಾಧ್ಯವಾದಷ್ಟು ಮಧ್ಯ ಪ್ರವೇಶಿಸಿ ಕಾಂಗ್ರೆಸ್ಸಿನ ಆಟ ನಡೆಯದಂತೆ ಮಾಡಲು ಸಾಧ್ಯವಾಗಿದೆ.

ಹೆಚ್ಚುವರಿ ಭೂಮಿ ಹಂಚುವಿಕೆಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘವನ್ನು ವಿಶ್ವಾಸದಲ್ಲಿ ತೆಗೆದುಕೊಳ್ಳದೆ ತನ್ನವರನ್ನೇ ಸೇರಿಸಿಕೊಂಡು ಕಮಿಟಿ ರಚಿಸಿ ಭೂಮಿ ಹಂಚುವ ನಾಟಕ ನಡೆಸಿದಾಗ, ಕಳೆದ ಮೂರು ವರ್ಷಗಳಲ್ಲಿ ತಾಲ್ಲೂಕು, ಜಿಲ್ಲಾ, ರಾಜ್ಯಮಟ್ಟದಲ್ಲಿ ಹಲವಾರು ರೀತಿಯ ಚಳುವಳಿ ನಡೆಸಿ ಸಾವಿರಾರು ಎಕರೆ ಸರಕಾರಿ ಮತ್ತು ಅರಣ್ಯ ಭೂಮಿಯನ್ನು ರೈತರು ಆಕ್ರಮಣ ಮಾಡುವಂತೆ, ಅದರಲ್ಲಿ ಉತ್ತು ಬೆಳೆ ಬೆಳೆಯುವಂತೆ ಮಾಡಲು ಸಾಧ್ಯವಾಗಿದೆ. ಕರ್ನಾಟಕ ಪ್ರಾಂತ ರೈತ ಸಂಘ ರೈತ ಸಮುದಾಯದ ಸಮಸ್ಯೆಗಳಿಗೆ ಸರಿಯಾಗಿ ಸ್ಪಂದಿಸಿದ ಕಾರಣದಿಂದಾಗಿಯೇ ರೈತ ಸಂಘದ ಹೋರಾಟಗಳಲ್ಲಿ ಮಧ್ಯಮ ವರ್ಗದ ಹಾಗೆಯೇ ಹರಿಜನ, ಲಂಬಾಣಿ, ಕೃಷಿ ಕೂಲಿಕಾರರೇ ಭೂಮಿಗಾಗಿ ಹಾತೊರೆಯುತ್ತಿರುವ ಬಡ ರೈತರೂ ಸಾವಿರಸಾವಿರ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಮಾಡಲು ಸಾಧ್ಯವಾಗಿದೆ. ಅತಿಕ್ರಮಣ ಮಾಡಿದ ಸರಕಾರಿ, ಫಾರೆಸ್ಟ್ ಭೂಮಿಗಳಿಗೆ ಪಟ್ಟಾಕೊಡುವ ಆಶ್ವಾಸನೆ ಪಡೆಯಲು ಸಾಧ್ಯವಾಗಿದೆ. ಮಾತ್ರವಲ್ಲ ರೈತರ ನಿಜವಾದ ಪ್ರತಿನಿಧಿ ತನ್ನ ರೈತ ಸಂಘ ಮಾತ್ರವೆಂದು ಜಂಭಕೊಚ್ಚಿಕೊಂಡು ರೈತರ ಮಧ್ಯ ಭ್ರಮೆ ಹುಟ್ಟಿಸುತ್ತಿದ್ದ ರುದ್ರಪ್ಪ-ನಂಜುಂಡಸ್ವಾಮಿ ರೈತ ಸಂಘದ ಪ್ರಭಾವವನ್ನು ಕಡಿಮೆ ಮಾಡಲು ಸಾಧ್ಯವಾಗಿದೆ. ಕಳೆದ ಮೂರು ವರ್ಷಗಳ ಸತತ ಪ್ರಯತ್ನದಿಂದಾಗಿಯೇ ಅಖಿಲ ಭಾರತ ಕಿಸಾನ ಸಭಾದ ನೇತೃತ್ವದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಸರಿಯಾದ ಮಾರ್ಗದರ್ಶನದಲ್ಲಿ ರೈತರ ಸಮಸ್ಯೆಗಳಿಗೆ, ರಾಜ್ಯ ಹಾಗೂ ಸ್ಥಳೀಯ ರೈತ ಸಂಘ ಕಮಿಟಿಗಳು ಸ್ಪಂದಿಸಿ ಕಾರ್ಯತತ್ಪರರಾಗಿದ್ದ ಕಾರಣದಿಂದಲೇ ಸೆಪ್ಟೆಂಬರ್ 1ರಿಂದ 15ರವರೆಗಿನ ರೈತ-ಕೃಷಿ ಕಾರ್ಮಿಕರ ರಸ್ತಾರೋಕೋ. ಜೈಲ್‌ಭರೋ ಕಾರ್ಯಕ್ರಮ ಯಶಸ್ವಿಯಾಗಲು ಕಾರಣವಾಯಿತು. ಇದೇ ರೀತಿ ಹಳ್ಳಿಯ ಜನರತ್ತ ಮುಖ ತಿರುಗಿಸಿ ಗ್ರಾಮಾಂತರ ಪ್ರದೇಶದ ಜನರ ಸಮಸ್ಯೆಗಳನ್ನೆತ್ತಿಕೊಂಡು ಹೋರಾಡಿದ್ದೇ ಆದರೆ ಮುಂದಿನ ವರ್ಷಗಳಲ್ಲಿ ನಮ್ಮ ಬಲವನ್ನು ಇಮ್ಮಡಿಗೊಳಿಸಬಹುದಾಗಿದೆ.

ಕೇಂದ್ರ ಸರಕಾರ ಆಡಳಿತಾತ್ಮಕ ಆಜ್ಞೆಯ ಮೂಲಕ, ಲೋಕಸಭೆಯನ್ನು ಕಡೆಗಣಿಸಿ, ಪೆಟ್ರೋಲ್, ಡೀಸೆಲ್ ಚಿಮಣಿ ಎಣ್ಣೆ, ಪಾಮ್ ಎಣ್ಣೆ, ಅಕ್ಕಿ, ಗೋಧಿ, ಸಕ್ಕರೆ, ಸಿಮೆಂಟ್, ಉಕ್ಕುಗಳ ಬೆಲೆ ಹೆಚ್ಚಿಸಿದಾಗ ಪ್ರತಿಭಟಿಸಿದ್ದು ನಮ್ಮ ಪಕ್ಷ, ಕಾರ್ಮಿಕರು ಮತ್ತು ರೈತರು. ಈ ವರ್ಷದ ಮಧ್ಯದಲ್ಲಿ ಪಡಿತರ ಅಂಗಡಿಗಳಲ್ಲಿ ಪೂರೈಸುವ ಅಕ್ಕಿಯಲ್ಲಿ ಕಡಿತ ಮಾಡಿದಾಗ ನಮ್ಮ ಪಕ್ಷದ ದ.ಕ. ಜಿಲ್ಲೆ, ಬೆಂಗಳೂರು ಮೊದಲಾದೆಡೆಗಳಲ್ಲಿ ಪ್ರಭಾವಿಶವಾಗಿ ಚಳುವಳಿ, ಪ್ರಚಾರ-ಪ್ರಕ್ಷೋಭೆ ಮಾಡಿದ ಪರಿಣಾಮವಾಗಿ ಕೇಂದ್ರ ಸರಕಾರ ಹೆಚ್ಚು ಅಕ್ಕಿ ಒದಗಿಸಿದಂತಾಗಿದೆ. ಈ ಕುರಿತು ದ.ಕ. ಜಿಲ್ಲೆಯಲ್ಲಿ ಒಂದೇ ತಿಂಗಳಲ್ಲಿ ನಡೆದ ಧರಣಿ ಮತ್ತು ಜಿಲ್ಲಾ ಮಟ್ಟದ ಬಂದ್ ಎಲ್ಲಾ ವರ್ಗದ ಜನರಿಂದ ಹಾಗೆಯೇ ಪತ್ರಿಕೆಗಳಿಂದ ಪ್ರಶಂಸೆ ಪಡೆದಿರುವುದನ್ನು ನೋಡುವಾಗ, ನಮ್ಮ ಪಕ್ಷದ ಸ್ವತಂತ್ರ ಚಳುವಳಿ ಜನರ ಗಮನವನ್ನು ಸೆಳೆಯುವುದರಲ್ಲಿ ಸರಕಾರದ ಮೇಲೆ ಒತ್ತಾಯ ತರುವುದರಲ್ಲಿ ಯಶಸ್ವಿಯಾಗಿದೆಂದು ಹೇಳಿದರೆ ಅತಿಶಯೋಕ್ತಿಯೇನಲ್ಲ.

ಜನತಾ ಸರಕಾರದ ಜನವಿರೋಧಿ ನೀತಿಗಳನ್ನೂ ಕ್ರಮಗಳನ್ನೂ ವಿರೋಧಿಸುವುದರಲ್ಲಿ, ಅವುಗಳ ರಾಜಕೀಯ ಲಾಭ ಪಡೆಯಲು ಕಾಂಗ್ರೆಸ್ಸಿನವರು ನಡೆಸಿದ ಕುತಂತ್ರಗಳನ್ನು ಸ್ವಲ್ಪ ಮಟ್ಟಿಗಾದರೂ ಬಯಲಿಗೆಳೆಯುವುದರಲ್ಲಿ ನಮ್ಮ ಪಕ್ಷ ಯಶಸ್ವಿಯಾಗಿದೆ. ಕೇಂದ್ರ ಮತ್ತು ರಾಜ್ಯ ಸರಕಾರಗಳ ಜನವಿರೋಧಿ ನೀತಿಗಳ ವಿರುದ್ಧ ಜಂಟಿ ಹೋರಾಟ ನಡೆಸಲು ಸಹಕರಿಸಬೇಕೆಂದು ಭಾರತ ಕಮ್ಯುನಿಸ್ಟ್ ಪಕ್ಷಕ್ಕೆ ಆದರ ನೇತೃತ್ವದ ಸಾಮೂಹಿಕ ಸಂಘನೆಗಳಿಗೆ ಕೇಳಿಕೊಂಡಾಗ, ಅವರ ಸಹಕಾರ ಎಲ್ಲೆಡೆ ಸರಿಯಾಗಿ ಲಭ್ಯವಾಗದ್ದರಿಂದಲೂ. ಕೇಂದ್ರ ಸರಕಾರದ ಜನವಿರೋಧಿ ನೀತಿಗಳ ವಿರುದ್ಧ ಜಂಟಿ ಹೋರಾಟ ನಡೆಸಲು ಸಹಕರಿಸಬೇಕೆಂದು ಜನತಾ ಪಕ್ಷಕ್ಕೆ ಕೇಳಿಕೊಂಡರೂ ಅವರು ಉತ್ಸಾಹ ತೋರಿಸದಿದ್ದುದರಿಂದ ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯ ಕಾರ್ಯಾಚರಣೆ ಮಾಡಿ, ಜನರ ಮಧ್ಯೆ ಆದರ ಶಕ್ತಿ ಬೆಳೆಸಲು ಸಾಧ್ಯವಾಗಲಿಲ್ಲ. ಕೆಲವು ಸಲ ಜಂಟಿಯಾಗಿಯೂ ಕೆಲವು ಸಲ ಐಕ್ಯವಾಗಿಯೂ ನಾವು ಪ್ರಚಾರ ಪ್ರಕ್ಷೋಭೆ ನಡೆಸುತ್ತ ಬಂದುದರಿಂದಲೇ ವಿರೋಧ ಪಕ್ಷಗಳ ಕುರಿತು ಜನರಲ್ಲಿ ವಿಶ್ವಾಸ ಉಂಟುಮಾಡಲು, ಕಾಂಗ್ರೆಸ್ಸಿನ ಕುತಂತ್ರಗಳನ್ನು ಬಯಲಿಗೆಳೆಯಲು ಸಾಧ್ಯವಾಗಿದೆ.

ನಮ್ಮ ಪಕ್ಷ ಚಿಕ್ಕದಾಗಿದ್ದರೂ ಕೂಡ ಜನತಾ ಸರಕಾರವೇ ಆಗಲಿ, ಕೇಂದ್ರದ ಕಾಂಗ್ರೆ ಸರಕಾರವೇ ಆಗಲಿ ತನ್ನ ಬಂಡವಾಳಶಾಹಿ ನೀತಿಗನುಸಾರವಾಗಿ ಜನವಿರೋಧಿ ಕ್ರಮ ಕೈಗೊಂಡಾಗ ತನ್ನ ಎಲ್ಲ ಶಕ್ತಿಗಳನ್ನುಪಯೋಗಿಸಿ ಅವುಗಳ ವಿರುದ್ಧ ಸಕಾಲದಲ್ಲೇ ಪ್ರಚಾರ-ಪ್ರಕ್ಷೋಭೆ ನಡೆಸಲು ನಮಗೆ ಹೇಗೆ ಸಾಧ್ಯವಾಯಿತು ?

ಕಳೆದ 40-45 ವರ್ಷಗಳಿಂದ ನಮ್ಮ ಪಕ್ಷ, ಪಕ್ಷದ ನೇತೃತ್ವದ ಸಾಮೂಹಿಕ ಸಂಘಟನೆಗಳು ತಮ್ಮ ಹೋರಾಟಗಳಿಂದ ತ್ಯಾಗ-ಬಲಿದಾನಗಳಿಂದ ಗಳಿಸಿದ ಪರಂಪರೆ ಒಂದು ಕಡೆಯಾದರೆ, ನಮ್ಮ ಪಕ್ಷದ ಕೇಂದ್ರ ಸಮಿತಿ ಕಾಲಕಾಲಕ್ಕೆ ಸರಿಯಾಗಿ ಮಾರ್ಗದರ್ಶನ ನೀಡುತ್ತಾ ಕಾಂಗ್ರೆಸ್ಸೇತರ ಪಕ್ಷ ಅಧಿಕಾರದಲ್ಲಿರುವ ರಾಜ್ಯದಲ್ಲಿ ಯಾವ ರೀತಿ ಪ್ರಚಾರ ಪ್ರಕ್ಷೋಭೆ ಮಾಡಬೇಕು, ಯಾವ ಥರದಲ್ಲಿ ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳನ್ನು ಒಟ್ಟಿಗೆ ಸೇರಿಸಿ, ಕೇಂದ್ರ ಸರಕಾರದ ವಿರುದ್ಧ ಹೋರಾಡಲು ಅಣಿಗೊಳಿಸಬೇಕು ಹೇಗೆ ನಮ್ಮದೇ ಆದ ಸ್ವತಂತ್ರ ಚಳುವಳಿ ನಡೆಸಿ ಪಕ್ಷದಪ್ರಭಾವ ಮತ್ತು ಬಲ ಹೆಚ್ಚಿಸಬೇಕೆಂದು ಮಾರ್ಗದರ್ಶನ ನೀಡುತ್ತಾ ಬಂದಿರುವುದು ಎರಡನೆಯದಾಗಿದೆ. ಕೇಂದ್ರ ಸಮಿತಿಯ ಸರಿಯಾದ ಮಾರ್ಗದರ್ಶನದಲ್ಲಿ ನಾವು ಕಳೆದ ಮೂರು ವರ್ಷಗಳಲ್ಲಿ ಜನರ ಸಮಸ್ಯೆಗಳನ್ನೆತ್ತಿ ಹಿಡಿದು ಅವುಗಳ ಸಲುವಾಗಿ ನಡೆಸಿದ ಹೋರಾಟ

ರಾಜ್ಯದಲ್ಲಿ ಜನತಾ ಸರ್ಕಾರ ಕಾಂಗ್ರೆಸ್‌ನಂತೆಯೇ ಆಡಳಿತದಲ್ಲಿ ಬಂಡವಾಳ ಶಾಹಿ ನೀತಿಗಳನ್ನು ಅನುಸರಿಸಿದ ಫಲವಾಗಿ ರಾಜ್ಯದ ಜನತೆಯ ಸಮಸ್ಯೆಗಳು ಪರಿಹಾರ ಕಾಣದೆ ಹಾಗೆಯೇ ಉಳಿದಿವೆ.

ಗಳಿಂದಾಗಿ ನಮ್ಮ ಪಕ್ಷದ ಹಾಗೆಯೇ ನಮ್ಮ ಪಕ್ಷದ ನೇತೃತ್ವದ ಸಾಮೂಹಿಕ ಸಂಘಟನೆಗಳ ಬಲ ಹೆಚ್ಚಿಸಿಕೊಂಡಿದ್ದೇವೆ. ಕೇಂದ್ರ ಸಮಿತಿಯ ಸ್ಪಷ್ಟವಾದ ನೀತಿ ನಿರೂಪಣೆ, ಮಾರ್ಗದರ್ಶನದಡಿಯಲ್ಲಿ ನಾವು ನಮ್ಮ ರಾಜ್ಯದಲ್ಲಿ ಇನ್ನೂ ಹೆಚ್ಚು ಪ್ರಭಾವೀವಾದ ಸಂಘಟನೆ ಬೆಳೆಸಿ, ಇನ್ನೂ ಹೆಚ್ಚು ವಿಸ್ತಾರವಾದ, ಪರಿಣಾಮಕಾರಿಯಾದ ಚಳುವಳಿ ನಡೆಸಿ ಜನಪ್ರಿಯರಾಗುತ್ತೇವೆಂಬ ನಿರ್ಧಾರದಿಂದ 13 ನೇ ರಾಜ್ಯ ಸಮ್ಮೇಳನದತ್ತ ಮುನ್ನಡೆಯುತ್ತೇವೆ.

ಏಜೆಂಟರು-ಚಂದಾದಾರರಿಗೆ

ಸೂಚನೆ

'ಐಕ್ಯರಂಗ'ಕ್ಕೆ ಸಂಬಂಧಿಸಿದ ಬಿಲ್‌ಗಳು ಹಾಗೂ ಸಂದಾಯದಲ್ಲಿ ತಮಗೆ ಯಾವ ರೀತಿಯ ವ್ಯತ್ಯಾಸಗಳಿದ್ದರೂ ದಯವಿಟ್ಟು ಬರೆದು ತಿಳಿಸಿ. ಅಕ್ಟೋಬರ್ 5ರ ಒಳಗೆ ತಿಳಿಸಿದರೆ ಲೆಕ್ಕಪತ್ರಗಳನ್ನೆಲ್ಲಾ ಒಮ್ಮೆಗೆ ಪರಿಶೀಲಿಸಿ ತೊಂದರೆಯನ್ನು ಸರಿಪಡಿಸಲು ಅನುಕೂಲವಾಗುವುದು. ಈ ವ್ಯತ್ಯಾಸವಾಗಿರುವ ಹಣದ ಮೊತ್ತಕ್ಕೆ ಸಂಬಂಧಿಸಿದಂತೆ ತಾವು ಅದನ್ನು ಯಾರಅಥವಾಯಾವ ಮೂಲಕ ಐಕ್ಯರಂಗಕ್ಕೆ ತಲುಪಿಸಿದ್ದೀರಿ ಎಂಬುದನ್ನು ಹಾಗೂ ದಿನಾಂಕವನ್ನು ದಯವಿಟ್ಟು ತಿಳಿಸಿ. ಈ ಸಂಬಂಧದಲ್ಲಿ ನಿಮಗೆ ಆದ ತೊಂದರೆಗೆವಿಷಾದಿಸುತ್ತೇವೆ.

—ವ್ಯವಸ್ಥಾಪಕರು

ವಿದೇಶೀ ಆಹಾರ ನೆರವಿನ ಹಿಂದಣ ರಾಜಕೀಯ ನಾಟಕ

ನಮ್ಮ ದೇಶ ಎದುರಿಸುತ್ತಿರುವ ಹಿಂದೆಂದೂ ಕಂಡಿರದಂತಹ ತೀವ್ರ ಬರಗಾಲ ಆಹಾರ ನೆರವು ನೀಡಲು ಕಾದು ಕುಳಿತಿರುವ ಪಾಶ್ಚಿಮಾತ್ಯ ದೇಶಗಳಿಗೆ ಸುವರ್ಣಾವಕಾಶ ಒದಗಿಸಿದೆ. ಮಿಲಿಯ ಗಟ್ಟಲೆ ಹಸಿದ ಹೊಟ್ಟೆಗಳಿಗೆ ಆಹಾರ ನೀಡುವ ಪಾಶ್ಚಿಮಾತ್ಯ ದೇಶಗಳ ಪರೋಪಕಾರಿ ಬುದ್ಧಿಯನ್ನು ಅನೇಕರು ಸ್ವಾಗತಿಸುವುದು ಸಹಜವಾದರೂ ಅಂತಹ ನೆರವು ನಮ್ಮ ಸಮಸ್ಯೆಗಳನ್ನು ನಿಜವಾಗಿಯೂ ಪರಿಹರಿಸಬಲ್ಲುದೆ ? ಆಹಾರ ನೆರವಿನ ಹಿಂದಿರುವ ರಾಜಕೀಯವನ್ನು ತಿಳಿದರೆ ಈ ಪ್ರಶ್ನೆಗೆ ಉತ್ತರವಾಗಿ ಇಲ್ಲ ಎನ್ನಲೇಬೇಕಾಗುತ್ತದೆ.

ಬರಗಾಲದಿಂದ ತತ್ತರಿಸುವ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಪಾಶ್ಚಿಮಾತ್ಯ ರಾಷ್ಟ್ರಗಳು ಕೋಟಿಗಟ್ಟಲೆ ರೂಪಾಯಿ ಮೌಲ್ಯದ ಆಹಾರ ಸಾಮಗ್ರಿಗಳನ್ನು ನೆರವಿನ ರೂಪದಲ್ಲಿ ನೀಡುವುದು ಒಂದು ಪರಿಪಾಠವಾಗಿ ಬೆಳೆದು ಬಂದಿದೆ. ಆದರೆ ಈ ನೆರವಿನ ಹಿಂದೆ ಇರುವ ರಾಜಕೀಯ ಏನೆಂದು ಕೆದಕಿದರೆ ಬೆಳಕಿಗೆ ಬರುವ ಭೀಕರ ವಿವರಗಳು ನಮ್ಮನ್ನು ಆಶ್ಚರ್ಯಚಕಿತರನ್ನಾಗಿ ಮಾಡುತ್ತವೆ.

ಪ್ರತಿವರ್ಷ ಪಾಶ್ಚಿಮಾತ್ಯ ರಾಷ್ಟ್ರಗಳು ತೃತೀಯ ಜಗತ್ತಿನ ರಾಷ್ಟ್ರಗಳಿಗೆ ಮೂರು ಶತ ಕೋಟಿ ಡಾಲರ್ (3900 ಕೋಟಿ ರೂಪಾಯಿ) ಮೌಲ್ಯದ ಆಹಾರ ಸಾಮಗ್ರಿಗಳನ್ನು ನೆರವಿನ ರೂಪದಲ್ಲಿ ನೀಡುತ್ತವೆ. ಇದರಲ್ಲಿ ಶೇ. 70 ವನ್ನು ದೇಣಿಗೆಯಾಗಿ ಅಥವಾ ರಿಯಾಯ್ತಿದರದಲ್ಲಿ ನೀಡಲಾಗುತ್ತದೆ. ಉಳಿದ ಶೇ. 30 ನ್ನು ಆಹಾರ ನೆರವನ್ನು ಯೋಜನಾ ನೆರವು ಅಥವಾ 'ಮಾಡಿದ ಕೆಲಸಕ್ಕೆ ಆಹಾರ' ಕಾರ್ಯಕ್ರಮಗಳಿಗಾಗಿ ನೀಡಲಾಗುತ್ತದೆ. ಆದರೆ ಕಳೆದ ಕೆಲವು ವರ್ಷಗಳಿಂದ ಅನೇಕ ವಿಮರ್ಶಕರು ಆಹಾರ ನೆರವಿನ ಸಫಲತ್ವವನ್ನು ಪ್ರಶ್ನಿಸಿದ್ದಾರೆ. ಯಾಕೆಂದರೆ ಪಾಶ್ಚಿಮಾತ್ಯ ದೇಶಗಳ ಆಹಾರ ನೆರವು ಯೋಜನೆಗಳು ಹಸಿವಿನಿಂದ ಜನ ಸಾಯುವುದಕ್ಕೆ ಯಾವುದು ಕಾರಣವಾಗಿರುತ್ತದೋ ಆ ಕಾರಣಗಳ ಮೇಲೆ ಹೆಚ್ಚಿನ ಪರಿಣಾಮ ಬೀರುವುದಿಲ್ಲ ಮತ್ತು ನೆರವು ಪಡೆಯುವ ದೇಶದೊಳಗಿರುವ ಅಧಿಕಾರ ಮತ್ತು ಸವಲತ್ತುಗಳ ಭದ್ರಕೋಟೆಯನ್ನು ದುರ್ಬಲಪಡಿಸಲು ಏನೂ ಮಾಡುವುದಿಲ್ಲ. ಹೆಚ್ಚಾಗಿ ಇಂತಹ ನೆರವು ಯೋಜನೆಗಳು ಇದಕ್ಕೆ ವ್ಯತಿರಿಕ್ತವಾಗಿ ವರ್ತಿಸಿ ಅಧಿಕಾರ ಚೌಕಟ್ಟಿನ ಅಸಮತೋಲವನ್ನು ಇನ್ನಷ್ಟು ಬಲಪಡಿಸುತ್ತವೆ.

1954 ರಲ್ಲಿ ಆರಂಭಗೊಂಡ ಅಮೆರಿಕಾದ 'ಶಾಂತಿಗಾಗಿ ಆಹಾರ' ಕಾರ್ಯಕ್ರಮದೊಂದಿಗೆ ಆಧುನಿಕ ಯುಗದ ಆಹಾರ ನೆರವು ಯೋಜನೆ ಆರಂಭಗೊಂಡಿತು. ರಸಗೊಬ್ಬರ, ಕೀಟನಾಶಕಗಳು ಮತ್ತು ಸುಧಾರಿತ ಬೀಜಗಳ ಫಲವಾಗಿ ಪಾಶ್ಚಿಮಾತ್ಯ ದೇಶಗಳು ಕೃಷಿ ಉತ್ಪನ್ನಗಳಲ್ಲಿ ವಿಪರೀತ ಮಿಗತೆಯನ್ನು ಎದುರಿಸುತ್ತಿದ್ದ ದಿನಗಳು ಅವು. ಅಮೇರಿಕಾ ಒಂದರಲ್ಲಿ ಈ ಮಿಗತೆ ಕೃಷ್ಯುತ್ಪನ್ನಗಳ ದಾಸ್ತಾನಿಗಾಗಿ ಅಮೆರಿಕನ್ ತೆರಿಗೆದಾರರಿಗೆ ದಿನ ಒಂದಕ್ಕೆ ಹತ್ತು ಲಕ್ಷ ಡಾಲರ್‌ಗಳ ವೆಚ್ಚವಾಗುತ್ತಿತ್ತು. ಧಾನ್ಯದ ದಾಸ್ತಾನಿಗೇ ಇಷ್ಟೊಂದು ಬೃಹತ್ ಮೊತ್ತವನ್ನು ವ್ಯಯಿಸುವ ಬದಲು ಯಾವುದಾದರೂ ಬಡದೇಶವನ್ನು ಅದಕ್ಕೆ ನೆರವು ನೀಡುವುದು ಹೆಚ್ಚು ಲಾಭದಾಯಕವಾಗಿತ್ತು. ಪರಿಣಾಮವಾಗಿ ಆ ಬಳಿಕದ ವರ್ಷಗಳಲ್ಲಿ ಅಮೇರಿಕಾ ಹಾಗೂ ಪಾಶ್ಚಿಮಾತ್ಯ ದೇಶಗಳು ತೃತೀಯ ಜಗತ್ತಿನ ರಾಷ್ಟ್ರಗಳ ಮೇಲೆ ಆಹಾರ ನೆರವು ಹೇರಿ ಜಗತ್ತಿನ ಕಣ್ಣಿನಲ್ಲಿ ತಾವು ಮಹಾಕರುಣಾಳುಗಳೆನ್ನಿಸಿಕೊಳ್ಳುತ್ತ ಈ ಬಡದೇಶಗಳು ಪಶ್ಚಿಮ ಜಗತ್ತನ್ನು ಹೆಚ್ಚು ಹೆಚ್ಚು ಅವಲಂಬಿಸುವಂತೆ ಮಾಡಿದವು. ಈ ಬಡದೇಶಗಳ ಆಹಾರ ಉತ್ಪಾದನೆ ಮತ್ತು ಹಸಿದ ಬಾಯಿಗಳ ನಡುವೆ ಅಸಮತೋಲ ಇನ್ನಷ್ಟು ಹೆಚ್ಚಿತು. ಅಮೆರಿಕದ ಮಿಗತೆ ಆಹಾರಕ್ಕೆ ಬಲಿಯಾದ ಅನೇಕ ಹಿಂದುಳಿದ ರಾಷ್ಟ್ರಗಳು ಮುಖ್ಯವಾಗಿ ಕೃಷಿಪ್ರಧಾನ ದೇಶಗಳು ಇಂತಹ ದೇಶಗಳನ್ನು ಅಮೆರಿಕದ ಕಡೆರಹಿತ 'ಪಬ್ಲಿಕ್ ಲಾ 480' ಅಥವಾ 'ಪಿ ಎಲ್ 480' ರಫ್ತುಗಳು ಈ ದೇಶಗಳು ಉತ್ಪಾದಿಸುವ ಸಂಬಂಧಿತ ಸರಕುಗಳ ಉತ್ಪಾದನೆಯನ್ನು ಕುಂಠಿತಗೊಳಿಸಿ ದೇಶದ ಬಂಡವಾಳ ಹೂಡಿಕೆ ವ್ಯವಸ್ಥೆಯನ್ನು ತೊಂದರೆಗೊಳಪಡಿಸುತ್ತವೆ.

'ನ್ಯೂಸ್ ವೀಕ್' ಪತ್ರಿಕೆಯ ವರದಿಯೊಂದರ ಪ್ರಕಾರ 1977 ರಲ್ಲಿ ಚಂಡಮಾರುತಕ್ಕೆ ಗುರಿಯಾದ ಆಂಧ್ರ ಪ್ರದೇಶದಲ್ಲಿ ಆಹಾರ ನೆರವು ಯೋಜನೆ ಸಾವಿರಾರು ಜನ ಹಸಿವಿನಿಂದ ಸಾಯುವುದನ್ನು ತಪ್ಪಿಸಿತು. ಆದರೆ ಅದೇ ವೇಳೆ ಸ್ಥಳೀಯ ಮಾರುಕಟ್ಟೆಯಲ್ಲಿ ರೈತರಿಗೆ ಅವರ ಕೃಷ್ಯುತ್ಪನ್ನಗಳಿಗೆ ದೊರೆಯುವ ಬೆಲೆಯನ್ನು ಕಡಿತಗೊಳಿಸಿತು. ಸಾವಿರಾರು ರೈತರ ಸೀಮಾಂತ ಲಾಭಗಳು ಕಣ್ಮರೆಯಾಗಿ ಈ ರೈತರು ಏಕಾಏಕಿಯಾಗಿ ನಿರ್ಗತಿಕರಾದರು.

ಇಂತಹದೇ ಇನ್ನೊಂದು ಘಟನೆ ಬಾಂಗ್ಲಾ ದೇಶದಲ್ಲಿ ಸಂಭವಿಸಿತು. ವಿಶ್ವಸಂಸ್ಥೆಯಲ್ಲಿ ಅಮೆರಿಕಾದ ರಾಯಭಾರಿಯಾಗಿದ್ದ ಡೊನಾಲ್ಡ್ ಮೆಕ್‌ಹೆನ್ರಿ ನಡೆಸಿದ ಅಧ್ಯಯನದಿಂದ 1980 ಮತ್ತು 1982 ನಡುವೆ ಬಾಂಗ್ಲಾದೇಶಕ್ಕೆ ವಿದೇಶಗಳಿಂದ ನೆರವಿನ ರೂಪದಲ್ಲಿ ಬಂದ ಎಂಟು ಮಿಲಿಯ ಟನ್ ಆಹಾರ ಸಾಮಗ್ರಿಯ ಹತ್ತು ಶೇಕಡಾ ಕೂಡ ಬಡವರ ಹೊಟ್ಟೆಗೆ ದಕ್ಕಲಿಲ್ಲವೆಂಬ ಅಂಶ ಬೆಳಕಿಗೆ ಬಂತು. ಆಹಾರ ನೆರವಿನ ಸಿಂಹಪಾಲು ಅನುಕೂಲಸ್ಥ ವರ್ಗಗಳಿಗೆ ಹೋಯಿತು. ಅದೇ ವೇಳೆ ಸಾವಿರಾರು ಬಡವರು, ಮುಖ್ಯವಾಗಿ ರೈತರು ಹಸಿವಿನಿಂದ ಸತ್ತರು. ಇಷ್ಟೇ ಅಲ್ಲದೆ, 1975ರಲ್ಲಿ ಆರಂಭವಾದ 'ಮಾಡಿದ ಕೆಲಸಕ್ಕೆ ಆಹಾರ' (food for work) ಯೋಜನೆಯ ಪ್ರಕಾರ ಬಾಂಗ್ಲಾದೇಶವನ್ನು ಬರಗಾಲದ ದವಡೆಯಿಂದ ಪಾರು ಮಾಡಲು 45 ಸಾವಿರ ಟನ್ ಆಹಾರ ಸಾಮಗ್ರಿಗಳನ್ನು ಅಲ್ಲಿಗೆ ಕಳುಹಿಸಲಾಯಿತು. 1980 ರ ಸುಮಾರಿಗೆ 2,20,000 ಟನ್‌ಗಿಂತಲೂ ಹೆಚ್ಚು ಆಹಾರವನ್ನು ವಿತರಿಸುತ್ತಲೇ ಇದ್ದರು. ದೇಶದ ಆಹಾರ ಪರಿಸ್ಥಿತಿ ಗಣನೀಯವಾಗಿ ಸುಧಾರಿಸಿದರೂ ಕೂಡ ದೇಶಕ್ಕೆ ಆಮದಾದ ಆಹಾರದ ನೆರವಿನ ಪರಿಮಾಣ ನಾಲ್ಕು ಪಟ್ಟು ಹೆಚ್ಚಿತ್ತು. ಹಾಗಾದರೆ ಈ ಆಹಾರ ಸಾಮಗ್ರಿಗಳು ಯಾರ ಕಿಸೆಗೆ ಹೋದವೆಂಬುದನ್ನು ಊಹಿಸಿಕೊಳ್ಳಬಹುದು.

ಆಹಾರ ನೆರವು ಯೋಜನೆ ಅನುಷ್ಠಾನದಲ್ಲಿ ಎಷ್ಟೊಂದು ಕುಲಗೆಟ್ಟು ಹೋಗುತ್ತದೆ ಎಂಬುದಕ್ಕೆ ಇನ್ನೊಂದು ಉತ್ತಮ ಉದಾಹರಣೆ ಕೊಲಂಬಿಯಾ. 1955 ಮತ್ತು 1971 ರ ನಡುವೆ ಕೊಲಂಬಿಯಾ ಅಮೇರಿಕಾದಿಂದ ಒಂದು ಮಿಲಿಯ ಟನ್‌ಗಿಂತಲೂ ಹೆಚ್ಚು ಗೋಧಿಯನ್ನು ಆಮದು ಮಾಡಿಕೊಂಡಿತು. ಈ ಗೋಧಿಯನ್ನು ಸ್ಥಳೀಯವಾಗಿ ಆಮದು ದರಕ್ಕಿಂತ ಕಡಿಮೆ ವೆಚ್ಚದಲ್ಲಿ ಬೆಳೆಯುವುದು ಸಾಧ್ಯವಿತ್ತು. ಏನೇ ಇರಲಿ, ಅಮೇರಿಕಾ ತಂದು ಸುರಿದ ಗೋಧಿಯಿಂದಾಗಿ ಕೊಲಂಬಿಯಾದ ರೈತರಿಗೆ ತಮ್ಮ ಕೃಷ್ಯುತ್ಪನ್ನಗಳಿಗೆ ದೊರೆಯುತ್ತಿದ್ದ ಬೆಲೆಯಲ್ಲಿ ಶೇ. 50 ಕಡಿತವಾಯಿತು. 1955 ರಿಂದ 1971 ರ ನಡುವಣ ಅವಧಿಯಲ್ಲಿ ಕೊಲಂಬಿಯಾದ ಗೋಧಿ ಉತ್ಪಾದನೆ ಶೇ. 69 ರಷ್ಟು ಕುಸಿಯಿತು. ಗೋಧಿಯ ಆಮದು ಮಾತ್ರ ಶೇ. 800 ರಷ್ಟು ಹೆಚ್ಚಿತು.

ನಮ್ಮ ದೇಶದಲ್ಲಿ ಕೂಡ ಕೃಷಿಯ ಬೆಳವಣಿಗೆಗೆ ಆಹಾರ ಆಮದಿನಿಂದ ತಡೆಯುಂಟಾಗಿದೆ ಎನ್ನುತ್ತಾರೆ ದೇಶದ ಕೆಲವು ಪ್ರಮುಖ ಕೃಷಿ ಅರ್ಥ ಶಾಸ್ತ್ರಜ್ಞರು. ಉದಾಹರಣೆಗೆ ಪಿ.ಎಲ್. 480 ನೆರವು ಭಾರತದ ಕೃಷಿರಂಗದ ಪ್ರಮುಖ ಸಮಸ್ಯೆಯಾದ ಬಂಡವಾಳ ಕೊರತೆಯನ್ನು ಪರಿಹರಿಸುವ ನಿಟ್ಟಿನಲ್ಲಿ ಯಾವುದೇ ಕಾಣಿಕೆ ಸಲ್ಲಿಸಲಿಲ್ಲ. ನಿಜ ಹೇಳಬೇಕೆಂದರೆ ಮಾರುಕಟ್ಟೆಯಿರುವ ಕೊರತೆಯ ಪ್ರಮಾಣಕ್ಕಿಂತ ತುಂಬ ಹೆಚ್ಚಿನ ಪ್ರಮಾಣದಲ್ಲಿ ಆಮದಾದ ಪಿ.ಎಲ್. 480 ಆಮದುಗಳು ಬೆಲೆ ಕುಸಿತ ಉಂಟುಮಾಡಿ ಭಾರತದ ಕೃಷಿರಂಗ ಆಹಾರದಲ್ಲಿ ಸ್ವಾವಲಂಬಿಯಾಗದಂತೆ ತಡೆದವು.

ಆಹಾರ ನೆರವು ಯೋಜನೆಗೆ ಕೂಡ ಸ್ಥಳೀಯ ಉತ್ಪನ್ನಗಳಿಗೆ ಬೇಕಾಗುವಷ್ಟೇ ಮುಖ್ಯವಾಗಿ ದಾಸ್ತಾನು ಮತ್ತು ಸಾಗಾಣಿಕೆಗೆ ಮೂಲಭೂತ ಚೌಕಟ್ಟು ಹಾಗೂ ಸಿದ್ಧತೆ ಬೇಕಾಗುತ್ತದೆ. ಇದರಿಂದಾಗಿ ದೇಶದಲ್ಲಿ ಇರುವ ಅಲ್ಪಸ್ವಲ್ಪ ಆಹಾರ ಉತ್ಪನ್ನಗಳು ತೀವ್ರ ಪೈಪೋಟಿ ಎದುರಿಸಬೇಕಾಗುತ್ತದೆ. ಸಣ್ಣ ರೈತರು ಮತ್ತು ಹಿಡುವಳಿದಾರರು ತಮ್ಮ ಕೃಷ್ಯುತ್ಪನ್ನಗಳನ್ನು ಕಟಾವು ಮುಗಿದ ಕೂಡಲೆ ಬೆಲೆಗಳು ಅತ್ಯಂತ ಕಡಿಮೆ ಇರುವ ಸಮಯದಲ್ಲೆ ಮಾರಾಟ ಮಾಡುವುದು ಅನಿವಾರ್ಯವಾಗಲು ಇದೂ ಒಂದು ಕಾರಣ.

ಪಿ ಎಲ್ 480 ಯಂತಹದೇ ಇನ್ನೊಂದು ಕಾರ್ಯಕ್ರಮ 'ತಾಯಿ ಮಗು ಆರೋಗ್ಯ' ಕಾರ್ಯಕ್ರಮ. ಈ ಕಾರ್ಯಕ್ರಮದ ಪ್ರಕಾರ ಸಿದ್ಧಪಡಿಸಿದ ಆಹಾರವನು ಒಂದೋ ಕೆಲವು ಕೇಂದ್ರಗಳಲ್ಲಿ ವಿತರಿಸಲಾಗುತ್ತದೆ ಅಥವಾ ರೇಷನ್ನಿನ ರೂಪದಲ್ಲಿ ಮನೆಗೆ ಕೊಡಲಾಗುತ್ತದೆ. ಭಾರತ ಕೂಡ ಒಮ್ಮೆ ಈ ಕಾರ್ಯಕ್ರಮದಿಂದ ಪ್ರಯೋಜನ ಪಡೆಯುವ ಒಂದು ಪ್ರಮುಖ ದೇಶವಾಗಿತ್ತು. ಆದರೆ 1980 ರಲ್ಲಿ ಅಮೆರಿಕ ತಾನೇ ಸ್ವತಃ ಕೈಗೊಂಡ ಅಧ್ಯಯನದಿಂದ "ಜನರ ಪೌಷ್ಟಿಕಾಂಶ ಸ್ಥಿತಿ ಸುಧಾರಿಸಿದಂತೆ ಕಂಡುಬರುವುದಿಲ್ಲ"ವೆಂಬ ತೀರ್ಮಾನಕ್ಕೆ ಬಂತು. ಅಮೆರಿಕದ ಆಹಾರ ನೆರವು ಕುರಿತಾದ ವರದಿಯೊಂದು ಸಮಾಜದತ್ಯಂತ ಕೆಳಸ್ತರದ ಮಕ್ಕಳು ಶಾಲೆಗೆ ಹೋಗುವುದೆ ಇಲ್ಲವೆಂಬುದನ್ನು ಗುರುತಿಸಿತು. ಉದಾಹರಣೆಗೆ, ಶ್ರೀಲಂಕಾದಲ್ಲಿ 'ತಾಯಿ ಮಗು ಆರೋಗ್ಯ' ಕಾರ್ಯಕ್ರಮದನ್ವಯ ಆಹಾರ ಪಡೆಯುತ್ತಿದ್ದ ಎಷ್ಟೊ ಮಕ್ಕಳು ನಿಜವಾಗಿಯೂ ಬಡ ಮಕ್ಕಳಲ್ಲ. ಯಾಕೆಂದರೆ ನಿಜವಾಗಿಯೂ ಬಡ ಮಕ್ಕಳು (ಸಮಾಜದ ಅತ್ಯಂತ ಕೆಳಸ್ತರದ ಮಕ್ಕಳು) ಶಾಲೆಗೆ ಹೋಗುತ್ತಿರಲಿಲ್ಲ !

ಆಹಾರ ನೆರವು ಕಾರ್ಯಕ್ರಮಗಳು ಭ್ರಷ್ಟಾಚಾರಕ್ಕೆ ದಾರಿ ಮಾಡಿಕೊಡುತ್ತವೆ. ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ದೊರೆಯುವ ಆಹಾರ ಸಾಮಗ್ರಿಗಳನ್ನು ಅನೇಕ ವೇಳೆ ಅಧಿಕಾರಿಗಳು ಲಪಟಾಯಿಸಿ ಮಾರಾಟ ಮಾಡುತ್ತಾರೆ. ಆಕ್ಸ್‌ಫ್ಯಾಮ್ ಎಂಬ ನೆರವು ಸಂಸ್ಥೆಯ ಸಮೀಕ್ಷಾ ನಿರ್ದೇಶಕರಾಗಿದ್ದ ಆಂಡ್ರ್ಯೂ ಜೆಂಕಿನ್ ಹೇಳುತ್ತಾರೆ. ಬಾಂಗ್ಲಾದೇಶದಲ್ಲಿ ಹತ್ತು ಹಳ್ಳಿಗಳ ಒಂದು ಪ್ರದೇಶದಲ್ಲಿ 'ಮಾಡಿದ ಕೆಲಸಕ್ಕೆ ಆಹಾರ' ಸ್ಕೀಮಿನ ಪ್ರಕಾರ ನೀಡಲಾದ ಗೋಧಿಯ 76 ಶೇಕಡಾ ಗೋಧಿ ಸ್ಥಳೀಯ ರಾಜಕಾರಣಿಗಳ ಮತ್ತು ಅಧಿಕಾರಿಗಳ ಕಿಸೆಗೆ ಸೇರಿ ಕಣ್ಮರೆಯಾಯಿತು. ಮತ್ತು ಉಳಿದ ಗೋಧಿಯ ಹೆಚ್ಚಿನ ಪಾಲು ಅವರ ಗಿರಾಕಿಗಳಿಗೆ ಮತ್ತು ಸಂಬಂಧಿಕರಿಗೆ ಹೋಯಿತು.

ಮಿಲಿಟರಿ ಆಡಳಿತವಿರುವ ದೇಶಗಳಿಗೆ ನೆರವಿನ ರೂಪದಲ್ಲಿ ಬರುವ ಆಹಾರ ಸಾಮಗ್ರಿಗಳನ್ನು ಹೊತ್ತ ಹಡಗುಗಳು ಮಿಲಿಟರಿ ನೆಲೆಗಳಲ್ಲಿಯೆ ತಂಗುತ್ತವೆ. ವಿದೇಶೀ ನೆರವಿನ ಕುರಿತು ನಡೆದಿರುವ ಪ್ರಮುಖ ಅಧ್ಯಯನವೊಂದರ ಫಲಶ್ರುತಿಯಾದ "ಅಗ್ನೆಸ್ಟ್ ದಿ ಗ್ರೈನ್" ಎಂಬ ಪುಸ್ತಕದ ಲೇಖಕ ಟೋನಿ ಜಾಕ್ಸನ್‌ರ ಅಭಿಪ್ರಾಯದ ಪ್ರಕಾರ ಅಭಿವೃದ್ಧಿಶೀಲರಾಷ್ಟ್ರಗಳಿಗೆ ಹರಿದು ಬರುವ ವಿದೇಶೀ ಆಹಾರ ನೆರವು ಹೆಚ್ಚಾಗಿ ಅಲ್ಲಿ ಪ್ರಜಾಸತ್ತೆಯನ್ನು ಹತ್ತಿಕ್ಕುವ ಸರಕಾರಗಳ ಕೈ ಬಲಪಡಿಸುತ್ತದೆ. ಇನ್ನೊಂದು ವರದಿಯ ಪ್ರಕಾರ ಯುರೋಪಿಯನ್ ಆರ್ಥಿಕ ಸಮುದಾಯ ನೀಡುವ ಆಹಾರ ನೆರವು ಯುರೋಪಿನ ಮಿಗತೆ ಆಹಾರವನ್ನು ಬಡ ರಾಷ್ಟ್ರಗಳಿಗೆ ಹಂಚುವ ಒಂದು ಅದಕ್ಷ ವಿಧಾನ. ಲೆಕ್ಕವಿಲ್ಲದಷ್ಟು ಆಕಸ್ಮಿಕಗಳು, ವಿಳಂಬ,

ಶೀತಲ

ಜವಾಬ್ದಾರಿಯ ಬಗ್ಗೆ ಜಗಳ, ಅಧಿಕಾರಶಾಹಿ ಒಡ್ಡುವ ಅಡೆತಡೆಗಳು ಮಾತ್ರವಲ್ಲದೆ ಆಹಾರ ನೆರವು ಹೇಗೆ ಅನುಷ್ಠಾನಗೊಳ್ಳುವಾಗ ಕಾರ್ಯವೆಸಗುತ್ತದೆ ಮತ್ತು ಅದರಿಂದ ಏನು ಪರಿಣಾಮವಾಗುತ್ತದೆಂಬ ಬಗ್ಗೆ ಯಾವ ನಿಯಂತ್ರಣವೂ ಇರುವುದಿಲ್ಲ.

ಇಂತಹ ಒಂದು ಪರಿಸ್ಥಿತಿಯಲ್ಲಿ ಆಹಾರ ನೆರವನ್ನು ನೆರವು ನೀಡುವವರಿಗೆ ಒಂದು 'ಲಾಭದಾಯಕ ವ್ಯಾಪಾರ'ವೆಂದು ಕರೆಯುವುದೇ ಅತ್ಯಂತ ಸೂಕ್ತವಾದೀತು. ಅಮೆರಿಕದ ಪಿ ಎಲ್ 480 ಕೂಡ ಇದಕ್ಕೆ ಹೊರತಾಗಿಲ್ಲ. ಅಮೆರಿಕದ ಮಿಗತೆ ಕೃಷ್ಯುತ್ಪನ್ನಗಳನ್ನು ಪಿ ಎಲ್ 480 ಕಾರ್ಯಕ್ರಮಗಳ ಮೂಲಕ ವಿದೇಶಿ ಸರಕಾರಗಳಿಗೆ ಮಾರಾಟ ಮಾಡಲಾಗುತ್ತದೆ. ಮಾರಾಟ ಮಾಡಿದಾಗ 'ನೆರವು' ಪಡೆದ ದೇಶದ ಸ್ಥಳೀಯ ಕರೆನ್ಸಿಯನ್ನು ಆ ದೇಶದಲ್ಲಿ ಅಮೆರಿಕನ್ ಕಂಪೆನಿಗಳಿಗೆ ಆರ್ಥಿಕ ನೆರವು ನೀಡಲು ಬಳಸಲಾಗುತ್ತದೆ. ಅಂದರೆ, ನಾವು ಪಿಎಲ್ 480 ಕಾರ್ಯಕ್ರಮದನ್ವಯ ಕೊಂಡುಕೊಳ್ಳುವ ಗೋಧಿಗೆ ಡಾಲರ್‌ಗಳಲ್ಲಿ ಹಣ ತರುವ ಬದಲು ರೂಪಾಯಿಗಳಲ್ಲಿ ಕೊಡುತ್ತೇವೆ! ಹೀಗೆ 1950 ರಿಂದ 1971ರ ನಡುವಣ ಅವಧಿಯಲ್ಲಿ 'ಕೂಲಿ ಸಾಲ ನೀತಿ'ಯನ್ವಯ ಅಮೆರಿಕದ ಸರಕಾರ ಅನೇಕ ಅಮೆರಿಕನ್ ಕಂಪೆನಿಗಳಿಗೆ 419 ಮಿಲಿಯ ಡಾಲರ್ ಸಾಲ ನೀಡಿತ್ತು. ಈ ಕಂಪೆನಿಗಳು 31 ದೇಶಗಳಲ್ಲಿ ಒಂದೋ ತಾವು ಆದ್ವಾಗಲೇ ಹೊಂದಿದ್ದ ತಮ್ಮ ವಾಣಿಜ್ಯ ಉದ್ಯಮಗಳನ್ನು ವಿಸ್ತರಿಸಿಕೊಂಡವು ಅಥವಾ ಹೊಸ ಉದ್ಯಮಗಳನ್ನು ಸ್ಥಾಪಿಸಿದವು. ಈ ಕಂಪನಿಗಳಿಗೆ ಸಾಲ ನೀಡಿದ್ದು ಅಮೇರಿಕನ್ ಸರಕಾರ; ಆದರೆ ಆ ಸಾಲದ ಹಣ ಪಾವತಿ ಮಾಡಿದ್ದು ಆಹಾರ ನೆರವು ಪಡೆದ ದೇಶಗಳು ತಾವು ಸ್ಥಳೀಯ ಕರೆನ್ಸಿಯಲ್ಲಿ ನೀಡಬೇಕಾದ ಹಣವನ್ನು ! ಒಮ್ಮೆ ನಮ್ಮ ದೇಶದ ಸುಮಾರು ಒಂದು ಕೋಟಿ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಉಪಹಾರ ನೀಡುತ್ತಿದ್ದ 'ಕೇರ' (CARE) ಆಹಾರ ನೆರವು ಯೋಜನೆ ಕೂಡ ಕೊನೆಗೆ ಒಂದು ಬಲಿಷ್ಠ ವ್ಯಾಪಾರಿ ಸಂಸ್ಥೆಯೇ ಆಯಿತು ಎನ್ನುತ್ತಾರೆ ಸುಮಂತ ಬ್ಯಾನರ್ಜಿ. 'ಇಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲಿ' ಎಂಬ ಪತ್ರಿಕೆಯಲ್ಲಿ ಬರೆದ ತನ್ನ ಒಂದು ಲೇಖನದಲ್ಲಿ. 'ಕೇರ್' ಕಾರ್ಯಕ್ರಮದನ್ವಯ ಅಮೇರಿಕ ಭಾರತಕ್ಕೆ ನೀಡಿದ ಆಹಾರ ಸಾಮಗ್ರಿಯ ಬೆಲೆ 26 ರಿಂದ 35 ಮಿಲಿಯ ಡಾಲರಿನಷ್ಟಾದರೆ ಅದೇ ಅವಧಿಯಲ್ಲಿ ಅಮೇರಿಕದ ಅನೇಕ ಖಾತೆಗಳಿಗೆ ಭಾರತ ಪ್ರತಿ ವರ್ಷ ನೀಡಿದ ಮೊತ್ತ 19 ರಿಂದ 21 ಮಿಲಿಯ ಡಾಲರ್ !

ಕೊನೆಯದಾಗಿ. ಆಹಾರ ನೆರವು ರಾಜಕೀಯ ಲೆಕ್ಕಾಚಾರದ ಹೊರತಾದ ನೆರವು ಅಲ್ಲ. ಯಾವುದೇ ನೆರವಿಗೆ ಸಂಬಂಧಿಸಿದಂತೆ ನೆರವು ನೀಡುವ ದೇಶ ಹಾಕುವ ಶರತ್ತುಗಳು ಆ ದೇಶದ ಹಿತಾಸಕ್ತಿಗಳನ್ನು ಕಾಪಾಡುವಂತಹ ಶರತ್ತುಗಳಾಗಿರುತ್ತವೆ. ಹೀಗೆ ಅನೇಕ ಸಂದರ್ಭಗಳಲ್ಲಿ ಆಹಾರ ನೆರವನ್ನು ಒಂದು ರಾಜಕೀಯ ಅಸ್ತ್ರವಾಗಿ ಬಳಸಲಾಗಿದೆ. ಉದಾಹರಣೆಗೆ 70ರ ದಶಕದ ಮಧ್ಯಭಾಗದಲ್ಲಿ ಅಮೇರಿಕ ನೀಡುತ್ತಿದ್ದ ಆಹಾರ ನೆರವು ಕೇವಲ ನಾಲ್ಕು ದೇಶಗಳಿಗೆ ಮಾತ್ರ ಹೋಗುತ್ತಿತ್ತು– ಜೋರ್ಡಾನ್, ಕಂಬೋಡಿಯಾ, ದಕ್ಷಿಣ ವಿಯೆಟ್ನಾಂ ಮತ್ತು ಇಸ್ರೇಲ್.

ಅನೇಕ ಸಂದರ್ಭಗಳಲ್ಲಿ ಭಾರತಕ್ಕೆ ನೀಡುತ್ತಿದ್ದ ಆಹಾರ ನೆರವನ್ನು ಕೂಡ ಅಮೆರಿಕ ಒಂದು ರಾಜಕೀಯ ಅಸ್ತ್ರವಾಗಿ ಬಳಸಿತು. ಒಂದು ಉದಾಹರಣೆ : 1966 ರಲ್ಲಿ ಭಾರತ ಭಯಾನಕವಾದ ಕ್ಷಾಮದಿಂದ ತತ್ತರಿಸುತ್ತಿದ್ದಾಗ ಪಿ ಎಲ್ 480 ಆಹಾರ ನೆರವನ್ನು ಅಮೆರಿಕನ್ ಕಂಪೆನಿಗಳು ಭಾರತದಲ್ಲಿ ತಳ ಊರಲು ಭಾರತ ಅವಕಾಶ ನೀಡುವಂತೆ ಮಾಡಲು ಬಳಸಿಕೊಳ್ಳಲಾಯಿತು. ಆ ಸಮಯದಲ್ಲಿ ಅನೇಕ ಅಮೇರಿಕನ್ ತೈಲ ಕಂಪೆನಿಗಳು ಭಾರತದಲ್ಲಿ ರಸಗೊಬ್ಬರ ಕಾರ್ಖಾನೆಗಳನ್ನು ಸ್ಥಾಪಿಸಲು ಭಾರತ ಸರಕಾರದ ಜೊತೆ ಮಾತುಕತೆ ನಡೆಸುತ್ತಿದ್ದವು. ಗೊಬ್ಬರದ ವಿತರಣೆ ಮತ್ತು ಮಾರಾಟ ತನ್ನ ಕೈಯಲ್ಲೇ ಇರಬೇಕೆಂದು ಭಾರತ ಸರಕಾರ ಹೇಳಿತು. ಇದು ತೈಲ ಬಹು ಮಿಲಿಯಾಧಿಪತಿಗಳಿಗೆ ಇಷ್ಟವಾಗಲಿಲ್ಲ. 1966ರ ಡಿಸೆಂಬರ್ 20 'ಕ್ರಿಶ್ಚಿಯನ್ ಸಾಯನ್ಸ್ ಮಾನಿಟರ್'ನಲ್ಲಿ ಪ್ರಕಟವಾದ ವರದಿಯಾದ ಪ್ರಕಾರ ಭಾರತ ಎದುರಿಸುತ್ತಿದ್ದ ಕ್ಷಾಮವನ್ನು ಅಮೇರಿಕ ತನ್ನ ಲಾಭಕ್ಕಾಗಿ ಬಳಸಿಕೊಂಡಿತು. ಅಸಂಖ್ಯ ಭಾರತೀಯರು ಉಪವಾಸ ಬಿದ್ದಿರುವಾಗ ಆಹಾರ ಸಾಮಗ್ರಿಗಳನ್ನು ಹೊತ್ತು ತಂದ ಹಡಗುಗಳನ್ನು ತಡೆ ಹಿಡಿಯುವಂತೆ ಅಮೆರಿಕನ್ ಸರಕಾರ ಆಜ್ಞಾಪಿಸಿತು. ತೈಲ ಕಂಪೆನಿಗಳ ಬೇಡಿಕೆಗಳನ್ನು ಭಾರತ ಸರಕಾರ ಒಪ್ಪಿಕೊಂಡ ಬಳಿಕವಷ್ಟೇ ಹಡಗುಗಳಲ್ಲಿದ್ದ ಆಹಾರದ ಪೊಟ್ಟಣಗಳನ್ನು ಕೆಳಗಿಳಿಸಲಾಯಿತು. 1965-66 ರಲ್ಲಿ ಭಾರತ ವಿಯೆಟ್ನಾಂ ಯುದ್ಧದ ಬಗ್ಗೆ ಹೆಚ್ಚು ಉದಾರನೀತಿ ತಾಳುವಂತೆ ಮಾಡಲು ಅಧ್ಯಕ್ಷ ಜಾನ್ಸನ್ ಅಮೇರಿಕದ ಗೋಧಿಯನ್ನು ಬಳಸಿಕೊಂಡರು ಎನ್ನುತ್ತಾರೆ ಆಗ ಭಾರತದಲ್ಲಿ ಅಮೆರಿಕದ ರಾಯಭಾರಿಯಾಗಿದ್ದ ಚೆಸ್ಟರ್ ಬೌಲ್ಸ್.

ವಿದೇಶೀ ನೆರವು ಮತ್ತು ನೆರವು ನೀಡುವ ದೇಶಗಳ ವಿದೇಶ ಯೋಜನೆ ಸದಾ ಒಂದಕ್ಕೊಂದು ತಳುಕು ಹಾಕಿಕೊಂಡೇ ಇರುತ್ತದೆ. ಮಾನವೀಯ ನೆರವಿನ ರೂಪ ತೊಟ್ಟು ಬರುವ ವಿದೇಶೀ ಆಹಾರ, ಹಾಲಿನ ಪುಡಿ ಇತ್ಯಾದಿ ನೆರವು ಕಾರ್ಯಕ್ರಮಗಳು ವಿದೇಶಗಳ ಸ್ವಹಿತಾಸಕ್ತಿಗಳನ್ನು ಕಾಯ್ದುಕೊಳ್ಳುವ ರಾಜಕೀಯ ತಂತ್ರವಲ್ಲದೆ ಬೇರೇನೂ ಅಲ್ಲ ಎನ್ನಬೇಕಾಗುತ್ತದೆ.

(ಕೃಪೆ : ತರಂಗ)

ಧಾರಾಕಾರ ಮಳೆ ತಂದ ದುರಂತ

ನಗರದಲ್ಲಿ ಭಾರಿ ಅನಾಹುತ ಹಲವು ಸಾವು

ಬೆಂಗಳೂರು ನಗರದಲ್ಲಿ ಇತ್ತೀಚೆಗೆ ಬಿದ್ದ ಧಾರಾಕಾರ ಮಳೆ ಹಲವಾರು ಜನರ ಪ್ರಾಣವನ್ನು ಬಲಿತೆಗೆದುಕೊಂಡು ನೂರಾರು ಮನೆಗಳನ್ನು ಧ್ವಂಸಮಾಡಿ ಲಕ್ಷಾಂತರ ರೂಪಾಯಿಗಳ ನಷ್ಟವನ್ನುಂಟು ಮಾಡಿದೆ.

ಸೆಪ್ಟೆಂಬರ್ 16 ರಂದು ಬಿದ್ದ ಮಳೆ ನಗರದ ಶ್ರೀರಾಮಪುರ ಮಾಗಡಿರಸ್ತೆ, ಬಾಪೂಜಿ ನಗರ ಮುಂತಾದ ಕಡೆಗಳಲ್ಲಿ ಭಾರಿ ಅನಾಹುತವನ್ನುಂಟು ಮಾಡಿದೆ. ನಗರದ ಹಲವಾರು ಪ್ರದೇಶಗಳ ಕೊಳಚೆ ನೀರು ಒಟ್ಟಿಗೆ ಸೇರಿ 'ವೃಷಭಾವತಿ' ನದಿ ಎಂದು ಹೆಸರು ಪಡೆದು ಕೆಂಗೇರಿಯನ್ನು ಸೇರುತ್ತದೆ. ಅಂದು ಮಾಗಡಿ ರಸ್ತೆ ಪ್ರಸನ್ನ ಚಿತ್ರಮಂದಿರದ ನಡುವೆ ದಟ್ಟವಾದ ಜನಸಂದಣಿ. ರಾತ್ರಿ ಬಿದ್ದ ಮಳೆಯಿಂದ ಇಲ್ಲಿ ಇರುವ ಮೋರಿ ಸೇತುವೆಯ ಸುತ್ತಮುತ್ತಲಿನ ಬಡವರ ಮನೆಗಳಿಗೆ ನೀರು ನುಗ್ಗಿ ಅನಾಹುತ ಸಂಭವಿಸಿತು.

ಇಲ್ಲಿಗೆ ಭೇಟಿ ಮಾಡಿದ ಭಾರತ ಪ್ರಜಾಸತ್ತಾತ್ಮಕ ಯುವ ಜನ ಫೆಡರೇಷನ್ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಕಾ॥ಟಿ.ಶಿವಶಂಕರ್ ಹಾಗೂನರಸಿಂಹಯ್ಯನವರು ಸಂತ್ರಸ್ತರಾದ ಜನರನ್ನು ಈ ದುರಂತದ ಕುರಿತು ಸಂದರ್ಶನವನ್ನು ನಡೆಸಿದರು.

ತಗ್ಗು ಪ್ರದೇಶದಲ್ಲಿರುವ ಸೇತುವೆಗೆ ಮಧ್ಯದಲ್ಲಿ ಸಣ್ಣ ಪ್ರಮಾಣದ ಕೊಳವೆ ಸುತ್ತಲು ಪಕ್ಕದ ಕಾರ್ಖಾನೆಗಳು ಹಾಕುವ ಮಣ್ಣಿನ ರಾಶಿ ಈ ಎಲ್ಲದರ ಪರಿಣಾಮವಾಗಿ ಅಂದು ಬಿದ್ದ ಮಳೆಯಿಂದ ಬಂದ ನೀರು ಕೊಳವೆಯನ್ನು ಮುಚ್ಚಿ ಸುತ್ತಲಿನ ಮನೆ ಶಾಲೆ, ಕಾರ್ಖಾನೆಗಳಿಗೆ ನುಗ್ಗಿ ಜನತೆಯನ್ನು ನೀರಿನಲ್ಲಿ ಮುಳುಗಿಸಿತು.

'ಸೆಪ್ಟೆಂಬರ್ 16ರ ರಾತ್ರಿ ಎಂದಿನಂತೆ ಊಟ ಮುಗಿಸಿ ಮಲಗುವಷ್ಟರಲ್ಲಿ ಇದ್ದಕಿದ್ದಂತೆ ಕಿಟಕಿ, ಬಾಗಿಲಿನ ಸಂದಿಗಳಿಂದ ನೀರು ಮನೆಗೆ ನುಗ್ಗಲು ಪ್ರಾರಂಭವಾಯಿತು. ನೀರಿನ ಮಟ್ಟ ಏರುತ್ತಾ ನಾವು ಮಂಚದ ಮೇಲೆ ಏರಿದೆವು ಮತ್ತೂ ಏರಿದಾಗ ಊಟದ ಟೇಬಲ್ ಮಂಚದ ಮೇಲೆ ಹಾಕಿ ಅದರ ಮೇಲೆ ಆಶ್ರಯ ಪಡೆಯಲಾಯಿತು. ರಾತ್ರಿ 2ಗಂಟೆಗೆ ನಿಧಾನವಾಗಿ ಇಳಿದ ನೀರು ಮನೆಯ ಸಾಮಾನುಗಳನ್ನು ಚಲ್ಲಾಪಿಲ್ಲಿ ಗೊಳಿಸಿತ್ತು. ನಾವುಗಳು 6 ಅಡಿಗಳಷ್ಟು ಎತ್ತರದವರೆಗೆ ನಿಂತ ನೀರಿನ ಮೇಲೆ ಆಶ್ರಯ ಪಡೆಯಲಾಗಿತ್ತೆಂದು ತಮ್ಮ ಕಷ್ಟವನ್ನು ತೋಡಿಕೊಂಡ ಶ್ರೀಮತಿ ಪೂರ್ಣಮ್ಮ. ಪ್ರಕಾಶ್ ರವರು ಭೀತಿಯಿಂದಲೇ ತಿಳಿಸಿದರು'.

'ಮಳೆಯ ನೀರು ನುಗ್ಗುವ ರಭಸಕ್ಕೆ ನಮ್ಮ ಮನೆಯ ಬಾಗಿಲು ಮುರಿದು ಹೋಯಿತು. ಬೀರು, ಸಾಮಾನು ಕೆಳಗೆ ಬಿದ್ದು ನೀರಿನಲ್ಲಿ ಕೊಚ್ಚಿ ಹೋಗಿದೆ. ನಾವು ಭಯಬಿದ್ದು ಮನೆಯ ಮಹಡಿಯ ಮೇಲೆ ಓಡಿ ಹೋದೆವು' ಎಂದು 12 ವರ್ಷದ ಬಾಲಕಿ ಆರ್. ಮೀನಾಕ್ಷಿ ಹೇಳಿದಳು.

ಲಾಲ್‌ಬಹದ್ದೂರ್ ಶಾಸ್ತ್ರಿ ಮೆಮೋರಿಯಲ್ ಶಾಲೆಯ ಉಪಾಧ್ಯಾಯ ಸಾಂಬಶಿವರು ತಮ್ಮ ಶಾಲೆಯ ಏಳು ಅಡಿ ಗೋಡೆ ಬಿದ್ದು ಹೋಗಿರುವುದನ್ನು ತೋರಿಸಿ ಶಾಲೆ ನಡೆಯುವಾಗ ಈ ಗೋಡೆ ಬಿದ್ದಿದ್ದರೆ ಮಕ್ಕಳನ್ನೆಲ್ಲಾ ಬಲಿ ತೆಗೆದುಕೊಳ್ಳುತ್ತಿತ್ತೆಂದು ಹೇಳಿ ನೀರಿನಲ್ಲಿ ಮುಳುಗಿ ಸುಮಾರು ಐದು ಸಾವಿರ ಬೆಲೆ ಬಾಳುವ ಲೈಬ್ರರಿ ಪುಸ್ತಕಗಳು, ಪ್ರಯೋಗ ಶಾಲೆಯ ಉಪಕರಣಗಳು ಹಾಳಾಗಿರುವುದನ್ನು ತೋರಿಸಿದರು. ನುಗ್ಗಿದ್ದ ನೀರಿನಿಂದ ಶಾಲೆಯೊಳಗಿನ ಬೆಂಚುಗಳು ಏಳು ಅಡಿ ಎತ್ತರದಲ್ಲಿ ತೇಲುತ್ತಿದ್ದವು.

ಇಲ್ಲಿನ ಸ್ಪಿನ್ನಿಂಗ್ ಫ್ಯಾಕ್ಟರಿ ಲಕ್ಷ್ಮೀ ನಾರಾಯಣ ಮೆಟಲ್ ಇಂಡಸ್ಟ್ರೀಸ್ ಕಾರ್ಖಾನೆಯಲ್ಲಿ ಸುಮಾರು ನೂರು ಮೂಟೆ ಸಿಮೆಂಟ್ ಪೂರ್ಣವಾಗಿ ನೀರಿನಿಂದ ಹಾನಿಗೊಳಗಾಗಿದೆ. ಪಡಿತರ ಅಂಗಡಿ ನೀರಿನಿಂದ ಮುಳುಗಿ ಎಲ್ಲಾ ದಾಸ್ತಾನು ಹಾಳಾಗಿದೆ. ಇನ್ಸೂರೆನ್ಸ್ ಕಂಪನಿಯವರು ಬಂದು ವರದಿ ಪಡೆಯುವವರೆಗೆ ರೇಷನ್ ನೀಡಲಾಗುವುದಿಲ್ಲವೆಂದು ಅಧಿಕಾರಿ ಹೇಳಿದರು.

ಸುಪ್ರೀಂ ನರ್ಸಿಂಗ್ ಹೋಂನ ರೋಗಿಗಳನ್ನು ಮಹಡಿಗೆ ಸ್ಥಳಾಂತರಿಸಲಾಯಿತು. ನರ್ಸಿಂಗ್ ಹೋಂ ಪಕ್ಕದ ಮನೆಗೆ ನುಗ್ಗಿದ ನೀರಿನಿಂದ ಮನೆಯೊಳಗೆ ಸಿಕ್ಕಿಕೊಂಡಿದ್ದ ಜನರನ್ನು ರಕ್ಷಿಸಲು ನರ್ಸಿಂಗ್ ಹೋಂನ ಡಾಕ್ಟರ್ ಶ್ರೀಧರ್ ಹಾಗೂ ಚಂದ್ರಶೇಖರ ರವರು ನೀರು ತುಂಬಿದ ಮನೆಯ ಶೀಟ್ ಮೇಲೆ ತೂತು ಮಾಡಿ ಕಿಟಕಿಯನ್ನು ಹಾರೆಯಿಂದ ಹೊಡೆದು ನೀರು ಹೊರಗೆ ಬಂದ ಮೇಲೆ ಹಗ್ಗದ ಸಹಾಯದಿಂದ 13 ಮಂದಿಯನ್ನು ರಕ್ಷಿಸಲಾಯಿತು ಎಂದರು ಡಾ॥ ಶ್ರೀಧರ್.

ನೊಂದ ಜನತೆಗಾಗಿ ಉಚಿತ ವೈದ್ಯಕೀಯ ನೆರವುನೀಡುವಂತೆ ಡಾ. ಶ್ರೀಧರ್ ರವರನ್ನು ಟಿ. ಶಿವಶಂಕರ್‌ರವರು ವಿನಂತಿಸಿದರು. ಇಲ್ಲಿಯ ಬಾವಿಯೊಂದು ಮುಚ್ಚಿಹೋಗಿದೆ. ಕಬ್ಬಿಣದ ಟ್ಯಾಂಕ್ ಒಂದು ತೇಲಿ ಬಂದು ಮರಕ್ಕೆ ಅಡ್ಡವಾಗಿ ನಿಂತಿದೆ. ಈ ಟ್ಯಾಂಕ್ ಸೇತುವೆಗೆ ಅಡ್ಡಲಾಗಿ ಬಂದಿದ್ದರೆ ಇನ್ನೂ ಗಂಭೀರವಾದ ದುರಂತ ಸಂಭವಿಸುತ್ತಿತ್ತು.

ಬೆಂಗಳೂರು ನಗರಸಭೆ ಇಂತಹ ತಗ್ಗು ಪ್ರದೇಶದಲ್ಲಿ ಕೊಳಚೆ ನೀರು ಸರಾಗವಾಗಿ ಹೋಗಲು ಬೇಕಾದ ದೊಡ್ಡದಾದ ಮೋರಿ ನಿರ್ಮಿಸದೇ ನಿರ್ಲಕ್ಷ್ಯ ತೋರಿ ದುರಂತ ಸಂಭವಿಸಿದಾಗ ಮಾತ್ರ ಕಣ್ಣು ತೆರೆಯುವುದು ನಾಚಿಕೆಗೇಡಿನ ಸಂಗತಿ. ನಗರಾಭಿವೃದ್ಧಿ ಸಚಿವ ದೇಶಪಾಂಡೆ, ಮುಖ್ಯಮಂತ್ರಿ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ, ಉಪಮೇಯರ್ ಮುಂತಾದವರು ಸ್ಥಳಕ್ಕೆ ಭೇಟಿ ನೀಡಿದ್ದಾರೆ.

ಮುನ್ನೆಚ್ಚರಿಕೆ ಕ್ರಮ ವಹಿಸಿದ್ದರೆ ಈ ಕೊಳಚೆ ನೀರು ಹರಿಯುವ ದಾರಿಯುದ್ದಕ್ಕೂ ನಡೆದ ದುರಂತವನ್ನು ತಪ್ಪಿಸಬಹುದಿತ್ತು. ಸಂಕಷ್ಟಕ್ಕೀಡಾದ ಕುಟುಂಬಗಳಿಗೆ ನಗರಸಭೆ ಕೂಡಲೇ ಪರಿಹಾರ ಒದಗಿಸಬೇಕೆಂದು ಡಿ.ವೈ.ಎಫ್.ಐ. ಒತ್ತಾಯಿಸಿದೆ.

ಸಂತ್ರಸ್ತರ ನೆರವಿಗೆ ಧಾವಿಸಿದ ಡಿ.ವೈ.ಎಫ್.ಐ.

ದೇಶದ ಎಲ್ಲೆಡೆ ಶತಮಾನದಲ್ಲೇ ಕಂಡರಿಯದ ಮಳೆ ಸಹಸ್ರಾರು ಜನತೆಯ ಸಾವು ನೋವಿಗೆ ಕಾರಣವಾಗಿ ಭಾರಿ ನಷ್ಟವನ್ನುಂಟು ಮಾಡಿರುವ ಈ ಸಂದರ್ಭದಲ್ಲಿ ಬೆಂಗಳೂರು ನಗರದಲ್ಲಿ ಸುರಿದ ಮಳೆಯಿಂದ ತೊಂದರೆಗೊಳಗಾದ ಜನತೆಯ ನೆರವಿಗೆ ಭಾರತ ಪ್ರಜಾಸತ್ತಾತ್ಮಕ ಯುವ ಜನ ಫೆಡರೇಷನ್ (ಡಿ.ವೈ.ಎಫ್.ಐ) ಬೆಂಗಳೂರು ಜಿಲ್ಲಾ ಸಮಿತಿ ಧಾವಿಸಿದೆ. ಈಗಾಗಲೇ ಕರ ಪತ್ರಗಳ ಮೂಲಕ ವಿವಿಧ ಬಡಾವಣೆಗಳಲ್ಲಿ ಮನೆ ಮನೆಗೆ ತೆರಳಿ ಜನರಿಂದ ಸಂತ್ರಸ್ತರ ನೆರವು ನಿಧಿಗಾಗಿ ಜಿಲ್ಲೆಯ ವಿವಿದೆಡೆ ಒಂದು ಸಾವಿರ ರೂಪಾಯಿ. ಕೆಂಪೆಗೌಡ ನಗರದಲ್ಲಿ 265 ರೂ ಮೈಕೋ ಕಾರ್ಖಾನೆಯಿಂದ 150 ಜೊತೆ ಬಟ್ಟೆ ಸಂಗ್ರಹಿಸಿದೆ. ಎಲ್.ಐ.ಸಿ. ನೌಕರರಿಂದ ಸಾವಿರ ರೂ. ಕೊಡುಗೆ ನೀಡುವ ಭರವಸೆ ನೀಡಲಾಗಿದೆ. ಅಕ್ಟೋಬರ್ 3 ರಂದು ಯಶವಂತಪುರದ ಬಳಿ ಇರುವ ರಾಜಗೋಪಾಲನಗರ ಬಡಾವಣೆಯ ನೊಂದ ಬಡಜನತೆಗೆ ದವಸಧಾನ್ಯ, ಔಷಧಿ, ಪಾತ್ರೆ, ಬಟ್ಟೆ, ಆರ್ಥಿಕ ನೆರವನ್ನು ನೀಡುವ ಕಾರ್ಯಕ್ರಮವನ್ನು ರೂಪಿಸಿದೆ. ಶ್ರೀರಾಮಪುರದ ಆರ್.ಜಿ.ಐ. ಕಾಲೋನಿ ಪಾಪಣ್ಣ ಬಡಾವಣೆಗಳಲ್ಲಿ ಒಟ್ಟು 14 ಮನೆಗಳು ಬಿದ್ದು ತೊಂದರೆಗೊಳಗಾದ ಜನತೆಗೆ ನೆರವು ನೀಡುವಂತೆ ನಗರ ಸಭೆಯನ್ನು ಒತ್ತಾಯಿಸಿ ಪ್ರತಿಭಟನಾ ಪ್ರದರ್ಶನವೊಂದನ್ನು ಸಂಘಟಿಸಿತು. ಡಿ.ವೈ.ಎಫ್.ಐ. ಹೋರಾಟದ ಫಲವಾಗಿ ಮನೆ ಕಳೆದುಕೊಂಡವರಿಗೆ ತಲಾ ಸಾವಿರ ರೂಪಾಯಿ ಹಾಗೂ ನಷ್ಟ ಸಂಭವಿಸಿದವರಿಗೆ ತಲಾ 100 ರೂಗಳನ್ನು ನಗರಸಭೆ ನೀಡಿದೆ.

ನೊಂದ ಜನತೆಗೆ ಪರಿಹಾರ ಒದಗಿಸಲು ಕೂಡಲೇ ಕಾರ್ಯೋನ್ಮುಖರಾಗಿ ಪರಿಶ್ರಮದಿಂದ ದುಡಿದ ಡಿ.ವೈ.ಎಫ್.ಐ. ಕಾರ್ಯಕರ್ತರು ಪ್ರಶಂಸಾರ್ಹರು.

ಟೊರಿನೊ ಕಾರ್ಮಿಕರ ಹೋರಾಟ

ಬೆಂಗಳೂರು ಸಾಫ್ಟ್ ಡ್ರಿಂಕ್ಸ್ [ಟೊರಿನೊ] ಕಾರ್ಮಿಕರು ತಮ್ಮ ಬೇಡಿಕೆಗಳನ್ನು ಒತ್ತಾಯಿಸಿ ಮಾಲೀಕನ ಕಾರ್ಮಿಕ ವಿರೋಧಿ ನೀತಿ ಪ್ರತಿಭಟಿಸಿ ಕಳೆದ ಮಾರ್ಚ್ 28 ರಿಂದ ಅನಿರ್ದಿಷ್ಟ ಧೀರ್ಘ ಕಾಲದ ಮುಷ್ಕರ ನಡೆಸುತ್ತಿದ್ದಾರೆ.

20 ವರ್ಷಗಳಿಂದಲೂ ಲಾಭದಾಯಕವಾಗಿ ನಡೆಯುತ್ತಿರುವ ಟೊರಿನೊ ಕಂಪನಿ ವಿವಿಧ ರಾಜ್ಯಗಳಲ್ಲಿ ಹಲವಾರು ಕಂಪನಿಗಳನ್ನೂ ತೆರೆದಿದೆ. ಇತ್ತೀಚೆಗೆ ಟೊರಿನೊ ಬೆಲೆಯನ್ನು 3 ರೂ.ನಿಂದ 3-50ಕ್ಕೆ ಏರಿಸಿದೆ.

ಸಿ.ಐ.ಟಿ.ಯು. ನೇತೃತ್ವದಲ್ಲಿ ದೃಢ ಹೋರಾಟ ನಡೆಸುವ ಕಾರ್ಮಿಕರ ಒಗ್ಗಟ್ಟನ್ನು ಹೇಗಾದರೂ ಮುರಿಯಲು ಕಾರ್ಮಿಕರಿಗೆ ಕಿರುಕುಳ ನೀಡಲು ಪ್ರಾರಂಭಿಸಲಾಗಿದೆ. ಶೇ. 50 ರಷ್ಟು ಕಾರ್ಮಿಕರಿಗೆ ಷೋಕಾಸ್ ನೋಟಿಸ್ ಜಾರಿ, 5 ಮಂದಿ ಪದಾಧಿಕಾರಿಗಳ ಅಮಾನತು, ಕಾರ್ಖಾನೆಯಲ್ಲಿ ಲೇ ಆಫ್ ಘೋಷಣೆ, ಗೂಂಡಾಗಳಿಂದ ಪೊಲೀಸರಿಂದ ಕಿರುಕುಳ ನೀಡಲಾಗುತ್ತಿದೆ. ಒಪ್ಪಂದಗಳಿಂದ ಹಿಂದೆ ಸರಿಯುವುದು ಕಾರ್ಮಿಕ ಆಯುಕ್ತರ ಆದೇಶವನ್ನು ತಿರಸ್ಕರಿಸುವುದು ಹಾಲಿ ನೀಡುತ್ತಿರುವ ಸಂಬಳದಲ್ಲಿ ಶೇ. 25 ರಷ್ಟು ಕಡಿತ, ತುಟ್ಟಿಭತ್ಯೆ ರದ್ದು ಮುಂತಾದ ಕರಾಳ ನೀತಿಗಳನ್ನು ಜಾರಿಗೊಳಿಸಿ ಕಾರ್ಮಿಕರು ಯಾವುದೇ ಸವಲತ್ತುಗಳನ್ನು ಕೇಳುವ ಹಕ್ಕುಗಳನ್ನು ಕಸಿದುಕೊಂಡ ಆಡಳಿತ ವರ್ಗದ ಅನ್ಯಾಯದ ವಿರುದ್ಧ ಬೇರೆ ದಾರಿ ಇಲ್ಲದೆ ಹೋರಾಟಕ್ಕೆ ಇಳಿದಿದ್ದಾರೆ. ಕಳೆದ 5 ತಿಂಗಳ ಉತ್ಪಾದನೆ ನಿಂತಿರುವುದರಿಂದ ರಾಜ್ಯ ಸರ್ಕಾರದ ಬೊಕ್ಕಸಕ್ಕೆ 10 ಲಕ್ಷ ಆದಾಯ ಕಡಿತವಾಗಿದೆ. ಕಾರ್ಮಿಕರ ಕುಟುಂಬದ ಸಹಸ್ರಾರು ಜನತೆ ಬೀದಿಪಾಲಾಗಿದ್ದಾರೆ.

ಕಾರ್ಮಿಕ ಕಾಯ್ದೆ-ಹಕ್ಕುಗಳನ್ನು ಧಿಕ್ಕರಿಸಿ ಹಟಮಾರಿತನದಿಂದ ವರ್ತಿಸುತ್ತಿರುವ ಮಾಲೀಕನ ವಿರುದ್ಧ ಹೋರಾಡುತ್ತಿರುವ ಟೊರಿನೊ ಕಾರ್ಮಿಕರಿಗೆ ನಗರದ ಎಲ್ಲಾ ಕಾರ್ಮಿಕರು ಹಾಗೂ ಸಾಮೂಹಿಕ ಸಂಘಟನೆಗಳು ಸೌಹಾರ್ದ ಬೆಂಬಲ ನೀಡಬೇಕೆಂದು ಸಂಘ ವಿನಂತಿಸಿದೆ.

ರೈತನಿಗೆ ಭೂಮಿ ಸಿಗದೇ ದೇಶದ ಪ್ರಗತಿ ಸಾಧ್ಯವಿಲ್ಲ

ನಮ್ಮ ದೇಶದಲ್ಲಿರುವ ಕೋಟ್ಯಾಂತರ ಎಕ್ರೆ ಕೃಷಿಯೋಗ್ಯ ಜಮೀನನ್ನು ಬಡರೈತರಿಗೆ ಕೊಡದೆ ದೇಶದ ಅಭಿವೃದ್ಧಿ ಸಾಧ್ಯವಾಗದೆಂದು ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾ॥ ಪಿ. ರಾಮಚಂದ್ರರಾವ್ ಅವರು ಉಡುಪಿಯ ಸರ್ಕಾರಿ ನೌಕರರ ಭವನದಲ್ಲಿ ಏರ್ಪಡಿಸಿದ್ದ ಕೃಷಿ ಕೂಲಿಕಾರರ ಸಭೆಯನ್ನುದ್ದೇಶಿಸಿ ಸೆಪ್ಟೆಂಬರ್ 22 ರಂದು ಮಾತನಾಡುತ್ತಿದ್ದರು. ಪ. ಬಂಗಾಳ, ಕೇರಳ, ತ್ರಿಪುರಾ ರಾಜ್ಯಗಳಲ್ಲಿ ಹೆಚ್ಚಿನ ಭೂಮಿ ಸಿ.ಪಿ.ಐ.(ಎಂ)ನ ಆಡಳಿತದ ಪರಿಣಾಮವಾಗಿ ವಿತರಣೆಯಾಗಿದ್ದು ಕಾಂಗ್ರೆಸ್ ನೇತೃತ್ವದ ಸರ್ಕಾರಗಳು 'ಗರೀಬಿ ಹಟಾವೋ' ಘೋಷಣೆಗಳನ್ನು ನೀಡುತ್ತಾ ಶ್ರೀಮಂತ ಭೂಮಾಲೀಕ ಬಂಡವಾಳಶಾಹಿಗಳ ಹಿತಕಾಪಾಡುವ ಧೋರಣೆ ಅನುಸರಿಸುತ್ತಾ ಬಂದ ಪರಿಣಾಮವಾಗಿ ಸಾವಿರಾರು ಎಕ್ರೆ ಭೂಮಿಯ ಒಡೆಯರಾಗಿದ್ದಾರೆಂದು ಕಾ॥ ಪಿ.ಆರ್. ರವರು ಹೇಳಿದರು.

ಗ್ರಾಮಾಂತರ ಜನತೆ ರೈತ ಸಂಘದ ನೇತೃತ್ವದಲ್ಲಿ ಸಂಘಟಿತರಾಗಿ ನೀರಾವರಿ ಯೋಜನೆಗಳ ಜಾರಿಗಾಗಿ. ಬೆಳೆಗೆ ಲಾಭದಾಯಕ ಬೆಲೆಗಾಗಿ, ಕನಿಷ್ಟಕೂಲಿ ಜಾರಿ, ಪ್ರಗತಿಪರ ಭೂಸುಧಾರಣೆ ಮುಂತಾದ ಬೇಡಿಕೆಗಳನ್ನು ಪಡೆಯಲು ಸರ್ಕಾರದ ಧೋರಣೆಗಳಲ್ಲಿ ಬದಲಾವಣೆ ಬರಲು ಹೋರಾಟ ನಡೆಸಬೇಕೆಂದು ಕರೆ ನೀಡಿದರು.

ಕಾ॥ ಡೇವಿಡ್ ಕರ್ಕಡ ಸಭೆಯ ಅಧ್ಯಕ್ಷತೆ ವಹಿಸಿದರು. ಕಾ॥ ಗೋಡ್ವಿನ್ ಫರ್ನಾಂಡೀಸ್ ಸ್ವಾಗತಿಸಿ ರಾಮ ಕೆ. ಕುಂದ ಧನ್ಯವಾದವಿತ್ತರು.

ಕುಂದಾಪುರ

ಸೆಪ್ಟೆಂಬರ್ ಚಳುವಳಿ ಯಶಸ್ವಿಗೊಳಿಸಲು ಆಗಸ್ಟ್ 3ರಿಂದ 31ರವರೆಗೆ ತಾಲೋಕಿನ 37 ಗ್ರಾಮಗಳಲ್ಲಿ ರೈತರ ಸಭೆ ನಡೆಸಲಾಯಿತು. ಮುದೂರು, ಜಡ್ಕಲ್‌ಗಳಲ್ಲಿ ಬೃಹತ್ ಸಾರ್ವಜನಿಕ ಸಭೆಗಳನ್ನು ಸಂಘಟಿಸಲಾಗಿತ್ತು. 5 ಸಾವಿರ ಕರಪತ್ರ, ಪೋಸ್ಟರುಗಳು ಬ್ಯಾನರ್ ಗಳನ್ನು ಹಾಕಿ ವ್ಯಾಪಕ ಪ್ರಚಾರ ಕಾರ್ಯ ನಡೆಸಲಾಗಿತ್ತು. ಸೆಪ್ಟಂಬರ್ 1ರಿಂದ 13ರವರೆವಿಗೆ ನಡೆದ ಚಳುವಳಿಯಲ್ಲಿ 8ದಿನಗಳು ತಹಸೀಲ್ದಾರ್ ಕಛೇರಿಯನ್ನು ಪಿಕೆಟಿಂಗ್ ನಡೆಸಲಾಯಿತು. ಸೆಪ್ಟೆಂಬರ್ 1ರಂದು 190 ರೈತಕೃಷಿ ಕೂಲಿಗಾರರ ಪಿಕೆಟಿಂಗ್‌ನಿಂದ ಪ್ರಾರಂಭವಾದ ಹೋರಾಟದಲ್ಲಿ ಒಟ್ಟು 2579 ಮಂದಿ ಧರಣಿ ಪಿಕೆಟಿಂಗ್, ರಸ್ತೆತಡೆ ನಡೆಸಿ ಬಂಧನಕ್ಕೊಳಗಾದರು. ಅತ್ಯಧಿಕ ಸಂಖ್ಯೆಯಲ್ಲಿ ಭಾಗವಹಿಸಿದ ಮಹಿಳೆಯರನ್ನು ಒಳಗೊಂಡು ಹಂಚು, ಬೀಡಿ ರಿಕ್ಷಾಕಾರ್ಮಿಕರು ಎಸ್.ಎಫ್.ಐ., ಡಿ.ವೈ. ಎಫ್.ಐ. ಸಂಘಟನೆಗಳು ಸೌಹಾರ್ದ ಬೆಂಬಲ ವ್ಯಕ್ತಪಡಿಸಿ ಭಾಗವಹಿಸಿದ್ದವು. ರೈತನಾಯಕರಾದ ಕಾ॥ಅಬ್ರಹಾಂ ಕರ್ಕಡ, ದಾಸಭಂಡಾರಿ, ಸಿ.ಐ.ಟಿ.ಯು., ಮುಖಂಡರಾದ ಕಾ॥ ಸಿ. ನಾರಾಯಣ, ಕೆ. ಶಂಕರ್, ವಿ. ಮಹಾಬಲ, ತಾಲೋಕು ರೈತಸಂಘದ ಅಧ್ಯಕ್ಷ ಶಿವರಾಮ ಶೆಟ್ಟಿ, ವಿ. ನರಸಿಂಹ, ಬಿ.ಟಿ. ಮಂಜುರವರುಗಳು ನೇತೃತ್ವ ನೀಡಿದರು.

ಶಹಾಪುರ

ಸೆ. 13ರಂದು ರಾಷ್ಟ್ರೀಯ ಹೆದ್ದಾರಿ ರಸ್ತೆತಡೆ ಚಳುವಳಿ ನಡೆಸಿ ಸುಮಾರು ಎರಡೂವರೆ ಗಂಟೆಗಳ ಕಾಲ ವಾಹನ ಸಂಚಾರ ಸ್ಥಗಿತಗೊಳಿಸಿ 525 ಮಂದಿ ಬಂಧನಕ್ಕೊಳಗಾದರು.

ಅಖಿಲಭಾರತ ಬೇಡಿಕೆಗಳೊಂದಿಗೆ ಸ್ಥಳೀಯ ಬೇಡಿಕೆಗಳಾದ ಮಳೆಯಿಂದ ತೊಂದರೆಗೊಳಗಾದ ರೈತರಿಗೆ ಪರಿಹಾರ, ರಸ್ತೆ ದುರಸ್ಥಿ ಬಸ್ ಸೌಲಭ್ಯ, ಬ್ಯಾಂಕ್ ಸಾಲ, ಶಿರವಾಳದಲ್ಲಿ ಸಿಮೆಂಟ್ ಕಾರ್ಖಾನೆ ತೆರೆಯಬೇಕು. ಕೃಷಿ ಕೂಲಿಗಾರರಿಗೆ ಜಮೀನು ಕೃಷ್ಣ ಮೇಲ್ದಂಡೆ ಯೋಜನೆ ಶೀಘ್ರ ಮುಗಿಸಬೇಕು ಎಂಬ ಮುಂತಾದ ಬೇಡಿಕೆ ಮುಂದಿಟ್ಟು ಸೆಪ್ಟೆಂಬರ್ 1, 2 ರಂದು ತಾಲೋಕು ಕಛೇರಿ ಮುಂದೆ ಧರಣಿ 5ರಂದು ರಸ್ತೆರೋಖೋ ಚಳುವಳಿ ನಡೆಸಲಾಯಿತು. ಪೊಲೀಸರು 200 ರೈತಕೃಷಿ ಕೂಲಿಗಾರರನ್ನು ಬಂಧಿಸಿ ಬಿಡುಗಡೆ ಮಾಡಿದರು. ರೈತ ನಾಯಕರಾದ ಚನ್ನಪ್ಪ ಆನೆಗುಂದಿ ಕೇಶವರಾಜ ರಾಜರ್ ಮತ್ತು ಶೀಮಪ್ಪ ನಾಯ್ಕರವರು ಮುಖಂಡತ್ವ ವಹಿಸಿದ್ದರು.

ಬೆಂಗಳೂರು

ಬೆಂಗಳೂರು ದಕ್ಷಿಣ ತಾಲೋಕಿನ ಕೆಂಗೇರಿ ಹೋಬಳಿ ದೊಡ್ಡಬೆಲೆ ಕಾಲೋನಿಯ ಕೃಷಿ ಕೂಲಿಗಾರರ ಸಭೆ ಸೆಪ್ಟೆಂಬರ್ 25 ರಂದು ಕೃಷಿ ಕೂಲಿಗಾರರ ಸಂಘದ ರಾಜ್ಯ ಸಮಿತಿ ಸದಸ್ಯ ಹಾಗೂ ಬೆಂಗಳೂರು ಜಿಲ್ಲಾ ಸಂಚಾಲಕ ಕಾ॥ ವೆಂಕಟಾಚಲಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿತು. ಕೃಷಿಕೂಲಿಗಾರರ ಇಂದಿನ ಪರಿಸ್ಥಿತಿ ಬಗ್ಗೆ ವಿವರಿಸಿ ತಮ್ಮ ಹಕ್ಕುಗಳನ್ನು ಪಡೆಯಲು ಸಂಘಟಿತರಾಗಿ ಹೋರಾಟ ನಡೆಸಬೇಕೆಂದು ವೆಂಕಟಾಚಲಯ್ಯ ಕರೆ ನೀಡಿದರು. ನೂತನ ಗ್ರಾಮ ಘಟಕಕ್ಕೆ ಕಾ॥ ಹನುಮಯ್ಯ

—ಪಿ. ರಾಮಚಂದ್ರರಾವ್

(ಅಧ್ಯಕ್ಷ) ನಾಗರಾಜ (ಉಪಾಧ್ಯಕ್ಷ) ವೇಣುಗೋಪಾಲ್ (ಕಾರ್ಯದರ್ಶಿ) ಕೃಷ್ಣಪ್ಪ (ಖಜಾಂಚಿ) ಯವ ನ್ನೊಳಗೊಂಡ 15 ಜನರ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಸೆಪ್ಟೆಂಬರ್ 26 ರಂದು ಕೆಂಗೇರಿ ಹೋಬಳಿ ಮಾರಗೊಂಡನಹಳ್ಳಿಯಲ್ಲಿ ನಡೆದ ಸಭೆಯಲ್ಲಿ ಕಾ॥ ವೆಂಕಟಾಚಲಯ್ಯ ರೈತರನ್ನುದ್ದೇಶಿಸಿ ಮಾತನಾಡಿ ಬಗರ್ ಹುಕ್ಕುಂ ಸಾಗುವಳಿ ಭೂಮಿ ರೈತರಿಗೆ ದೊರೆಯಬೇಕು. ಕನಿಷ್ಠಕೂಲಿ, ಉಚಿತ ನಿವೇಶನ, ಭಾಗ್ಯಜ್ಯೋತಿ ಯೋಜನೆಗಳ ಜಾರಿಗಾಗಿ ದಲಿತರ ಮೇಲಿನ ದೌರ್ಜನ್ಯಗಳ ವಿರುದ್ಧ ಹೋರಾಟ ನಡೆಸಬೇಕೆಂದು ಕರೆ ನೀಡಿದರು.

ನೂತನ ಗ್ರಾಮ ಘಟಕಕ್ಕೆ ಮುನಿಹನುಮಯ್ಯ (ಅಧ್ಯಕ್ಷ) ಮುನಿಹನುಮಯ್ಯ ಉರುಫ್ ಕರಿಮಾರಯ್ಯ (ಉಪಾಧ್ಯಕ್ಷ) ಕರಿಮಾರಯ್ಯ (ಕಾರ್ಯದರ್ಶಿ) ಗುಂಡಪ್ಪ (ಖಜಾಂಚಿ) ಯವರನ್ನೊಳಗೊಂಡ 10 ಜನರ ಸಮಿತಿ ರಚಿಸಲಾಯಿತು.

ಏಶ್ಯಾ-ಶಾಂತಸಾಗರ ಪ್ರದೇಶದಲ್ಲಿ ನಿಶ್ಶಸ್ತ್ರೀಕರಣ

ಗೊರ್ಬಚೇವರಿಂದ ಮಹತ್ವದ ಪ್ರಸ್ತಾಪಗಳು

ಸೋವಿಯತ್ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಮಿಖ್ಯಾಲ್ ಗೊರ್ಬಚೇವ್ ಏಶಿಯಾ-ಶಾಂತಸಾಗರ ಪ್ರದೇಶದಲ್ಲಿ ನಿಶ್ಶಸ್ತ್ರೀಕರಣ ಹಾಗೂ ಶಾಂತಿಯ ಬಗ್ಗೆ ಸೆಪ್ಟಂಬರ್ 16 ರಂದು ಇನ್ನೊಂದು ಮಹತ್ವಪೂರ್ಣ ಪ್ರಸ್ತಾಪಗಳ ಪಟ್ಟಿಯನ್ನು ಇಟ್ಟಿದ್ದಾರೆ. ಎರಡು ವರ್ಷಗಳ ಹಿಂದೆ ವ್ಲಾಡಿವೋಸ್ಟಾಕ್‌ನಲ್ಲಿ ಮಂಡಿಸಿದ ಪ್ರಸ್ತಾಪಗಳ ನಂತರ ನೀಡಿರುವ ಈ ಪ್ರಸ್ತಾಪಗಳು ಪರಮಾಣು ಶಸ್ತ್ರಗಳಿಂದ ತುಂಬಿಕೊಂಡ ಈ ಪ್ರದೇಶವನ್ನು ಹೇಗೆ ನಿಶ್ಶಸ್ತ್ರೀಕೃತಗೊಳಿಸಿ ಬಿಗು ವಾತಾವರಣವನ್ನು ಸಡಿಲಿಸುವುದು ಎಂಬುದಕ್ಕೆ ಮೂರ್ತ ಕ್ರಮಗಳನ್ನು ಸೂಚಿಸಿದೆ.

ಈ ಪ್ರದೇಶದಲ್ಲಿ ಸೋವಿಯೆತ್ ಒಕ್ಕೂಟ ಯಾವುದೇ ಪರಮಾಣು ಅಸ್ತ್ರವನ್ನು ಇನ್ನು ಮುಂದೆ ಇಡುವುದಿಲ್ಲ ಎಂಬ ಮಹತ್ವದ ಏಕಪಕ್ಷೀಯ ತೀರ್ಮಾನವಲ್ಲದೆ ಫಿಲಿಪ್ಪೈನ್ಸ್ ಹಾಗೂ ಕಾಮ್‌ರನ್ಹ್ ಅಖಾಡದಲ್ಲಿ ಮಿಲಿಟರಿ ನೆಲೆಗಳ ರದ್ಧತಿ, ನಾವಿಕ ಪಡೆಗಳ ಮೇಲೆ ಮಿತಿ, ಸಮುದ್ರ ಮಾರ್ಗ ಹಾಗೂ ಬಾನುಲಿ ಸಂಪರ್ಕಗಳ ರಕ್ಷಣೆಗಾಗಿ ಕ್ರಮ ಮತ್ತು ಸೋವಿಯತ್ ಒಕ್ಕೂಟ, ಚೀಣಾ, ಜಪಾನ್, ಉತ್ತರ ಕೊರಿಯಾ ಹಾಗೂ ದಕ್ಷಿಣ ಕೊರಿಯಾ ನಡುವೆ ಮಿಲಿಟರಿ ಸಂಘರ್ಷ ತಗ್ಗಿಸಲು ಬಹುಪಕ್ಷೀಯ ಮಾತುಕತೆ ಮುಂತಾದ ಪ್ರಸ್ತಾಪಗಳನ್ನು ಕಾ|| ಗೊರ್ಬಚೇವ್ ಈ ಪ್ರದೇಶದ ದೇಶಗಳ ಮುಂದಿಟ್ಟಿದ್ದಾರೆ.

ಸಿ.ಪಿ.ಐ. (ಎಂ) ಈ ಪ್ರಸ್ತಾಪಗಳನ್ನು ಸ್ವಾಗತಿಸಿದೆ.

ಕಂಪೂಚಿಯಾ ಬಗ್ಗೆ ಶೀಘ್ರ ಇತ್ಯರ್ಥಕ್ಕೆ ಬರಲು ಸಕಲ ನೆರವು ನೀಡುವುದಾಗಿ ಕಾ||ಗೊರ್ಬಚೆವ್ ಹೇಳಿರುವುದು, ಈ ಬಗ್ಗೆ ಚೀಣಾ ಹಾಗೂ ವಿಯೆಟ್ನಾಂ ನಡುವೆ ನೇರ ಮಾತುಕತೆಗೆ ಕರೆ, ಶೀಘ್ರವಾಗಿ ಚೀಣಾ-ಸೋವಿಯತ್ ಶೃಂಗಸಭೆ ಸಲಹೆ ಇವೆಲ್ಲಾ ವಿಶ್ವಕಮ್ಯುನಿಸ್ಟ್ ಆಂದೋಲನವನ್ನು ಹಾಗೂ ಸಮಾಜವಾದೀ ಬಣವನ್ನು ಬಲಗೊಳಿಸಿ, ತನ್ಮೂಲಕ ವಿಶ್ವಶಾಂತಿ ಶಕ್ತಿಗಳ ಮೇಲೂ ಒಳ್ಳೆಯ ಪರಿಣಾಮ ಬೀರುತ್ತನೆ ಎಂದು ಸಿ.ಪಿ.ಐ. (ಎಂ) ಹೇಳಿದೆ.

1990 ರೊಳಗೆ ಹಿಂದೂ ಮಹಾಸಾಗರವನ್ನು ಶಾಂತಿವಲಯವೆಂದು ಘೋಷಿಸಲು ಅಂತರಾಷ್ಟ್ರೀಯ ಸಮ್ಮೇಳನ ಕರೆಯಬೇಕೆಂಬ ಗೊರ್ಬಚೆವ್ ಸಲಹೆ ಭಾರತದ ಜನತೆಯ ದೃಷ್ಟಿಯಿಂದ ವಿಶೇಷ ಮಹತ್ವದ್ದು. ಒಂದು ದಶಕದಿಂದ ಇದಕ್ಕೆ ನಕಾರ ಸೂಚಿಸುತ್ತಾ ಬಂದಿರುವ ಅಮೆರಿಕನ್ ಸಾಮ್ರಾಜ್ಯಶಾಹಿಗಳು ನಮ್ಮ ದೇಶವನ್ನು ಮಿಲಿಟರಿ ಸರ್ವಾಧಿಕಾರಿಗಳಿಂದ ಸುತ್ತುವರಿದಿರುವುದು ನಮಗೆಲ್ಲರಿಗೂ ತಿಳಿದ ವಿಷಯ.

ವಿಶ್ವಾದ್ಯಂತ ವಿಶೇಷವಾಗಿ ಭಾರತದಲ್ಲಿ ಶಾಂತಿಪರ ಶಕ್ತಿಗಳು ಈ ಪ್ರಸ್ತಾಪಗಳ ಪರವಾಗಿ ದೊಡ್ಡ ಪ್ರಮಾಣದಲ್ಲಿ ಸಾರ್ವಜನಿಕ ಅಭಿಪ್ರಾಯ ಮೂಡಿಸಿ ಸಾಮ್ರಾಜ್ಯಶಾಹೀ ಶಕ್ತಿಗಳು, ವಿಶೇಷವಾಗಿ ಅಮೆರಿಕಾ ಗೊರ್ಬಚೆವ್‌ರ ಈ ಪ್ರಸ್ತಾಪಗಳಿಗೆ ಪ್ರತಿಸ್ಪಂದಿಸಿ ಈ ಪ್ರದೇಶ ನಿಶ್ಶಸ್ತ್ರೀಕೃತ ಹಾಗೂ ಶಾಂತಿಯಿಂದ ಕೂಡಿದ ವಲಯವಾಗುವಂತೆ ಮಾಡಬೇಕೆಂದು ಸಿಪಿಐ[ಎಂ] ಕರೆ ನೀಡಿದೆ.

‘ನಾವು ಹೇಳುವುದೇ ಪರಮ ಸತ್ಯವೆನ್ನಿ ಇಲ್ಲದಿದ್ದರೆ...’

ಅಮೆರಿಕಾದ ವಿದೇಶಾಂಗ ಇಲಾಖೆ ಪ್ರತಿ ವರ್ಷ ಬೇರೆ ದೇಶಗಳು ವಿಶ್ವಸಂಸ್ಥೆಯಲ್ಲಿ ತನ್ನೊಡನೆ ಎಷ್ಟು ಬಾರಿ ಮತ ನೀಡಿವೆ ಎಂಬ ವಿಶ್ಲೇಷಣೆಯ ಆಧಾರದ ಮೇಲೆ ಆ ದೇಶಗಳೊಡನೆ ಪರಸ್ಪರ ಸಂಬಂಧಗಳನ್ನು ರೂಪಿಸುವ ವರದಿ ನೀಡುತ್ತದೆಯಂತೆ.

ಈ ವರ್ಷ ಭಾರತ ಹತ್ತು ಪ್ರಮುಖ ವಿಷಯಗಳಲ್ಲಿ, ಶೇಕಡಾ 8.4ರಷ್ಟು ಮಾತ್ರವೇ ಅಮೇರಿಕಾದ ನಿಲುವನ್ನು ಬೆಂಬಲಿಸಿ ಮತ ನೀಡಿದೆ ಎಂದು ಇಲಾಖೆ ವರದಿ ಮಾಡಿದೆಯಂತೆ. ಆ ಹತ್ತು ಪ್ರಮುಖ ವಿಷಯಗಳು ಯಾವುದು ಗೊತ್ತೆ ? ನಿಕಾರಗುವಾದ ವಿರುದ್ಧ ಅಮೇರಿಕನ್ ವ್ಯಾಪಾರ ಪ್ರತಿಬಂಧದ ಟೀಕೆ, ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದ ನೀತಿಯ ಬಗ್ಗೆ ಅಮೇರಿಕನ್ ನಿಲುವಿನ ಟೀಕೆ, ಪಶ್ಚಿಮ ಏಷ್ಯಾದಲ್ಲಿ ಅಮೇರಿಕನ್ ನಿಲುವಿನ ಟೀಕೆ, ವಿಶ್ವಸಂಸ್ಥೆಯಲ್ಲಿ ಇಸ್ರೇಲೀ ಪ್ರತಿನಿಧಿತ್ವದ ಬಗ್ಗೆ ಇತ್ಯಾದಿ. ಡಾಲರ್ ಯಜಮಾನರೊಂದಿಗೆ ಕೈಕುಲುಕಬೇಕೆ ? ಈ ಎಲ್ಲಾ ಅಮಾನುಷ ವರ್ತನೆಗಳನ್ನು ಬೆಂಬಲಿಸಿ. ಇದು ವಿಶ್ವದ “ಮಹಾನ್ ಪ್ರಜಾಪ್ರಭುತ್ವ” ದ ಆಜ್ಞೆ !

ಸತಿ ವಿರುದ್ಧ ಸುಪ್ರೀಂ ಕೋರ್ಟ್ ಆದೇಶ : ಮಹಿಳೆಯರ ಗೆಲುವು

ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ಸುಪ್ರೀಂ ಕೋರ್ಟಿನಲ್ಲಿ ಹಾಕಿದ್ದ ರಿಟ್ ಅರ್ಜಿಯ ಬಗ್ಗೆ ಸುಪ್ರೀಂ ಕೋರ್ಟ್ ನೀಡಿದ ಆದೇಶದಿಂದಾಗಿ ಸತಿ ವಿರುದ್ಧ ಹೋರಾಟದಲ್ಲಿ ಮಹಿಳಾ ಆಂದೋಲನ ಒಂದು ಮಹತ್ವದ ವಿಜಯ ಪಡೆದಂತಾಗಿದೆ.

ರಾಜಸ್ತಾನದ ಝುನ್‌ಝುನ್‌ನಲ್ಲಿ ಸತಿ ಪೂಜೆ ಮತ್ತು ಮೇಳ ನಡೆಯುವುದನ್ನು ನಿಲ್ಲಿಸಬೇಕೆಂಬ ಅರ್ಜಿಯ ಬಗ್ಗೆ ತೀರ್ಪು ನೀಡಿದ್ದ ಸುಪ್ರೀಂಕೋರ್ಟ್ ಮೇಳವನ್ನು ನಿರ್ಬಂಧಿಸಿದ್ದರೂ ಪೂಜೆ ನಡೆಯಲು ಅವಕಾಶ ನೀಡಿತ್ತು. ಆದರೆ ಸತಿ ಪೂಜೆಗಾಗಿಯೇ ಈ ಮೇಳ ನಡೆಯಲಿತ್ತು ಎಂಬ ಅಂಶ ನವಭಾರತ ಟೈಮ್ಸ್ ವರದಿಗಾರರ ಮೂಲಕ ಬೆಳಕಿಗೆ ಬಂದಾಗ ಎ.ಐ.ಡಿ.ಡಬ್ಲ್ಯು.ಎ. ಈ ರಿಟ್ ಅರ್ಜಿ ಸಲ್ಲಿಸಿತ್ತು. ಈ ಆದೇಶವನ್ನು ತಕ್ಷಣ ಜಾರಿಗೊಳಿಸಬೇಕೆಂದು ಮಹಿಳಾ ಸಂಘಟನೆಗಳು ಕೇಂದ್ರ ಹಾಗೂ ರಾಜಸ್ತಾನ ಸರ್ಕಾರಗಳನ್ನು ಒತ್ತಾಯಿಸಿವೆ.

ಅಸ್ಸಾಂನಲ್ಲಿ ಪ್ರವಾಹ : ಕೇಂದ್ರದ ಪಕ್ಷಪಾತ - ರಾಜ್ಯದ ನಿಷ್ಕ್ರಿಯತೆ

ಅಸ್ಸಾಂ ಈ ಬಾರಿ ಕಂಡ ನೆರೆಹಾವಳಿ ಹಿಂದೆಂದೂ ಕಂಡರಿಯದಷ್ಟು ಭೀಕರವಾದದ್ದು. ಈ ಒಂದು ವರ್ಷದಲ್ಲೇ ಈಗಾಗಲೇ ನಾಲ್ಕು ಬಾರಿ ಪ್ರವಾಹ ಹಾವಳಿಯುಂಟುಮಾಡಿದೆ. ರಾಜ್ಯದ 18ರಲ್ಲಿ 17 ಜಿಲ್ಲೆಗಳನ್ನು ಇದು ತಟ್ಟಿದೆ. ಇನ್ನೂರಕ್ಕೂ ಹೆಚ್ಚು ಮಂದಿ ಪ್ರಾಣ ಕಳಕೊಂಡಿದ್ದಾರೆ. 8 ಸಾವಿರ ಹಳ್ಳಿಗಳು ನೀರುಪಾಲಾಗಿವೆ. ಸಾವಿರಾರು ಜಾನುವಾರುಗಳು ಕಾಣೆಯಾಗಿವೆ. 75–80 ಲಕ್ಷ ಮಂದಿ ನಿರಾಶ್ರಿತರಾಗಿದ್ದಾರೆ.

ರಾಜ್ಯ ಸರ್ಕಾರ ಪ್ರವಾಹ ಪೀಡಿತರಿಗೆ ತಕ್ಷಣ ಹಾಗೂ ಸಾಕಷ್ಟು ನೆರವು ನೀಡುವಲ್ಲಿ ವಿಫಲವಾಗಿದೆ. ಕೇಂದ್ರ ಸರ್ಕಾರ ನೆರವಿನ ಆಶ್ವಾಸನೆ ನೀಡಿದರೂ ಇನ್ನೂ ಅದರ ನೆರವು ದೆಹಲಿ ಬಿಟ್ಟಿಲ್ಲ. ಪ್ರಧಾನ ಮಂತ್ರಿಗಳು ಇದರಲ್ಲಿ ನಾವೇನು ರಾಜಕೀಯ ಮಾಡುವುದಿಲ್ಲ ಎಂದು ಹೇಳುತ್ತಲೇ ರಾಜಕೀಯ ಮಾಡುತ್ತಿದ್ದರೆ, ರಾಜ್ಯದ ಎ.ಜಿ.ಪಿ. ಸರ್ಕಾರ ಸರ್ವ ಪಕ್ಷ ಸಮಿತಿ ರಚಿಸಿ ಪರಿಹಾರ ಕ್ರಮ ತೀವ್ರಗೊಳಿಸಬೇಕೆಂಬ ಸಲಹೆ ನೀಡಿದರೂ ಮೌನ ತಾಳಿದೆ.

ಈ ನಡುವೆ ಸಿ.ಪಿ.ಐ. (ಎಂ) ಹಾಗೂ ಸಾಮೂಹಿಕ ಸಂಘಟನೆಗಳು ತಾವೇ ಸ್ವತಃ ಪರಿಹಾರ ಕಾರ್ಯಗಳಲ್ಲಿ ತೊಡಗಿದ್ದಾರೆ.

ಬಿಹಾರ : ಕಾಂಗ್ರೆ-ಕ್ರಿಮಿನಲ್‌ಗಳ ಸಖ್ಯ

ಆಗಸ್ಟ್ 11ರಂದು ಬಿಹಾರದ ಜಹಾನಾಬಾದ್ ಜಿಲ್ಲೆಯ ದಮೂಹಾ-ಖಾಗರಿ ಎಂಬಲ್ಲಿ ರಾಮಶಿಶ್ ಯಾದವ್ ನೇತೃತ್ವದಲ್ಲಿ 30 ಕ್ರಿಮಿನಲ್‌ಗಳು ಸಿಕ್ಕಾಪಟ್ಟೆ ಗುಂಡುಹಾರಿಸಿ ಹನ್ನೊಂದು ಹರಿಜನರನ್ನು ಕೊಂದಿದ್ದರು. ಇವರಲ್ಲಿ ಐವರು ಸಿ.ಪಿ.ಐ(ಎಂ) ನೇತೃತ್ವದ ಬಿಹಾರ್ ಕೃಷಿ ಕೂಲಿಗಾರರ ಸಂಘದ ಕಾರ್ಯಕರ್ತರು ಹಾಗೂ ಇತರರು ಐ.ಪಿ.ಎಫ್. ಪ್ರಭಾವಕ್ಕೊಳಗಾದವರು.ಸಿ.ಪಿ.ಐ (ಎಂ)ನ ಬಿಹಾರ ರಾಜ್ಯ ಸಮಿತಿಯ ನಿಯೋಗವೊಂದು ಈ ಘಟನೆಯ ಬಗ್ಗೆ ನಡೆಸಿದ ತನಿಖೆಯಲ್ಲಿ ರಾಜ್ಯದ ಆಳುವ ಪಕ್ಷದ ರಾಜಕಾರಣಿಗಳು, ಕ್ರಿಮಿನಲ್‌ಗಳು ಹಾಗೂ ಜಿಲ್ಲಾ ಆಡಳಿತದ ನಡುವಿನ ಶಾಮೀಲು ಸ್ಪಷ್ಟವಾಗಿ ಕಂಡುಬಂತು. ಈ ಘಟನೆಗೆ ಮೊದಲು ನಡೆದ ಇಂತಹ ಇನ್ನೊಂದು ಘಟನೆಯ ಅಪರಾಧಿಗಳನ್ನು ಬಂಧಿಸಿದ್ದರೆ ಈ ಹತ್ಯಾಕಾಂಡ ನಡೆಯುತ್ತಿರಲಿಲ್ಲವೆಂದು ಸಿ.ಪಿ.ಐ.(ಎಂ) ನಿಯೋಗ ಅಭಿಪ್ರಾಯ ಪಟ್ಟಿದೆ. ಕಾಂಗ್ರೆಸ್ (ಐ) ಎಂ.ಎಲ್.ಎ. ಯ ಮಧ್ಯ ಪ್ರವೇಶದಿಂದಾಗಿ ಈ ಬಂಧನ ನಡೆದಿರಲಿಲ್ಲ.

ರಾಮಾಶಿಶ್ ಯಾದವ್‌ನನ್ನು ತಕ್ಷಣ ಬಂಧಿಸಬೇಕು,ಕೊಲ್ಲಲ್ಪಟ್ಟವರ ಕುಟುಂಬಗಳಿಗೆ ತಕ್ಷಣ ಒಂದು ಲಕ್ಷ ರೂ ಹಾಗೂ ಗಾಯಗೊಂಡವರ ಕುಟುಂಬಗಳಿಗೆ 30 ಸಾವಿರ ರೂ. ಪರಿಹಾರ, ಮರುವಸತಿ ಹಾಗೂ ಜಿಲ್ಲಾ ಮ್ಯಾಜಿಸ್ಟ್ರೇಟ್ ಹಾಗೂ ಸಂಬಂಧಪಟ್ಟ ಇತರ ಅಧಿಕಾರಿಗಳನ್ನು ಕೆಲಸದಿಂದ ತೆಗೆದು ಹಾಕಬೇಕೆಂದು ಸಿ.ಪಿ.ಐ. (ಎಂ) ಒತ್ತಾಯಿಸಿದೆ.

ಹದಿಮೂರನೇ ಮಹಾ ಅಧಿವೇಶನದತ್ತ

ಜಮ್ಮು-ಕಾಶ್ಮೀರ ರಾಜ್ಯ ಸಮ್ಮೇಳನ

ಸಿಪಿಐ(ಎಂ)ನ ಹದಿಮೂರನೇ ಮಹಾಧಿವೇಶನದತ್ತ ಮೊದಲ ಹೆಜ್ಜೆಯಾಗಿ ಸೆಪ್ಟಂಬರ್ 3 ಹಾಗೂ 4 ರಂದು ಜಮ್ಮು-ಕಾಶ್ಮೀರ 3 ನೇ ರಾಜ್ಯ ಸಮ್ಮೇಳನ ಕಾಶ್ಮೀರ ಕಣಿವೆಯ ಕೋಕರ್‌ನಾಗ್ ಎಂಬ ಹಳ್ಳಿಯಲ್ಲಿ ಜರುಗಿತು.

ವರ್ಣಮಯ ಮೆರವಣಿಗೆ, ಬೃಹತ್ ಸಾರ್ವಜನಿಕ ಸಭೆ, ಗಂಭೀರ ಚರ್ಚೆ ಹಾಗೂ ಸಮ್ಮೇಳನ ಅಂಗೀಕರಿಸಿದ ಮಹತ್ವದ ನಿರ್ಣಯಗಳು ಮತ್ತು ತೀರ್ಮಾನಗಳನ್ನು ನೋಡಿದಾಗ ರಾಜ್ಯದಲ್ಲಿ ಸಿ.ಪಿ.ಐ (ಎಂ)ನ ಗಮನಾರ್ಹ ಬೆಳವಣಿಗೆ ರಂಗ ಸಿದ್ಧವಾದಂತೆ ಕಾಣಿಸುತ್ತದೆ. ಸಮ್ಮೇಳನ ರಾಜ್ಯದ ಜನತೆ ಭಾರತದ ಇತರರೊಂದಿಗಿನ ತಮ್ಮ ಐಕ್ಯತೆಯನ್ನು ದೃಢವಾಗಿ ಕಾಪಾಡಿಕೊಳ್ಳುತ್ತಾರೆ ಎಂದು ಮತ್ತೊಮ್ಮೆ ಒತ್ತಿ ಹೇಳಿ ರಾಜ್ಯದ ಜಾತ್ಯತೀತ ಹಾಗೂ ಪ್ರಜಾಪ್ರಭುತ್ವವಾದೀ ಶಕ್ತಿಗಳಲ್ಲಿ ಹೊಸ ನಿರೀಕ್ಷೆ ಮೂಡಿಸಿದೆ.

ಕಾ|| ಹರಿಕಿಶನ್‌ಸಿಂಗ್ ಸುರ್ಜೀತ್ ಸಮ್ಮೇಳನದಲ್ಲಿ ಭಾಗವಹಿಸಿ ಮಾರ್ಗದರ್ಶನ ನೀಡಿದರು. ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಾ, ಅವರು ರಾಜ್ಯದಲ್ಲಿ ಕೇಂದ್ರ ಸರ್ಕಾರ ರಾಷ್ಟ್ರೀಯ ಹಿತಕ್ಕಿಂತ ಪಕ್ಷದ ಸಂಕುಚಿತ ಹಿತಕ್ಕೆ ಹೆಚ್ಚು ಗಮನ ಕೊಟ್ಟು ದೇಶದ ಇತರೆಡೆಯಂತೆ ಜಮ್ಮು-ಕಾಶ್ಮೀರದಲ್ಲಿ ಮೂಲಭೂತವಾದಿ, ಹಾಗೂ ಪ್ರತ್ಯೇಕತಾವಾದಿ ಶಕ್ತಿಗಳಿಗೆ ಇಂಬುಕೊಟ್ಟಿದೆ ಎಂದು ಹೇಳಿದರು. ತಮ್ಮ ಪಾರಂಪರಿಕ ಕೋಮು ಸೌಹಾರ್ದವನ್ನು ಕಾಪಾಡಿಕೊಂಡು ಕಾರ್ಮಿಕರ, ರೈತರ ವರ್ಗ ಸಂಘಟನೆಗಳನ್ನು ಬಲಗೊಳಿಸಿ ಪ್ರಜಾಪ್ರಭುತ್ವ ಆಂದೋಲನ ರಭಸದಿಂದ ಮುನ್ನಡೆಯುವಂತೆ ಮಾಡಬೇಕೆಂದು ಅವರು ರಾಜ್ಯದ ಜನತೆಗೆ ಕರೆನೀಡಿದರು.

ಸಮ್ಮೇಳನದ ವರದಿ ಮಂಡಿಸಿದ ಕಾ|| ಯುಹಮ್ಮದ್ ಯೂಸುಫ್ ತರಿಗಾಮಿ ರಾಜ್ಯದ ಸಾಮಾಜಿಕ-ಆರ್ಥಿಕ ಸಮಸ್ಯೆಗಳನ್ನು ವಿಶ್ಲೇಷಿಸಿ ರಾಜ್ಯ ಸರ್ಕಾರ ಇವನ್ನು ಪರಿಹರಿಸುವಲ್ಲಿ ತೋರಿದ ಅರೆಮನಸ್ಸನ್ನು ಟೀಕಿಸಿದರು. ಇದರಿಂದಾಗಿ ಜನತೆಯಲ್ಲಿನ ಅಸಂತೃಪ್ತಿಯನ್ನು ಪ್ರತ್ಯೇಕತಾವಾದಿ ಶಕ್ತಿಗಳು ತಮ್ಮ ದುಷ್ಟ ಹಂಚಿಕೆಗಳನ್ನು ಈಡೇರಿಸಿಕೊಳ್ಳಲುಬಳಸುತ್ತಿವೆಯೆಂದರು.

105 ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಇವರಲ್ಲಿ 13 ಸಂಗಾತಿಗಳು ಸ್ನಾತಕೋತ್ತರ ಪದವೀಧರರು, ಇಪ್ಪತ್ತೊಂದು ಪದವೀಧರರು ನಾಲ್ವರು ಮಾತ್ರ ನಿರಕ್ಷರಿಗಳು. 28 ಪ್ರತಿನಿಧಿಗಳು ಕಾರ್ಯ ವರದಿ ಹಾಗೂ ಸಂಘಟನಾ ವರದಿಯ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದರು.

ಸಮ್ಮೇಳನ 11 ಸದಸ್ಯರುಳ್ಳ ರಾಜ್ಯ ಸಮಿತಿಯನ್ನು ಆರಿಸಿತು. ಕಾ|| ಮಹಮ್ಮದ್ ಯೂಸುಫ್ ತರಿಗಾಮಿ ರಾಜ್ಯ ಸಮಿತಿ ಕಾರ್ಯದರ್ಶಿಗಳಾಗಿ ಪುನರಾಯ್ಕೆಗೊಂಡರು.

ಕಳೆದ ಸಮ್ಮೇಳನದಿಂದೀಚೆಗೆ ರಾಜ್ಯದಲ್ಲಿ ಪಕ್ಷದ ಸದಸ್ಯತ್ವ ದ್ವಿಗುಣಗೊಂಡಿರುವುದರಿಂದ ಪಕ್ಷದ 13 ನೇ ಮಹಾಧಿವೇಶನಕ್ಕೆ 5 ಪ್ರತಿನಿಧಿಗಳನ್ನು ಸಮ್ಮೇಳನ ಆರಿಸಿತು. 12 ನೇ ಮಹಾಧಿವೇಶನದಲ್ಲಿ ರಾಜ್ಯದ ಮೂವರು ಪ್ರತಿನಿಧಿಗಳು ಭಾಗವಹಿಸಿದ್ದರು.

ಮಹಾರಾಷ್ಟ್ರ : ದೊಡ್ಡ ಯುವಜನ ವಿದ್ಯಾರ್ಥಿ ರ್‍ಯಾಲಿ

ಸೆಪ್ಟೆಂಬರ್ 2 ರಂದು ಮುಂಬೈ ಒಂದು ಬೃಹತ್ ಯುವಜನ-ವಿದ್ಯಾರ್ಥಿ ರ್‍ಯಾಲಿಯನ್ನು ಕಂಡಿತು. ಸ್ವಾತಂತ್ರ್ಯೋತ್ತರ ಅವಧಿಯಲ್ಲಿನ ದೊಡ್ಡ ರ್‍ಯಾಲಿ ಇದೆಂದು ಹೇಳಲಾಗಿದೆ. ಮಹಾರಾಷ್ಟ್ರದ ಎಲ್ಲಾ ಮೂಲೆಗಳಿಂದ 40 ಸಾವಿರ ವಿದ್ಯಾರ್ಥಿ-ಯುವಜನರು ಇದರಲ್ಲಿ ಭಾಗವಹಿಸಿದ್ದರು. ಎಸ್. ಎಫ್. ಐ. ಡಿ. ವೈ. ಎಫ್.ಐ., ಛಾತ್ರ ಜನತಾ, ಭಾರತೀಯ ರಿಪಬ್ಲಿಕನ್ ಪಾರ್ಟಿ ಯುವ ಸಮಿತಿ, ಯುವಕ ಕ್ರಾಂತಿದಳ ಹಾಗೂ ಛಾತ್ರ ಭಾರತಿ ಈ ಸಂಘಟನೆಗಳ "ಯುವವಿದ್ಯಾರ್ಥಿ ಹಕ್ಕು ಸಂಘರ್ಷ ಸಮಿತಿ" ನೇತೃತ್ವದಲ್ಲಿ ಈ ರ್‍ಯಾಲಿ ಹಾಗೂ ಅದರ ಮೊದಲಿನ ಬೃಹತ್ ಮೆರವಣಿಗೆ ನಡೆಯಿತು.

ಇದರಲ್ಲಿ ಎಸ್.ಎಫ್.ಐ.ಹಾಗೂ ಡಿವೈಎಫ್‌ಐ ಇವೆರಡು ಸಂಘಟನೆಗಳೇ ಅತ್ಯಂತ ಹೆಚ್ಚು ವಿದ್ಯಾರ್ಥಿ, ಯುವಜನರನ್ನು ಸಂಘಟಿಸಿತ್ತು. ರಾಜ್ಯದ 30 ಜಿಲ್ಲೆಗಳಲ್ಲಿ 25 ರಿಂದ ಈ ಎರಡು ಸಂಘಟನೆಗಳ ಪ್ರತಿನಿಧಿಗಳು ಭಾರಿ ಸಂಖ್ಯೆಯಲ್ಲಿ ಬಂದಿದ್ದರು.

ಈ ಮತಪ್ರದರ್ಶನಕ್ಕೆ ಪೂರ್ವಭಾವಿಯಾಗಿ ರಾಜ್ಯಾದ್ಯಂತ ಮೂರು ತಿಂಗಳ ತೀವ್ರ ಪ್ರಚಾರ ಪ್ರಕ್ಷೋಭೆ ನಡೆಸಲಾಗಿತ್ತು. ಕೇಂದ್ರದ ಹೊಸ ಶಿಕ್ಷಣ ನೀತಿಯ ಹಾಗೂ ರಾಜ್ಯದಲ್ಲಿ ಅದರ ಜಾರಿಯ ಪದ್ಧತಿ, ಅಗಾಧ ಗಾತ್ರದ ನಿರುದ್ಯೋಗದ ವಿರುದ್ಧ ಹೋರಾಟ, ರಾಷ್ಟ್ರೀಯ ಐಕ್ಯತೆಯ ರಕ್ಷಣೆ ಮಹಾರಾಷ್ಟ್ರದಲ್ಲಿ ಹೆಚ್ಚುತ್ತಿರುವ ಜಾತಿ-ಕೋಮು ಶಕ್ತಿಗಳ ವಿರುದ್ಧ. ವಿಶೇಷವಾಗಿ ಶಿವಸೇನೆ, ಆರ್.ಎಸ್.ಎಸ್, ಮುಸ್ಲಿಂ ಲೀಗ್ ಮತ್ತಿತರರ ವಿರುದ್ಧ ಹೋರಾಟ ಹಾಗೂ ಜನವಿರೋಧಿ ರಾಜೀವ್ ಸರ್ಕಾರದ ರಾಜೀನಾಮೆ ಈ ಪ್ರಚಾರ ಪ್ರಕ್ಷೋಭೆಯ, ರ್‍ಯಾಲಿಯ ಮುಖ್ಯ ಬೇಡಿಕೆಗಳು.

(1ನೇ ಪುಟದಿಂದ)

ಈ ಸ್ವಯಂ ಸೇವಕರ ತಲೆಯಲ್ಲಿ 'ಹಿಂದೂ ಶ್ರೇಷ್ಠತೆ'ಯನ್ನು ತುಂಬಲಾಗುತ್ತದೆ. ಅವು ಬರಬರುತ್ತಾ ಕಮ್ಯುನಿಸ್ಟ್ ವಿರೋಧಿ ಅಲ್ಪಸಂಖ್ಯಾತ-ವಿರೋಧಿ ಸಿದ್ಧಾಂತದ ಜತೆ ಶಸ್ತ್ರಾಸ್ತ್ರಗಳನ್ನು ಉಪಯೋಗಿಸಲು ತರಬೇತಿ ನೀಡಲಾಗುತ್ತದೆ. ಈ ರೀತಿ ತಯಾರಾದ ಸ್ವಯಂ ಸೇವಕರನ್ನು ಮುಸ್ಲಿಂಮರು, ಕ್ರಿಶ್ಚಿಯನ್ನರು ಮತ್ತು ಕಮ್ಯುನಿಸ್ಟರ ಮೇಲೆ ಆಕ್ರಮಣ ಮಾಡಲು ಉಪಯೋಗಿಸಲಾಗುತ್ತದೆ.

ಆರೆಸ್ಸೆಸ್ ಸ್ವಯಂಸೇವಕರು ಶಾಖೆಗಳಲ್ಲಿ ಕಲಿತಿರುವ ಸಿದ್ಧಾಂತ ಮತ್ತು ಶಸ್ತ್ರಾಸ್ತ್ರ ತರಬೇತಿಯನ್ನು ಎಲ್ಲಿ, ಹೇಗೆ ಉಪಯೋಗಿಸುತ್ತಾರೆ ? ಈ ಪ್ರಶ್ನೆಗೆ ಸಿದ್ಧ ಉತ್ತರವಿದೆ. 1971ರ ತೆಲ್ಲಿಚೇರಿ ಕೋಮುಗಲಭೆಗಳ ವಿಚಾರಣೆಗೆ ನೇಮಿಸಿದ ವಿಥ್ಯಾಥಿಲ್ ಕಮಿಶನ್‌ನ ವರದಿಯಲ್ಲಿ ಈ ಕಮಿಶನ್ ಪ್ರಕಾರ ಕೋಮುಗಲಭೆಗಳು ಮೂರು ಹಂತಗಳಲ್ಲಿ ನಡೆದವು. ಮೊದಲ ಹಂತದಲ್ಲಿ ಹಿಂದೂ ಮತಾಂಧರು ಮುಸ್ಲಿಮರ ಮೇಲೆ ಆಕ್ರಮಣ ಮಾಡಿದರು. ಮುಸ್ಲಿಮರ ಪ್ರತ್ಯಾಕ್ರಮಣ ಎರಡನೆಯ ಹಂತವಾದರೆ, ಆರೆಸ್ಸೆಸ್ ಸುಸಂಘಟಿತವಾಗಿ ಗಲಭೆಗಳಲ್ಲಿ ಭಾಗವಹಿಸಿದ್ದು ಮೂರನೇಯ ಮತ್ತು ಕೊನೆಯ ಹಂತ.

ಕಮಿಶನ್ ಮುಂದುವರಿದು ಎಲ್ಲಾ ರಾಜಕೀಯ ಪಕ್ಷಗಳು ತಮ್ಮ ಸಮರ್ಥಕ ಕೋಮುಗಳ ಪರವಾಗಿ ಗಲಭೆಯಲ್ಲಿ ಭಾಗವಹಿಸಿದರೆ ಸಿಪಿಎಂ ಒಂದೇ ಈ ರೀತಿ ಮಾಡಲಿಲ್ಲ. ಸಿಪಿಎಂನ ಕಾರ್ಯಕರ್ತರು ಕೆಂಬಾವುಟ ಹಾರುತ್ತಿರುವ ವಾಹನಗಳಲ್ಲಿ ಗಲಭೆ-ಪೀಡಿತ ಪ್ರದೇಶಗಳಲ್ಲಿ ಕೋಮು ಸೌಹಾರ್ದ ಹರಡುವ ಕೆಲಸ ಮಾಡುತ್ತಿದ್ದರು ಎಂದಿದೆ. ಕಮಿಶನ್ ಮೇಲ್ಕಂಡ ವರದಿಗೆ ಇನ್ನಷ್ಟು ಸೇರಿಸಬಹುದು. ಪಕ್ಷದ ಸ್ಥಳೀಯ ನಾಯಕರು ಗಲಭೆಕೋರರನ್ನು ತಡೆಯಲು ಜನರನ್ನು ಸಂಘಟಿಸುತ್ತಾ, ಒಬ್ಬ ನಾಯಕರು ಹುತಾತ್ಮರಾದರು ಕೂಡಾ. ಪಕ್ಷದ ರಾಜ್ಯ ನಾಯಕರು (ಎ.ಕೆ. ಗೋಪಾಲನ್ ಮತ್ತು ನಾನು ಸೇರಿದಂತೆ) ಗಲಭೆ ಪೀಡಿತ ಪ್ರದೇಶಗಳಲ್ಲಿ ಪ್ರವಾಸಮಾಡಿ ಕೋಮು ಸೌಹಾರ್ದತೆಯ ಸಂದೇಶ ಹರಡಿದರು. ಆಗಿನ ಗೃಹ ಮಂತ್ರಿಯಾಗಲಿ ಇತರ ಮಂತ್ರಿವರ್ಯರಾಗಲಿ, ತೆಲ್ಲಿಚೇರಿ ಅತಿಥಿ ಭವನದಲ್ಲಿ ತಂಗಿ ಪರಿಸ್ಥಿತಿಯ ಅಧ್ಯಯನ ಮಾಡುತ್ತಿದ್ದರು !

ಘರ್ಷಣೆಗಳಿಗೆ ಆರೆಸ್ಸೆಸ್ ಹತಾಶೆ ಕಾರಣ

ಇದೇನು ತೆಲ್ಲಿಚೇರಿ ಗಲಭೆಗಳಿಗೆ ಸೀಮಿತವಾದ ಸಂಗತಿ ಅಲ್ಲ. ಇನ್ನೆಷ್ಟೋ ಘಟನೆಗಳಲ್ಲಿ ಆರೆಸ್ಸೆಸ್ ಮುಸ್ಲಿಮರ ಮೇಲೆ ಮಲಬಾರ್ ಪ್ರದೇಶದಲ್ಲಿ ದಾಳಿಮಾಡಿದಾಗ ಕಮ್ಯುನಿಷ್ಟರು ತಮ್ಮ ಪ್ರಾಣ ಲೆಕ್ಕಿಸದೆ ಮುಸ್ಲಿಮರನ್ನು ರಕ್ಷಿಸಲು ಹೋರಾಡಿದರು. ಆರೆಸ್ಸೆಸ್ 'ಶಾಖೆ'ಗಳಲ್ಲಿ 'ಸ್ವಯಂ ಸೇವಕರು' ಅಲ್ಪ ಸಂಖ್ಯಾತರ ಮೇಲೆ ದಾಳಿ ಮಾಡಲು ತರಬೇತಿ ಪಡೆಯುತ್ತಾರೆ. ಇನ್ನೊಂದೆಡೆ ಕಮ್ಯುನಿಸ್ಟ್ ಪಕ್ಷದ ಶಾಖೆಗಳು ಮತ್ತು ಸಮಿತಿಗಳು ಅವುಗಳ ನಾಯಕತ್ವದಲ್ಲಿರುವ ದುಡಿಯುವ ಜನರ ಸಂಘಟನೆಗಳು ಜನರ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ಹೋರಾಡುತ್ತಾರೆ. ಅಲ್ಪ ಸಂಖ್ಯಾತರು ಶಾಂತಿಯುತವಾಗಿ ಬಾಳ್ವೆ ಮಾಡುವುದು ಇಂತಹ ಹಕ್ಕುಗಳಲ್ಲೊಂದು. ಇದು ಆರೆಸ್ಸೆಸ್ ಮತ್ತು ಸಿಪಿಎಂ ಶಾಖೆಗಳಿಗಿರುವ ವ್ಯತ್ಯಾಸ.

ಆರೆಸ್ಸೆಸ್ ಕೋಮು ಚಟುವಟಿಕೆಗಳಲ್ಲಿ ತೊಡಗಿಲ್ಲವೆ ?

ಇತ್ತೀಚೆಗೆ ನಾನು ಕೊಟ್ಟ ಭಾಷಣಗಳಲ್ಲಿ, ಹೇಳಿಕೆಗಳಲ್ಲಿ ಈ ವ್ಯತ್ಯಾಸದ ಬಗ್ಗೆ ತಿಳಿಹೇಳುವ ಹಲವು ಸಂದರ್ಭಗಳು ಒದಗಿಬಂದವು. ಇದು ಆರೆಸ್ಸೆಸ್ ಮಾತ್ರವಲ್ಲ ಕಾಂಗ್ರೆಸ್, ಮುಸ್ಲಿಂ ಲೀಗ್ ಮಿತ್ರರ ನಾಯಕರಿಗೂ ಕಣ್ಣು ಕೆಂಪು ಮಾಡಿತು. ನಾನು ಕೋಮುಭಾವನೆಗಳನ್ನು ಪ್ರಚೋದಿಸುತ್ತಿದ್ದೇನೆ. ಅದರಲ್ಲೂ ಬಹುಸಂಖ್ಯಾತ ಕೋಮಿನ ವಿರುದ್ಧ ಅಲ್ಪ ಸಂಖ್ಯಾತರನ್ನು ಪ್ರಚೋದಿಸುತ್ತಿದ್ದೇನೆ ಎಂದು ಈ ನಾಯಕರ ಆಪಾದನೆ. ಈ ಆಪಾದನೆಗಳನ್ನೇ ರಾಷ್ಟ್ರೀಯ ಪತ್ರಿಕೆಗಳು ಉರು ಹೊಡೆದು ಹೇಳುತ್ತಿರುವುದು. ಇವರ ಭಾವನೆ ಎಂದರೆ ಕೇರಳದಲ್ಲಿ ಕೋಮು ಶಾಂತಿ ಇದೆ. ಆರೆಸ್ಸೆಸ್ ಯಾವುದೇ ಅಲ್ಪ ಸಂಖ್ಯಾತ ವಿರೋಧಿ ಪ್ರಚಾರದಲ್ಲಿ ತೊಡಗಿಲ್ಲ. ಇಂತಹ ಸಂದರ್ಭದಲ್ಲಿ ಇದರ ಬಗ್ಗೆ ಮಾತನಾಡುವುದು ಪ್ರಚೋದನೆಯಲ್ಲವೆ? ಆದರೆ ಅವರ ಈ ಭಾವನೆ ಯಥಾಸ್ಥಿತಿಗೆ ಅನುಗುಣವಾಗಿದೆಯೇ ಎಂಬುದು ಪ್ರಶ್ನೆ.

ಕೇರಳದಲ್ಲಿ ಮಾತ್ರವಲ್ಲ, ದೇಶದ ತುಂಬೆಲ್ಲ ಆರೆಸ್ಸೆಸ್ ಮುಸ್ಲಿಂ ವಿರೋಧಿ ಕ್ರಿಶ್ಚಿಯನ್ ವಿರೋಧಿ ವಿಷಮಯ ಭಾವನೆ ಹರಡುತ್ತಿದೆ. ಆರೆಸ್ಸೆಸ್ ಮುಖಪತ್ರಿಕೆ ಆರ್ಗನೈಸರ್ ವಾರವಾರವೂ ಹಿಂದೂ ಶ್ರೇಷ್ಠತೆಯನ್ನು ಬೋಧಿಸುತ್ತಾ ಹಿಂದೂಯೇತರ ಕೋಮುಗಳ ಮೇಲೆ ವಿಷ ಕಾರುತ್ತಿದೆ. ಇದರ ಆಧಾರದ ಮೇಲೆ ತಾನೆ ಕೇರಳದಲ್ಲೇ ಆಗಲೇ ಉಳಿದ ಕಡೆ ಆಗಲಿ ಆರೆಸ್ಸೆಸ್ ಶಾಖೆಗಳು ನಡೆಯುವುದು ? ಶಸ್ತ್ರಾಸ್ತ್ರ ತರಬೇತಿ ಜತೆ ಇಂತಹ ಪ್ರಚಾರ ಸೇರಿದರೆ ತೆಲ್ಲಿಚೇರಿ ಗಲಭೆಗಳ ಬಗ್ಗೆ ವಿಥ್ಯಾಥಿಲ್ ಕಮಿಶನ್ ಗುರುತಿಸಿರುವ ಘಟನಾವಳಿಗಳು ನಡೆಯುವುದಿಲ್ಲವೇ? ಕೇರಳದ ಶಾಂತಿ ಪ್ರಿಯ ಜನತೆ ತೆಲ್ಲಿಚೇರಿ ಘಟನೆಗಳು ಪುನರಾವರ್ತನೆ ಆಗಲು ಬಿಡಬಾರದು ಎಂಬ ಜವಾಬ್ದಾರಿ ಹೊತ್ತಿಲ್ಲವೇ ? ಇದನ್ನೆ ಸಿಪಿಎಂ ಮಾಡುತ್ತಿರುವುದು ಮತ್ತು ಇದನ್ನೇ ಪತ್ರಿಕೆಗಳು ಆರೆಸ್ಸೆಸ್ ಮತ್ತು ಕಾಂಗ್ರೆ 'ಬಹುಸಂಖ್ಯಾತ ಕೋಮಿನ ವಿರುದ್ಧ ಅಲ್ಪಸಂಖ್ಯಾತ ಕೋಮಿಗೆ ಪ್ರಚೋದನೆ' ಎಂದು ಕರೆಯುತ್ತಿರುವುದು

ಆಧಾರರಹಿತ ಆಪಾದನೆ

ಈ ಸಂದರ್ಭದಲ್ಲಿ ನಾನು ಪಕ್ಷದ ಸದಸ್ಯರಿಗೆ 'ಶಸ್ತ್ರಾಸ್ತ್ರಗಳನ್ನು ಕೈಗೆತ್ತಿಕೊಳ್ಳಲು' ಕರೆಕೊಟ್ಟಿದ್ದೇನೆ ಎಂದು ಹೇಳಲಾಗುತ್ತಿದೆ. ಅರ್ಥ ಸತ್ಯಪೂರ್ಣಸುಳ್ಳಿನಂತೆಯೇ ಆದ್ದರಿಂದ ನಿಜಸಂಗತಿಗಳನ್ನು ನಾನು ಹೇಳಿಬಿಡುತ್ತೇನೆ.

ಮೊದಲನೆಯದಾಗಿ, ಯು.ಡಿ.ಎಫ್. ಮತ್ತು ಎಲ್.ಡಿ.ಎಫ್. ಗಳಿಗೆ ಬದಲಿಯಾಗಿ 'ಮೂರನೇಯ ಶಕ್ತಿ'ಯಾಗುವ ಆರೆಸ್ಸೆಸ್‌ನ ಆಶಾಭಂಗವಾಗಿದೆ. ಇದರಿಂದಾಗಿ ಇತ್ತೀಚಿನ ಚುನಾವಣೆಗಳಲ್ಲಿ ಅದು ಕಾಂಗ್ರೆಸ್ ಮತ್ತು ಯು.ಡಿ.ಎಫ್. ಜತೆ ಒಪ್ಪಂದ ಮಾಡಿಕೊಳ್ಳಬೇಕಾಯಿತು. ಈ ಹೊಂದಾಣಿಕೆಯ ಫಲವಾಗಿ ಕಾಂಗ್ರೆ ಮತ್ತು ಆರೆಸ್ಸೆಸ್ ಸ್ವಯಂಸೇವಕರು ಎಲ್.ಡಿ.ಎಫ್. ಕಾರ್ಯಕರ್ತರ ಮೇಲೆ ಸಂಘಟಿತವಾಗಿ ಹಲ್ಲೆ ಆರಂಭಿಸಿದರು. ಸ್ವಾಭಾವಿಕವಾಗಿಯೇ, ರಕ್ಷಣೆ, ಪ್ರತ್ಯಾಕ್ರಮಣ, ಮತ್ತು ಘರ್ಷಣೆಗಳು ಇದರ ಫಲವಾಗಿ ನಡೆದವು.

ಎರಡನೆಯದಾಗಿ, ಈ ಘಗಳುರ್ಷಣೆ ತೀರಾ ವಿಕೋಪಕ್ಕೆ ಹೋದಾಗ ಇದು ನಿಲ್ಲದಿದ್ದರೆ (ಅದನ್ನು ನಿಲ್ಲಿಸುವುದು ಕಾಂಗ್ರೆ ಮತ್ತು ಆರೆಸ್ಸೆಸ್ ಜವಾಬ್ದಾರಿ) ಸಿಪಿಎಂ ಕಾರ್ಯಕರ್ತರ ಸ್ವ-ರಕ್ಷಣೆಗೆ ಕ್ರಮಗಳಿಗೆ ಹಿಂಜರಿಯುವುದಿಲ್ಲ ಎಂದು ಪತ್ರಿಕಾ ಗೋಷ್ಠಿಯೊಂದರಲ್ಲಿ ನಾನು ಹೇಳಿದೆ. ಇದನ್ನು ಈ ಘನ ಪತ್ರಕರ್ತರು ಪ್ರಚಾರ ಮಾಡಿದ್ದು ಶಸ್ತ್ರಾಸ್ತ್ರ ಕೈಗೆತ್ತಿಕೊಳ್ಳಲು ಕರೆ ಎಂದು.

ಮೂರನೆಯದಾಗಿ, ಈ ಮೇಲಿನ ಹೇಳಿಕೆಗೆ ಸ್ಪಷ್ಟೀಕರಣ ನೀಡುತ್ತಾ-ವಿವಾದವಿರುವುದುಯಾರು ಘರ್ಷಣೆಗಳಿಗೆ ಕಾರಣ ಕರ್ತರು ಎಂಬ ಪ್ರಶ್ನೆ. ಇದರ ಬಗ್ಗೆ ಮೂವರ ಸಮಿತಿಯೊಂದು ವಿಚಾರಣೆ ನಡೆಸಲಿ. ಈ ಸಮಿತಿಯಲ್ಲಿ ಎರಡೂ ಪಕ್ಷಗಳ ಒಬ್ಬರು ಪ್ರತಿನಿಧಿಗಳಿರಲಿ, ಮೂರನೇ ಸದಸ್ಯರನ್ನು ಸಹಮತದಿಂದ ನೇಮಿಸೋಣ-ಎಂಬ ಸಲಹೆಯನ್ನು ಮುಂದಿಟ್ಟೆ. ಈ ಸಲಹೆ ಬಗ್ಗೆ ಯಾರು ಚಕಾರವೆತ್ತಲಿಲ್ಲ.

ನಾಲ್ಕನೆಯದಾಗಿ, ಮೂವರು ಆರೆಸ್ಸೆಸ್ ಕಾರ್ಯಕರ್ತರು ಘಟನೆಯೊಂದರಲ್ಲಿ ಕೊಲ್ಲಲ್ಪಟ್ಟರು. ಸರ್ಕಾರ ತುರ್ತು ಕ್ರಮ ಕೈಗೊಂಡು ಶಂಕಿತ ಆಪಾದಿತರನ್ನು ಸೆರೆಹಿಡಿಯಿತು. ರಾಜ್ಯ ಮತ್ತು ಜಿಲ್ಲಾ ಸಮಿತಿಗಳು ಪರಿಸ್ಥಿತಿಯನ್ನು ಹದ್ದುಬಸ್ತಿನಲ್ಲಿಡಲು ಕ್ರಮ ಕೈಗೊಂಡರು. ನಾನು ಮತ್ತು ರಾಜ್ಯ ನಾಯಕರು ಘರ್ಷಣೆ ಯಾವ ಗುಂಪಿಗೂ ಒಳ್ಳೆಯದಲ್ಲ ಎಂದು ಹೇಳಿದೆವು. ಇಬ್ಬರು ಮಾಜಿ ನ್ಯಾಯಮೂರ್ತಿಗಳು ಸುಪ್ರೀಂ ಕೋರ್ಟಿನ ಕೃಷ್ಣ ಐಯ್ಯರ್ ಮತ್ತು ಕೇರಳ ಹೈಕೋರ್ಟಿನ ಚಂದ್ರಶೇಖರ ಮೆನನ್ ಘರ್ಷಣೆಗಳು ನಿಲ್ಲಬೇಕೆಂದು ಸಾರ್ವಜನಿಕವಾಗಿ ವಿನಂತಿಸಿದರು. ಇದನ್ನು ಆರೆಸ್ಸೆಸ್ ಮತ್ತು ಸಿ.ಪಿ.ಎಂ.ಗಳ ರಾಜ್ಯ ಸಮಿತಿಗಳು ಒಪ್ಪಿಕೊಂಡವು.

ಸಿ.ಪಿ.ಎಂ.ನ ಪರವಾಗಿ, ಎರಡು ಬಣಗಳ ನಡುವೆ ಭಿನ್ನಾಭಿಪ್ರಾಯ ಶಾರೀರಿಕ ಘರ್ಷಣೆಗಳಿಗೆ ಎಡೆಕೊಡಬಾರದು ಎಂಬುದು ಸಿ.ಪಿ.ಎಂ. ಮತ್ತು ಅದರ ಮಿತ್ರ ಎಡಪಕ್ಷಗಳ ಹಿತಕ್ಕೆ ಅನುಗುಣವಾಗಿದೆ ಎಂದು ನಾನು ಹೇಳಬಲ್ಲೆ. ಎಡ ಮತ್ತು ಜಾತ್ಯತೀತ ಶಕ್ತಿಗಳು ಮತ್ತು ಕೋಮುವಾದಿ ಶಕ್ತಿಗಳು ಪ್ರತಿಪಾದಿಸುವ ರಾಜಕೀಯ, ಸಿದ್ಧಾಂತಗಳ ನಡುವೆ ಶಾಂತಿಯುತ ಪ್ರಜಾಸತ್ತಾತ್ಮಕ ಸ್ಪರ್ಧೆ ನಡೆದರೆ ಎಡ ಜಾತ್ಯತೀತಶಕ್ತಿಗಳೇ ಗೆಲ್ಲುವ ಸಾಮಾಜಿಕ-ಸಾಂಸ್ಕೃತಿಕ ರಾಜಕೀಯ ಸಂದರ್ಭ ಇಂದು ದೇಶದಲ್ಲಿದೆ.

ಕಳೆದ 40 ವರ್ಷಗಳಿಂದ ಕೇರಳದಲ್ಲಿ ಹಿಂದೂ ಪುನರುತ್ಥಾನವಾದ ಮತ್ತು ಕಮ್ಯೂನಿಸ್ಟ್ ಪಕ್ಷದ ಸಿದ್ಧಾಂತ ಮತ್ತು ರಾಜಕೀಯ ಪರಸ್ಪರ ವಿರುದ್ಧವಾಗಿ ಕೆಲಸ ಮಾಡುತ್ತಿವೆ. ದುಡಿಯುವ ಜನರಲ್ಲಿ ಕಮ್ಯೂನಿಸ್ಟ್ ಪಕ್ಷ ಬಲವಾಗಿ ಬೇರು ಬಿಟ್ಟಿದ್ದರೆ, ಆರೆಸ್ಸೆಸ್ ಕಾಲೂರಲೂ ಆಗಿಲ್ಲ.

ಅಖಿಲ ಭಾರತ ಮಟ್ಟದಲ್ಲೂ ಸಿ.ಪಿ.ಎಂ ಮತ್ತು ಅದರ ಎಡ ಮಿತ್ರರು, ಅವರ ಕಡುವೈರಿಗಳು ಅಲಕ್ಷಿಸಲಾಗದಷ್ಟು ಸ್ವತಂತ್ರ ರಾಜಕೀಯ ಶಕ್ತಿಯಾಗಿದ್ದಾರೆ. ಕಾಂಗ್ರೆಸ್‌ಗೆ ಮೂಡಿಬರುತ್ತಿರುವ ಬದಲಿಗೆ ಚಾಲಕಶಕ್ತಿಯಾಗಲು ಆರೆಸ್ಸೆಸ್ ಪ್ರಯತ್ನಿಸಿ ಸೋತು ಹತಾಶರಾಗಿದ್ದಾರೆ. ಆರೆಸ್ಸೆಸ್ ಇಲ್ಲದೆ ಕಾಂಗ್ರೆಸ್‌ಗೆ ಬದಲಿ ರೂಪಿಸಲು ಸಾಧ್ಯವಿಲ್ಲವೆಂಬ ಅವರ ವಾದ ಹುರುಳಿಲ್ಲದ್ದು ಎಂದು ಮಧ್ಯವರ್ತಿ ಪಕ್ಷಗಳ ಕೂಟ ಒಂದರ ಅವತಾರದಿಂದ ತಿಳಿದು ಬಂದಿದೆ. ಆರೆಸ್ಸೆಸ್ ನಾಯಕರು ರಾಜಕೀಯವಾಗಿ ಮುಂದು ಹೋಗುವುದು ಎಂದು ತಿಳಿಯದೆ ದಿಗ್ಮೂಡರಾಗಿದ್ದಾರೆ.

ಕೇರಳದಲ್ಲಿ ಮತ್ತು ಅಖಿಲ ಭಾರತದಲ್ಲೂ ಘರ್ಷಣೆಗಳನ್ನು ಮುಂದುವರಿಸಿ ಅನಿಶ್ಚಿತತೆ ಉಂಟು ಮಾಡುವುದರಿಂದ ಆರೆಸ್ಸೆಸ್‌ಗೆ ಪ್ರಯೋಜನವಿದೆ. ಇಂತಹ ಆರೆಸ್ಸೆಸ್ ಕಾರ್ಯಕರ್ತರಲ್ಲಿ ಮನೆಮಾಡಿರುವ ಸಾಧ್ಯತೆ ಇದೆ. ಬ್ರಿಟೀಷ್ ಮತ್ತು ಕಾಂಗ್ರೆಸ್ ದಬ್ಬಾಳಿಕೆ, ಹಿಂಸಾಚಾರ ಎದುರಿಸಿದ ಕಮ್ಯುನಿಸ್ಟರಿಗೆ ಆರೆಸ್ಸೆಸ್‌ಗೆ ದಬ್ಬಾಳಿಕೆ ಎದುರಿಸುವುದು ಕಷ್ಟದ ಮಾತಲ್ಲ ಎಂದು ಆರೆಸ್ಸೆಸ್‌ನ ತಲೆಕೆಟ್ಟರದ ಕೆಲವರಿಗಾದರೂ ಮನವರಿಕೆಯಾದೀತು ಎಂದು ನನ್ನ ಭರವಸೆ.

ಮುಷ್ಕರ ಯಶಸ್ವಿ

(1ನೇ ಪುಟದಿಂದ)

ಭೂತವನ್ನು ಹೊತ್ತು ಮೆರವಣಿಗೆ ನಡೆಸಿದರು. ರೈಲ್ವೆ ನಿಲ್ದಾಣಕ್ಕೆ ಲಗ್ಗೆ ಹಾಕಿದ ಕಾರ್ಯಕರ್ತರು ಬೃಂದಾವನ ರೈಲನ್ನು 30 ನಿಮಿಷಗಳ ಕಾಲ ತಡೆ ಹಿಡಿದು ಪ್ರಭಟಿಸಿದರು. ಪ್ರದರ್ಶನದಲ್ಲಿ ಹೆಚ್ಚಿನ ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಎಸ್.ಎಫ್.ಐ.ನ ರಾಜ್ಯ ಅಧ್ಯಕ್ಷ ಕಾ॥ ಚೈತ್ಯಾರೆಡ್ಡಿ, ಕಾರ್ಯದರ್ಶಿ ಎಸ್.ವೈ. ಗುರುಶಾಂತ್ ಬೆಂಗಳೂರು ನಗರ ಸಮಿತಿಯ ಕಾ॥ ಶ್ರೀಧರಮೂರ್ತಿ ಡಿ.ವೈ. ಎಫ್.ಐ.ನ ಜಿಲ್ಲಾ ಕಾರ್ಯದರ್ಶಿ ಟಿ. ಶಿವಶಂಕರ್ ಯುವ ಜನತಾ ರಾಜ್ಯ ಅಧ್ಯಕ್ಷರಾದ ಅಶೋಕ ನವಲಗುಂದ, ಪ್ರಧಾನ ಕಾರ್ಯದರ್ಶಿ ಆರ್.ವಿ.ಹರೀಶ್ ರವರುಗಳು ಈ ರೈಲು ತಡೆ ಚಳುವಳಿಯ ಮುಖಂಡತ್ವ ವಹಿಸಿದ್ದರು.

ಉತ್ತರಿಸುವರೆ

[1ನೇ ಪುಟದಿಂದ]

ಹೀಗೆ ತಿಳಿಸಲಾಯಿತು. 'ದೆಹಲಿ ಈ ಬಗ್ಗೆ ಈಗಲೇ ಹೆಜ್ಜೆ ಮುಂದಿಡುವ ಸ್ಥಿತಿಯಿಲ್ಲ. ಏಕೆಂದರೆ ವಿಧಾನಸಭಾ ಚುನಾವಣೆ ಫೆಬ್ರವರಿ 2ರಂದು ಎಂದು ತಿಳಿಸಲಾಗಿದೆ. ಆದ್ದರಿಂದ ದೆಹಲಿಗಿರುವ ಸಮಯ ಬಹಳ ಕಡಿಮೆ. ಅಲ್ಲದೆ ತ್ರಿಪುರಾದಲ್ಲಿ ನಮ್ಮ ಸರ್ಕಾರ ಅಧಿಕಾರದಲ್ಲಿಲ್ಲ. ಆದ್ದರಿಂದ ಚುನಾವಣೆ ಮುಗಿಯುವರೆಗೆ ಮಾತುಕತೆ ಆರಂಭಿಸಲು ಸಮಯ ಪಕ್ವವಾಗಿಲ್ಲ. ಆದರೆ ಚುನಾವಣೆಯ ನಂತರ ನಾವು ಅಧಿಕಾರಕ್ಕೆ ಬರಲಿ, ಬರದಿರಲಿ ರಾಜೀವಗಾಂಧಿ ಮತ್ತು ಬೂಟಾಸಿಂಗ್ ಮಾತುಕತೆ ಆರಂಭಿಸುತ್ತಾರೆ ಎಂದು ನಾನು ನಿಮಗೆ ಆಶ್ವಾಸನೆ ನೀಡಬಲ್ಲೆ'.

ಈ ಪತ್ರದ 20 ದಿನಗಳ ನಂತರವೇ ಅಂದರೆ ಡಿಸೆಂಬರ್ 26 ರಂದು ಮಾತ್ರವೇ ತ್ರಿಪುರಾ ವಿಧಾನಸಭಾ ಚುನಾವಣೆಗಳ ಅಧಿಸೂಚನೆ ಹೊರಡಿಸಲಾಯಿತು.

ಚುನಾವಣೆಯ ದಿನಾಂಕ ತಿಳಿಯಪಡಿಸಿದ ಮೂರೇ ದಿನಗಳಲ್ಲಿ ಅಂದರೆ ಡಿಸೆಂಬರ್ 29 ರಿಂದ ಈ ರೀತಿ ಕಾಂಗ್ರೆಸ್ (ಐ) ನಿಂದ ಆಶ್ವಾಸನೆ ಪಡೆದದ್ದರಿಂದಲೇ ಟಿ.ಎನ್.ವಿ. ಭಯೋತ್ಪಾದಕರು ಎಡರಂಗದ ಹೆಸರು ಕೆಡಿಸಲು ಸಾಮೂಹಿಕ ಕೊಲೆಗಡುಕತನ ಆರಂಭಿಸಿದರೆಂಬುದು ಸ್ಪಷ್ಟ.

ರಾಜೀವ್‌ಗಾಂಧಿ ತ್ರಿಪುರದಲ್ಲಿ ಚುನಾವಣಾ ಪ್ರಚಾರಕ್ಕೆ ಬಂದಾಗ ಸಿ.ಪಿ.ಐ (ಎಂ) ಟಿ.ಎನ್.ವಿ.ಯೊಂದಿಗೆ ಶಾಮೀಲಾಗಿದೆ ಎಂದು ಆಪಾದಿಸಿ ತಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಟಿ.ಎನ್.ವಿ. ಯನ್ನು ಅಳಿಸಿಬಿಡುವುದಾಗಿ ತ್ರಿಪುರಾ ಜನತೆಗೆ ಭರವಸೆ ನೀಡುತ್ತಿದ್ದಾಗಲೇ ಜನತೆಯ ಬೆನ್ನ ಹಿಂದೆ ಟಿ.ಎನ್.ವಿ. ಯೊಂದಿಗೆ ಕಾಂಗ್ರೆ ಕೇಂದ್ರ ಸರ್ಕಾರ ಅ ನೀತಿಯುತ ವ್ಯವಹಾರ ಕುದುರಿಸಿಕೊಳ್ಳುತ್ತಿತ್ತು ಎಂಬುದೂ ಅಷ್ಟೇ ಸ್ಪಷ್ಟ.

ತ್ರಿಪುರಾವನ್ನು ಗಲಭೆ ಪೀಡಿತ ಪ್ರದೇಶವೆಂಬ ಘೋಷಣೆ ಹಾಗೂ ಚುನಾವಣೆಯ ಮುನ್ನಾದಿನ ಸೈನ್ಯ ಕಳುಹಿಸಿದ ಕಾನೂನು ಬಾಹಿರ ಕ್ರಮಗಳ ಆಧಾರ ಈ ದುಷ್ಟ ವ್ಯವಹಾರವೇ.

ಸಿ.ಪಿ.ಐ.(ಎಂ) ಪ್ರಧಾನ ಕಾರ್ಯದರ್ಶಿ ಇ. ಎಂ. ಎಸ್. ನಂಬೂದಿರಿಪಾಡ್ ಸೆಪ್ಟಂಬರ್ 19ರಂದು ಒಂದು ಹೇಳಿಕೆ ನೀಡಿ ಈ ಹೀನ ಪಿತೂರಿಯನ್ನು ಖಂಡಿಸಬೇಕೆಂದು ಎಲ್ಲಾ ವಿರೋಧ ಪಕ್ಷಗಳಲ್ಲಿ ಹಾಗೂ ಪ್ರಜಾಪ್ರಭುತ್ವ ವಾದಿಗಳಲ್ಲಿ ಮನವಿ ಮಾಡಿಕೊಂಡಿದ್ದಾರೆ. ರಾಜೀವ ಗಾಂಧಿ ಹಾಗೂ ಕಾಂಗ್ರೆಸ್ (ಐ) ಮುಖಂಡತ್ವ ಈ ಮೂರು ಪತ್ರಗಳ ಒಗ್ಗೆ ದೇಶಕ್ಕೆ, ಜನತೆಗೆ ಉತ್ತರ ನೀಡಬೇಕು ಎಂದೂ ಇ.ಎಂ.ಎಸ್. ಒತ್ತಾಯಿಸಿದ್ದಾರೆ.

ಸ್ವಾರ್ಥಿ ಮುಖಂಡರ ಕೃತ್ಯ

(1ನೇ ಪುಟದಿಂದ)

ಈ ಅಮಾನುಷ ಕೃತ್ಯಕ್ಕೆ ಸ್ಥಳೀಯ ಮುಖಂಡರ ಸ್ವಾರ್ಥವೂ ಸೇರಿದೆ. ಸಿಖ್ ಗುರುದ್ವಾರ ಸಮಿತಿ ಮೆಡಿಕಲ್ ಕಾಲೇಜ್ ಪ್ರಾರಂಭಿಸುವ ಸಲುವಾಗಿ ಸರಕಾರಕ್ಕೆ ಮನವಿ ಸಲ್ಲಿಸಿದ ನಂತರ ಸ್ಥಳೀಯ ಕಾಂಗ್ರೆ ಮುಖಂಡರು, ಮೆಡಿಕಲ್ ಕಾಲೇಜಿಗೆ ಅರ್ಜಿ ಸಲ್ಲಿಸಿದ್ದರು. ಈ ದಂಗೆಗೂ ಹೊಸ ಮೆಡಿಕಲ್ ಕಾಲೇಜಿನ ಬೇಡಿಕೆಗೂ ನೇರ ಸಂಬಂಧವಿದೆಂದರೆ ತಪ್ಪೇನಿಲ್ಲ.

ಇದರ ಜೊತೆಯಲ್ಲಿಯೇ ದಂಗೆ ನಡೆದಾಗ ಬ್ಯಾಂಕ್ ಲೂಟಿ ಮಾಡುವ ಪ್ರಯತ್ನವೂ ನಡೆದಿರುವುದನ್ನು ನೋಡುವಾಗ ಈ ಅತ್ಯಾಚಾರದ ಒಳಸಂಚು ಆಳವಾಗಿದೆಂಬುದನ್ನು ಸ್ಪಷ್ಟಪಡಿಸುತ್ತದೆ.

ಈ ದಂಗೆಯಲ್ಲಿ ಸ್ಥಳೀಯ ಪೊಲೀಸ್ ಅಧಿಕಾರಿಗಳ ಕೈವಾಡವಿರುವುದು ಸ್ಪಷ್ಟವಾಗಿ ಎದ್ದು ಕಾಣುತ್ತಿದೆ. ಕಳೆದ ಹಲವು ತಿಂಗಳಿಂದಲೂ ಸಿಖ್‌ರ ವಿರುದ್ಧ ದ್ವೇಷ ಬೆಳೆಯುತ್ತಿದೆಂದು ಪೊಲೀಸರಿಗೆ ಗೊತ್ತು. ದಂಗೆ ನಡೆದ ದಿವಸ ವಿದ್ಯಾರ್ಥಿಗಳ ಕೊಲೆ ನಡೆದಾಗ, ಅಂಗಡಿ ಮನೆಗಳ ಲೂಟಿ ನಡೆಯುತ್ತಿರುವಾಗ, ಬೆಂಕಿ ಹಚ್ಚುತ್ತಿರುವಾಗ ಪೊಲೀಸರು ಏನೂ ಗೊತ್ತಿಲ್ಲದವರಂತೆ ವರ್ತಿಸಿರುವುದು ಸ್ಪಷ್ಟವಾಗಿದೆ ಎಂದು ಮುಂದುವರಿದು ಅವರು ಹೇಳಿದರು.

ಪರಿಸ್ಥಿತಿ ಗಂಭೀರವಾಗಿದ್ದರೂ ನಿರಪರಾಧಿ ವಿದ್ಯಾರ್ಥಿಗಳ ಕೊಲೆಯನ್ನೂ ಆಸ್ತಿಯ ಹಾನಿಯನ್ನೂ, ಲೂಟಿಯನ್ನೂ ತಡೆಯುವಲ್ಲಿ ವಿಫಲಗೊಂಡ ಬೀದರ ಪೊಲೀಸ್ ಅಧಿಕಾರಿಯನ್ನು ಕೂಡಲೇ ಸಸ್ಪೆಂಡ್ ಮಾಡಬೇಕೆಂದೂ, ಸಿಖ್‌ರಿಗೆ ಪೂರ್ಣ ರಕ್ಷಣೆ ನೀಡಬೇಕೆಂದೂ, ದಂಗೆಗೆ ಕಾರಣಾಂದವರಿಗೆ ಕಠಿಣ ಶಿಕ್ಷೆಯಾಗಬೇಕೆಂದು ಸಿಪಿಐ(ಎಂ) ರಾಜ್ಯ ಸಮಿತಿ ಸರ್ಕಾರವನ್ನು ಒತ್ತಾಯಿಸುತ್ತಾ ಹಾನಿಯಾದವರಿಗೆ ಸರಿಯಾದ ಪರಿಹಾರ ನೀಡಬೇಕೆಂದು ಕೇಳಿಕೊಂಡಿದೆ. ದಂಗೆ ನಡೆದಾಕ್ಷಣ ರಾಜ್ಯದ ಮುಖ್ಯಮಂತ್ರಿಯವರು ಬೀದರ್‌ಗೆ ಭೇಟಿ ನೀಡದಿರುವುದನ್ನು ಖಂಡಿಸಿ ಅದೇ ವೇಳೆ ಈ ವಿಷಯದಲ್ಲಿ ನ್ಯಾಯಾಂಗ ತನಿಖೆ ನಡೆಸಲು ತೀರ್ಮಾನ ಮಾಡಿದುದನ್ನು ಪಕ್ಷವು ಸ್ವಾಗತಿಸಿದೆ.

Printed & Published by P. Ramachandra Rao on behalf of the Communist Party of India (Marxist) Karnataka State Committee, K. V. Temple Street Sulthanpet, Bangalore-560053. Editorial and Managerial Office ; L-56, K. V. Temple Street, Sulthanpet, B-53, Phone ; 75331. Editor ; P. Ramachandra Rao, Managing Editor ; N. K. Upadhayaya. Janagere Mudrana, Bangalore-21.